www.buntsanghablr.com
ಫೆಬ್ರವರಿ 2018 ಸಂಪುಟ 14 ಸಂಚಿಕೆ 2

# ಸ್ನೇಹ ಚಿಂತನೆ


## ಮಾಸ ಪತ್ರಿಕೆ


ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ 18ನೇ ವಾರ್ಷಿಕೋತ್ಸವ


ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ



'ಯುವೈಕ್ಯ' ರಾಷ್ಟ್ರೀಯ ಯುವ ಬಂಟರ ಸಮಾವೇಶ ಉದ್ಘಾಟನೆ




ಮಹಿಳಾ ವಿಭಾಗ - 'ರಜತ ಸಂಭ್ರಮ' ಉದ್ಘಾಟನೆ ಮತ್ತು ಸ್ಮರಣ ಸಂಚಿಕೆ ಬಿಡುಗಡೆ

BUNTS' SANGHA BANGALORE
(A Charitable Institution)
324, Chord Road, Vijayanagar, Bengaluru - 560 040.
P : 080 - 2339 9323 / 2339 9635 E: info@buntsanghablr.com

ಸಂಚಿಕೆ ಬೆಲೆ ರೂ. 1/-




ADVT

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 14** **FEBRUARY 2018** **ISSUE 02**

**ಸಾಹಿತ್ಯ - ಪ್ರಕಾಶನ ಸಮಿತಿ**

ಅಧ್ಯಕ್ಷರು :
**ಎಸ್. ಅಶೋಕ್‌ಕುಮಾರ್ ಶೆಟ್ಟಿ**

ಗೌ॥ ಸಂಪಾದಕರು:
**ರವಿರಾಜ್ ಎಸ್. ಶೆಟ್ಟಿ**

ಸಲಹಾ ಮಂಡಳಿ:
**ಶ್ರೀ ಬಿ.ಎಲ್.ಎನ್. ಹೆಗ್ಡೆ**
**ಶ್ರೀ ಎ. ಗಿರೀಶ್ ರೈ**
**ಶ್ರೀ ಎಂ. ರತ್ನಾಕರ್ ಶೆಟ್ಟಿ**
**ಶ್ರೀ ಸಂತೋಷ್ ಶೆಟ್ಟಿ**

ಸಂಪಾದಕ ಮಂಡಳಿ:
**ಶ್ರೀ ಎನ್. ಗೋಪಾಲ ಶೆಟ್ಟಿ**
**ಶ್ರೀ ಚಂದ್ರಶೇಖರ್ ಆಳ್ವ**
**ಶ್ರೀ ಪ್ರಕಾಶ್ ಶೆಟ್ಟಿ. ಎಂ**
**ಶ್ರೀಮತಿ ರಾಜಶ್ರೀ. ಕೆ. ಶೆಟ್ಟಿ**

ಪೋಷಕ ಸದಸ್ಯರು:
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು
**ಸಂತೋಷ್ ಶೆಟ್ಟಿ. ಜೆ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕ**

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌ॥ ಕಾರ್ಯದರ್ಶಿ ವರದಿ | 4 |
| 4. | ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 18ನೇ ವಾರ್ಷಿಕೋತ್ಸವ ಸಮಾರಂಭ | 6 |
| 5. | ರಾಷ್ಟ್ರೀಯ ಯುವ ಬಂಟರ ಸಮಾವೇಶ | 8 |
| 6. | ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಾಂಸ್ಕೃತಿಕ ಮತ್ತು ಕ್ರೀಡಾ ದಿನಾಚರಣೆಯ ವರದಿ | 10 |
| 7. | BSRNSV Republic Day | 12 |
| 8. | ಇವರು ನಮ್ಮವರು – ರವಿರಾಜ್ ಹೆಗ್ಡೆ | 13 |
| 9. | ವೇಗ ಓದು–ಬಗೆ ಹೇಗೆ? | 15 |
| 10. | ಹಿರಿಯ ನಾಗರೀಕರ ಸ್ನೇಹಿ ಕರ್ನಾಟಕ: ನಮ್ಮ ಗುರಿ | 16 |
| 11. | ಮದ್ವಾಚಾರ್ಯರು (ಕ್ರಿಸ್ತ ಶಕ 1238–ಕ್ರಿಸ್ತ ಶಕ 1317) | 18 |
| 12. | ಡಾ। ಇಂದಿರಾ ಹೆಗ್ಗಡೆ – ಪುಸ್ತಕ ಲೋಕಾರ್ಪಣೆ | 21 |
| 13. | ಮನುಷ್ಯ ಸ್ವಭಾವಗಳ ವೈವಿಧ್ಯತೆಗಳು | 31 |
| 14. | ಯುವ ಜನಾಂಗ ಮತ್ತು ಸಾಮಾಜಿಕ ಜವಾಬ್ದಾರಿಗಳು | 34 |
| 15. | What is the Secret of Life? | 36 |
| 16. | Matrimonial Services | 45 |

**ಮುಖಪುಟ**

**ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ವಾರ್ಷಿಕೋತ್ಸವ**
**'ಯುವೈಕ್ಯ' ರಾಷ್ಟ್ರೀಯ ಯುವ ಬಂಟರ ಸಮಾವೇಶ**
**ಸ್ಥಾಪಕರ ದಿನಾಚರಣೆ**
**ಮಹಿಳಾ ವಿಭಾಗ - ರಜತ ಸಂಭ್ರಮ**



# ಸಂಪಾದಕೀಯ

ಬಂಟರ ಸಂಸ್ಕೃತಿಯ ಪುನರುತ್ಥಾನ, ಕಡಲತಡಿಯಿಂದ ಉದ್ಯೋಗ–ವ್ಯಾಪಾರಕ್ಕಾಗಿ ರಾಜಧಾನಿ ಸೇರಿರುವ ಪೀಳಿಗೆಗೆ ಸಂಸ್ಕೃತಿ–ಪರಂಪರೆಯ ಸೊಗಡು ಉಳಿಯಬೇಕು, ಸಮಾಜದ ಸಂಬಂಧಗಳು ಶಿಥಿಲವಾಗುತ್ತಿರುವ ಹಿನ್ನೆಲೆಯಲ್ಲಿ ಬಂಟ ಸಂಸ್ಕೃತಿಯ ಜೀವಾಳವಾದ ಮಧುರ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಬೇಕು ಎಂಬ ಆಶಯದಿಂದ ಜನಾಂಗದ ಗಣ್ಯರು ಕಟ್ಟಿ ಬೆಳೆಸಿದ ಬೆಂಗಳೂರು ಬಂಟರ ಸಂಘಕ್ಕೆ ಇದೀಗ ವಜ್ರ ಮಹೋತ್ಸವದ ಸಂಭ್ರಮ. ಕೇವಲ 31 ಸದಸ್ಯರಿಂದ ಆರಂಭವಾದ ಸಂಘದ ಸದಸ್ಯರ ಸಂಖ್ಯೆ ಇದೀಗ ಹನ್ನೆರಡು ಸಾವಿರ ದಾಟಿದೆ. ಸಮಾಜದ ಉನ್ನತ ಸ್ಥಾನಗಳಲ್ಲಿರುವವರು ತಮ್ಮದೇ ಸಮಾಜದ ಆಶಕ್ತರಿಗೆ ಸಹಾಯಹಸ್ತ ಚಾಚಲು ವೇದಿಕೆಯಾಗಬೇಕು; ಸಮಾಜದ ಬಡಪ್ರತಿಭೆಗಳ ಭವಿಷ್ಯಕ್ಕೆ ನೆರವು ನೀಡುವ ದೀವಿಗೆಯಾಗಬೇಕು, ರಾಜಧಾನಿಯ ಮೂಲೆ ಮೂಲೆಯಲ್ಲಿರುವ ಬಂಟ ಸಮುದಾಯದವರು ಕಷ್ಟ–ಸುಖಗಳನ್ನು ಹಂಚಿಕೊಳ್ಳುವ ವೇದಿಕೆಯಾಗಬೇಕು ಎಂಬ ದಿವ್ಯ–ಉದಾತ್ತ ಆಶಯ ಇದೇ ಪಥದಲ್ಲಿ ಮುಂದುವರಿಯುವಂತೆ ನೋಡಿಕೊಳ್ಳುವುದು ಸ್ವಾಭಿಮಾನಿ ಬಂಟ ಸಮುದಾಯದ ಎಲ್ಲರ ಹೊಣೆ.

ಸಂಘದ ಆಡಳಿತ ಚುಕ್ಕಾಣಿ ಹಿಡಿಯಲು ಹೊಸ ನೀರು ಹರಿಯುತ್ತಿರುವುದು ಉತ್ತಮ ಬೆಳವಣಿಗೆ. ಇದು ಚಲನಶೀಲತೆಯ ಸಂಕೇತ. ಆದರೆ ಈ ಅತ್ಯುತ್ಸಾಹ ಪ್ರವಾಹವಾಗಿ ಸಂಘದ ಪ್ರತಿಷ್ಠೆ, ಗೌರವ, ಪರಂಪರೆಯನ್ನು ಕೊಚ್ಚಿಕೊಂಡು ಹೋಗಬಾರದು ಎಂಬ ಪ್ರಜ್ಞಾಪೂರ್ವಕ ಕಳಕಳಿ ಕೂಡಾ ಅಷ್ಟೇ ಮುಖ್ಯ. “ಹಳೆ ಬೇರು ಹೊಸ ಚಿಗುರು ಸೇರಿರಲು ಮರ ಸೊಬಗು” ಎಂಬ ಕವಿವಾಣಿ ಇಲ್ಲಿ ಹೆಚ್ಚು ಪ್ರಸ್ತುತ.

ಪ್ರತಿ ಎರಡು ವರ್ಷಗಳಿಗೊಮ್ಮೆ ಸಂಘದ ಚುನಾವಣೆ ಮತ್ತೆ ಬರುತ್ತಿದೆ. ಹಿಂದೆ ಸಂಘ ಕಟ್ಟಿ ಬೆಳೆಸಬೇಕಾದ ಸಂದರ್ಭ ಸಂಘದ ಜವಾಬ್ದಾರಿ ಹೊರಲು ಒತ್ತಾಯದಿಂದ ಹೊಣೆಗಾರಿಕೆ ಹೆಗಲಿಗೆ ಹೊರಿಸುವ ದಿನಗಳಿದ್ದವು. ಆದರೆ ಇಂದು ಸಂಘ ಬೃಹತ್ ಆಗಿ ಬೆಳೆದು ಫಲ ನೀಡುವ ಹೆಮ್ಮರ. ಸಂಘದ ಅಧಿಕಾರದ ಚುಕ್ಕಾಣಿ ಹಿಡಿಯಲು ನಾ ಮುಂದು– ತಾ ಮುಂದು ಎಂಬ ಪೈಪೋಟಿಯ ಪರಿಸ್ಥಿತಿ. ಆದರೆ ಈ ಸ್ಪರ್ಧೆ ಆರೋಗ್ಯಕರವಾಗಿದ್ದರಷ್ಟೇ ಸಂಘಕ್ಕೆ ಹಿತ; ಸಮಾಜಕ್ಕೆ ಗೌರವ.


ಇತ್ತೀಚಿನ ವರ್ಷಗಳಲ್ಲಿ ಸಂಘದ ಚುನಾವಣೆಗಳನ್ನು ನೋಡಿದರೆ ಸಂಘದ ಬಗ್ಗೆ ನೈಜ ಕಳಕಳಿ ಇರುವ ಪ್ರತಿಯೊಬ್ಬರೂ ಕಳವಳ ಉಂಟಾಗುವ ಸ್ಥಿತಿ. ಸಂಘದ ಚುನಾವಣೆಗೆ ಇನ್ನೂ ನಾಲ್ಕೈದು ತಿಂಗಳು ಇದ್ದರೂ ತೆರೆಮರೆಯ ಕಸರತ್ತು, ಚುನಾವಣೆ ಮಸಲತ್ತುಗಳು ಈಗಾಗಲೇ ಆರಂಭವಾಗಿವೆ. ರಾಜಕಾರಣಿಗಳನ್ನೂ ನಾಚಿಸುವ ರೀತಿಯಲ್ಲಿ ಓಲೈಕೆ, ಆಮಿಷಗಳು,  ಗುಂಪುಗಾರಿಕೆ, ಅನಾರೋಗ್ಯಕರ ಪೈಪೋಟಿ ನಮ್ಮ ಸಮಾಜಕ್ಕೆ ಶೋಭೆ ತರುವಂಥದ್ದಲ್ಲ.

ಸಂಘದ ಚುನಾವಣೆಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ, ಅದನ್ನು ಒಣ ಪ್ರತಿಷ್ಠೆಯಾಗಿ ಮಾಡಿಕೊಳ್ಳುವ ಅಗತ್ಯವಿದೆಯೇ? ಹೇಳಿ ಕೇಳಿ ಸಂಘದ ಎಲ್ಲ ಪದಾಧಿಕಾರಿಗಳದ್ದು ಗೌರವ ಹುದ್ದೆ. ಯಾವ ಲಾಭವೂ ಇಲ್ಲದ್ದು. ನಿಸ್ವಾರ್ಥ ಸೇವೆಗೆ, ಸಮಾಜ ಸಂಘಟನೆಯ ಮನಸ್ಸು ಹೊಂದಿರುವವರಲ್ಲಿ ಇಂಥ ಈರ್ಷ್ಯೆ, ಪೈಪೋಟಿ ಬೇಕೇ ಎಂಬ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಳ್ಳಬೇಕು. ಬೆರಳೆಣಿಕೆಯ ಮಂದಿಯ ಪ್ರತಿಷ್ಠೆಗಾಗಿ ನಮ್ಮ ನಮ್ಮಲ್ಲೇ ಪರಸ್ಪರರನ್ನು ಎತ್ತಿ ಕಟ್ಟುವ ರಾಜಕೀಯ ಮಾಡುವವರ ಸ್ವಾರ್ಥದಿಂದ ಸಂಘದ ಸ್ವಾಸ್ಥ್ಯ ಹಾಳಾಗದಂತೆ ಉಳಿಸಬೇಕಾದುದು ನಮ್ಮ ಕರ್ತವ್ಯ.  ಸಮಾಜ ಸಂಘಟನೆಯ ಉದ್ದೇಶ ಸಂಘದ್ದು. ಆದರೆ ಚುನಾವಣೆ ಹೆಸರಿನಲ್ಲಿ ಸಮಾಜದಲ್ಲೇ ಒಡಕು–ವೈಮನಸ್ಸು ಬೆಳೆಯಬೇಕೇ? ಇದು ನಮ್ಮ ಘನತೆಗೆ ಶೋಭೆಯೇ? ಸಂಘದ ಪ್ರತಿಯೊಬ್ಬ ಸದಸ್ಯರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಸಂದರ್ಭ ಇದು. ಸಮಾಜದ ಹಿರಿಯರು ಹಾಕಿಕೊಟ್ಟ ಆದರ್ಶ ಮಾರ್ಗ ನಮಗೆ ದಾರಿದೀಪವಾಗಬೇಕಿದೆ.

**ಎಲ್ಲರಿಗೂ ಮಹಾ ಶಿವರಾತ್ರಿಯ ಶುಭಾಶಯಗಳು.**

ವಂದನೆಗಳೊಂದಿಗೆ,

**ರವಿರಾಜ್ ಎಸ್. ಶೆಟ್ಟಿ**
Email: ravidani6@gmail.com



# ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ,

ಬಂಟರ ಸಂಘ ಬೆಂಗಳೂರು ತನ್ನ ಕ್ರಿಯಾಶೀಲ ಹಾಗೂ ಚಿಂತನ ಶೀಲ ಉಪಸಮಿತಿಗಳ ಮುಖೇನ ಸಮಾಜಮುಖಿ ಕಾರ್ಯಕ್ರಮಗಳಿಗೆ ಒತ್ತು ನೀಡಿ ನಿರಂತರ ಚಟುವಟಿಕೆಗಳೊಂದಿಗೆ ಕಳೆದ ಸಾಲಿನಲ್ಲಿ ವಿಜೃಂಭಿಸಿದೆ. ವಿಶೇಷವಾಗಿ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ಸದಸ್ಯರು ಹಾಗೂ ಸದಸ್ಯೇತರ ಬಂಧುಗಳಿಗೆ ವಾರ್ಷಿಕ ಉತ್ಸವದ ತೆರದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆದು ಬರುತ್ತಿರುವುದು ಬಂಟ ಬಂಧುಗಳಿಗೆ ಹೆಮ್ಮೆಯ ವಿಚಾರ.

ಜನವರಿ 26 ಬಂಟರ ಸಂಘದ ಇತಿಹಾಸದಲ್ಲಿ ಬಹಳ ಪ್ರಾಮುಖ್ಯವೂ ಪವಿತ್ರವೂ ಆದ ದಿನ. ನಮ್ಮ ಸಂಘದ ಸಭಾಂಗಣ ಉದ್ಘಾಟನೆಗೊಂಡ ದಿನವನ್ನು ಆ ನಂತರ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡೆ ಮತ್ತು ಸಾಂಸ್ಕೃತಿಕ ದಿನವನ್ನಾಗಿ ಆಚರಿಸಿ, ಸದಸ್ಯ ಬಾಂಧವರನ್ನು ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಲ್ಲಿ ಪ್ರೇರೇಪಿಸಲಾಗುತ್ತಿದೆ.

ಯುವ ವಿಭಾಗದ ಯುವ ತರುಣರು ಔದ್ಯೋಗಿಕ ಹಾಗೂ ಸಂಪನ್ನತೆಯ ದೃಷ್ಟಿಕೋನಗಳಿಗೆ ಒತ್ತು ನೀಡಿ ಕಾರ್ಯಕ್ರಮ ಸಂಯೋಜನೆಗೊಳಿಸಿ ಸಂಚಲನ ಮೂಡಿಸಿದರು. ಕಾರ್ಯಕ್ರಮಗಳನ್ನು ಪಟ್ಟಿ ಮಾಡುತ್ತಾ ಹೋದಾಗ ಸಮಾಜ ಸೇವಾ ವಿಭಾಗ ನಡೆಸಿಕೊಟ್ಟ ಸುಜೊಕ್ ಕಾರ್ಯಕ್ರಮ ಉಪಯುಕ್ತ ಪ್ರಯೋಗವೇ ಸರಿ.

ಇಪ್ಪತ್ತೈದನೇ ಸಂವತ್ಸರದ ಆಚರಣೆಯೊಂದಿಗೆ ಮಹಿಳಾ ವಿಭಾಗ ಬೆಳ್ಳಿ ಹಬ್ಬದ ಕಂಪನ್ನು ಪಸರಿಸುವಲ್ಲಿ ಯಶಸ್ವಿಯಾಯಿತು. ಕಿರು ಜಾಜಿ ಸೊಗ ನೀಡದೆ ಎಂಬ ಮಾತಿದೆ. ಹಾಗೆಯೇ ದೊರೆತ ಅಲ್ಪ ಕಾಲಾವಧಿಯಲ್ಲಿ ಸಂಘದ ಚಟುವಟಿಕೆಗಳಿಗೆ ಚ್ಯುತಿ ಬರದ ಹಾಗೆ ಹೊಸತನದ ಹುಡುಕಾಟಕ್ಕಾಗಿ ಹಾತೊರೆದು ಕಾರ್ಯ ನಿರ್ವಹಿಸಿದ ಧನ್ಯತಾ ಭಾವ ಒಂದೆಡೆಯಾದರೆ, ವಿದ್ಯಾರ್ಥಿ ವೇತನ, ಕರಿಮಣಿ ಭಾಗ್ಯ, ಜೀವನಕ್ಕಾಗಿ ಕಾಮಧೇನು ಯೋಜನೆ, ಟೈಲರಿಂಗ್ ಯಂತ್ರ ವಿತರಣೆ, ನೊಂದ ಆಶಕ್ತರಿಗೆ ನೆರವು ಹೀಗೆ ಸಮಾಜಮುಖಿ ಚಿಂತನೆ ನಿರಂತರ ನಡೆದಿದೆ.

ಹಲವಾರು ಸಂಘಗಳಿಂದ ಬಂದ ನೆರವು ಕೋರಿ ಮನವಿಗಳನ್ನು ಮನ್ನಿಸಿ ಸಹಾಯಹಸ್ತವನ್ನು ಚಾಚಿರುತ್ತೇವೆ. ಹೊಸದಾಗಿ ಸದಸ್ಯರ ಸೇರ್ಪಡೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ದಾಖಲೆ ರೂಪದಲ್ಲಿ ನಡೆದಿದೆ. ವಿಶೇಷವಾಗಿ ಸಂಘದ ಕಾರ್ಯಕ್ರಮಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಭಾಗವಹಿಸುತ್ತಿರುವುದು ಸಂತಸದ ವಿಚಾರ.

ಕೆಲವೊಂದು ಪ್ರಶ್ನೆಗಳು ಉದ್ಭವಿಸುವುದು ಸಾಮಾನ್ಯ. ನೀವು ಏನು ಮಾಡಿದ್ದೀರಿ? ಸಂಘವನ್ನು ನಡೆಸಿಕೊಂಡು ಹೋಗುವುದು ಜವಾಬ್ದಾರಿಯುತ ಹೊಣೆಗಾರಿಕೆ. ಸಮಸ್ಯೆಗಳ ಪರಿಹಾರ, ಸಭೆ ಸಮಾರಂಭಗಳ ನಿರ್ಧಾರ, ಶಾಲಾ ಆಡಳಿತ ಎಲ್ಲಾ ಜವಾಬ್ದಾರಿಗಳು ಚುನಾಯಿತ ಪ್ರತಿನಿಧಿಗಳ ಕರ್ತವ್ಯ.

ನಮ್ಮ ಗುರಿ, ವಿವೇಚನೆ, ಚಿಂತನೆ ನೆನೆದಂತೆ ಕೈಗೂಡಬೇಕಾದಲ್ಲಿ ಸಾಕಷ್ಟು ಸಮಯಾವಕಾಶ ಬೇಕಾಗುತ್ತದೆ. ದೊರೆತ ಅಲ್ಪಾವಧಿಯಲ್ಲಿ ಪ್ರಯತ್ನಗಳು ನಿರಂತರ ನಡೆದೇ ಇದೆ. ಪ್ರಗತಿ, ಅಭಿವೃದ್ಧಿ ನಿರಂತರ ಪರಿಶ್ರಮದಿಂದ ಮಾತ್ರ ಸಾಧ್ಯ. ಅದೊಂದು ತೊರೆ–ಹರಿಯುತ್ತಿರಲೇ ಬೇಕು. ಸಮಾಜ ಸೇವೆ, ಕ್ರೀಡೆ ನಿತ್ಯ ನಿರಂತರ ನಡೆದೇ ಇದೆ. ದೊರೆತ ಸಮಯದೊಂದಿಗೆ ರಾಜಿ ಮಾಡದೇ ಸಂಘದ ಸೇವೆಯನ್ನು ಮಾಡೋಣ ಎಂಬ ಹಂಬಲದೊಂದಿಗೆ ನಿಮ್ಮೆಲ್ಲರ ಸಹಕಾರದ ನಿರೀಕ್ಷೆಯಲ್ಲಿ,

ನಿಮ್ಮ ಸೇವಾಕಾಂಕ್ಷಿ

**ಚಂದ್ರಹಾಸ ರೈ ಡಿ.**

ಅಧ್ಯಕ್ಷರು



ಗೌ॥ ಕಾರ್ಯದರ್ಶಿ ವರದಿ

# ಗೌರವ ಕಾರ್ಯದರ್ಶಿಗಳ ವರದಿ

ಗೌರವಾನ್ವಿತ ಸದಸ್ಯರೇ,

ಸಂಘದ ವಿವಿಧ ಸಮಿತಿಗಳಿಂದ ಜನವರಿ ತಿಂಗಳಿನಲ್ಲಿ ವಿವಿಧ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು.

ಜನವರಿ 7, 13 ಮತ್ತು 14 ರಂದು ಸಂಘದ ಸಾಂಸ್ಕೃತಿಕ ಸಮಿತಿಯ ವತಿಯಿಂದ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಆವರಣದಲ್ಲಿ ಆಯೋಜಿಸಿದ್ದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯ ಸ್ಪರ್ಧಾಳುಗಳು ಉತ್ಸಾಹದಿಂದ ಭಾಗವಹಿಸಿದ್ದರು.

ಜನವರಿ 13 ಮತ್ತು 14 ರಂದು ಯುವ ವಿಭಾಗದ ವತಿಯಿಂದ ಯುವ ಬಂಟರ ರಾಷ್ಟ್ರೀಯ ಸಮಾವೇಶ 'ಯುವೈಕ್ಯ'ವನ್ನು ಸಂಘದ ಆವರಣದಲ್ಲಿ ಆಯೋಜಿಸಲಾಗಿತ್ತು. ಸಮಾವೇಶದ ಪ್ರಯುಕ್ತ ಬಂಟ್ ಹೆಚ್.ಆರ್.ಮೀಟ್, ಸ್ವಾಮಿ ವಿವೇಕಾನಂದರ ಕುರಿತಾದ ಗೋಷ್ಠಿ, ವಿವಿಧ ಚರ್ಚಾ ಗೋಷ್ಠಿಗಳು, ನಿರ್ಣಯ ಮಂಡನೆ, ಯುವ ಪ್ರತಿಭೆಗಳಿಗೆ ಸನ್ಮಾನ, ಕರಾವಳಿ ವೈಭವ ಮೊದಲಾದ ಕಾರ್ಯಕ್ರಮಗಳು ನಡೆದವು.

ದಿನಾಂಕ 19.01.2018 ರಂದು ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 16 ನೇ ವಾರ್ಷಿಕೋತ್ಸವವನ್ನು ಶ್ರದ್ಧಾ ಭಕ್ತಿಗಳಿಂದ ಆಚರಿಸಲಾಯಿತು. ಪ್ರಸಾದ ಭೋಜನದ ನಂತರ ಸಂಘದ ಸದಸ್ಯ ಹವ್ಯಾಸಿ ಹಾಗೂ ಅತಿಥಿ ಕಲಾವಿದರು ನಡೆಸಿಕೊಟ್ಟ ಗಧಾಯುದ್ದ ಯಕ್ಷಗಾನ ಪ್ರಶಂಸನೀಯವಾಗಿತ್ತು.

ದಿನಾಂಕ 10.01.2018 ರಂದು ನಡೆದ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ನರ್ಸರಿ ವಿಭಾಗದ ವಾರ್ಷಿಕೋತ್ಸವದಲ್ಲಿ ಖ್ಯಾತ ನಟರಾದ ಶ್ರೀ ನಾಗರಾಜ್ ಕೋಟೆ ಹಾಗೂ ಬ್ಯಾಂಕ್ ಜನಾರ್ಧನ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ದಿನಾಂಕ 11.01.2018 ರಂದು ನಡೆದ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ವಿಭಾಗದ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಇಸ್ರೋ ಸಂಸ್ಥೆಯ ಡೆಪ್ಯುಟಿ ಡೈರೆಕ್ಟರ್ ಶ್ರೀ ಆರ್. ಶ್ರೀನಿವಾಸ್ ಹಾಗೂ ಗೌರವ ಅತಿಥಿಗಳಾಗಿ Karnataka Education Service, BEO ಶ್ರೀ ಕೆ.ವಿ. ಲೋಹಿತೇಶ್ವರ ರೆಡ್ಡಿಯವರು ಭಾಗವಹಿಸಿದ್ದರು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯಲ್ಲಿ ದಿನಾಂಕ 26.01.2018 ರಂದು ನಡೆದ 69ನೇ ಗಣರಾಜ್ಯೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಡೆಪ್ಯುಟಿ ರೆಜಿಸ್ಟ್ರಾರ್ ಡಾ॥ ಬಿ.ವಸಂತ್ ಶೆಟ್ಟಿಯವರು ಧ್ವಜಾರೋಹಣ ನೆರವೇರಿಸಿದರು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ವಿದ್ಯಾರ್ಥಿಗಳಿಗಾಗಿ ಸಂಘದ ವೈದ್ಯಕೀಯ ವಿಭಾಗದ ಚೇರ್‌ಮೆನ್ ಶ್ರೀ ಜಗದೀಶ್ ವಿ.ಶೆಟ್ಟಿಯವರ ನೇತೃತ್ವದಲ್ಲಿ ಜನವರಿ ತಿಂಗಳಿನಲ್ಲಿ 3 ದಿನಗಳ ವೈದ್ಯಕೀಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದ್ದು ವಿದ್ಯಾರ್ಥಿಗಳಿಗೆ ದಂತ, ನೇತ್ರ ತಪಾಸಣೆ ಸೇರಿದಂತೆ ಆರೋಗ್ಯ ತಪಾಸಣೆಯನ್ನು ನಡೆಸಲಾಯಿತು.

ಸಂಸ್ಥಾಪಕರ ದಿನಾಚರಣೆಯ ಅಂಗವಾಗಿ ದಿನಾಂಕ 26.01.2018 ರಂದು ವೈದ್ಯಕೀಯ ಸಮಿತಿಯು ಫೋರ್ಟಿಸ್ ಆಸ್ಪತ್ರೆ ಹಾಗೂ ಪೂರ್ಣಸುಧಾ ಬ್ರೆಸ್ಟ್ ಕ್ಯಾನ್ಸರ್ ಸೆಂಟರ್ ಸಹಯೋಗದೊಂದಿಗೆ

ಮಧುಮೇಹ, ಹೃದಯ ತಪಾಸಣೆ ಹಾಗೂ ಮಹಿಳೆಯರಿಗೆ ಸ್ತನ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಆಯೋಜಿಸಿದ್ದು, ಸುಮಾರು 300 ಕ್ಕೂ ಮಿಕ್ಕಿದ ಸದಸ್ಯ ಬಾಂಧವರು ಈ ಉಚಿತ ಶಿಬಿರದ ಪ್ರಯೋಜನವನ್ನು ಪಡೆದರು. ಇದೇ ಸಂದರ್ಭದಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಲಾದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಯಶಸ್ವಿಯಾಗಿ ನಡೆಯಿತು.

ಸಂಜೆ ನಡೆದ ಸಂಘದ ಸಭಾಭವನದಲ್ಲಿ ನಡೆದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯಲ್ಲಿ ಖ್ಯಾತ ಕ್ರೀಡಾ ವೈದ್ಯಕೀಯ ತಜ್ಞ ಡಾ। ಕಿರಣ್ ಕುಲಕರ್ಣಿ ಮುಖ್ಯ ಅತಿಥಿಗಳಾಗಿ ಭಾಗವಸಿದ್ದರು. ಸಂಸ್ಥಾಪಕರ ದಿನದ ಅಂಗವಾಗಿ ಸಾಂಸ್ಕೃತಿಕ ಸಮಿತಿಯ ವತಿಯಿಂದ ಆಯೋಜಿಸಿದ್ದ ಜಾನಪದ, ಶಾಸ್ತ್ರೀಯ, ಫ್ಯೂಷನ್ ನೃತ್ಯ, ಹುಲಿಕುಣಿತ, ಯಕ್ಷಗಾನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ವೀಕ್ಷಕರ ಮೆಚ್ಚುಗೆ ಗಳಿಸಿತು.

ಸಂಘದ ಮಹಿಳಾ ವಿಭಾಗದ ರಜತ ಮಹೋತ್ಸವ ಪ್ರಯುಕ್ತ ದಿನಾಂಕ 03.02.2018 ರಂದು ಆಯೋಜಿಸಿದ್ದ 'ರಜತ ಸಂಭ್ರಮ' ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಮುಖ್ಯ ಅತಿಥಿಗಳಾಗಿ ಮೈಸೂರು ಸಂಸ್ಥಾನದ ರಾಜಮಾತೆ ಡಾ। ಶ್ರೀಮತಿ ಪ್ರಮೋದಾ ದೇವಿ ಒಡೆಯರ್ ಹಾಗೂ ಐಜಿಪಿ ರೂಪಾ ಮೌದ್ಗಿಲ್, ಐ.ಪಿ.ಎಸ್. ಭಾಗವಹಿಸಿದ್ದರು. ಬೆಳ್ಳಿ ಬೆಳಕು ಸ್ಮರಣ ಸಂಚಿಕೆಯನ್ನು ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ಡಾ। ಶ್ರೀಮತಿ ತೇಜಸ್ವಿನಿ ಅನಂತ್‌ಕುಮಾರ್ ಬಿಡುಗಡೆ ಮಾಡಿದರು. ಸಮಾರಂಭದಲ್ಲಿ ವಿವಿಧ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಗೈದ ಮೂವರು ಮಹಿಳೆಯರನ್ನು ಗೌರವಿಸಲಾಯಿತು.

ವಂದನೆಗಳೊಂದಿಗೆ,

**ಸಂತೋಷ್ ಶೆಟ್ಟಿ ಜೆ.**
ಗೌರವ ಕಾರ್ಯದರ್ಶಿ

## ವೈದ್ಯಕೀಯ ಶಿಬಿರ




ದಿನಾಂಕ 26.01.2018 ಭಾನುವಾರದಂದು ಬೆಂಗಳೂರು ಬಂಟರ ಸಂಘದ ಆವರಣದಲ್ಲಿ ವೈದಕೀಯ ವಿಭಾಗದ ಆಶ್ರಯದಲ್ಲಿ ಉಚಿತ ಆರೋಗ್ಯ ಶಿಬಿರವನ್ನು ಸಂಘದ ಸದಸ್ಯರಿಗೆ ಮತ್ತು ಸಾರ್ವಜನಿಕರಿಗಾಗಿ ನಡೆಸಲಾಯಿತು.

ನಗರದ ಫೋರ್ಟಿಸ್ ಆಸ್ಪತ್ರೆ ಮತ್ತು ಸಂಘದ ವೈದ್ಯಕೀಯ ವಿಭಾಗದ ಜಂಟಿ ಸಹಯೋಗ ದೊಂದಿಗೆ ಸುಮಾರು 300 ಜನರು ಉಚಿತ ರಕ್ತ, ಸಕ್ಕರೆ, ತೂಕ, ರಕ್ತದೊತ್ತಡ ಮತ್ತು ಈ.ಸಿ.ಜಿ ಪರೀಕ್ಷೆಗಳನ್ನು ಮಾಡಿಸಿಕೊಂಡರು. ಡಾ. ಚಂದ್ರಶೇಖರ ಶ್ರವಣ –ಸಾಧನ ಸಂಸ್ಥೆಯ ಸಹಕಾರದೊಂದಿಗೆ 300 ಜನರು ಶ್ರವಣ ದೋಷ ಪರೀಕ್ಷೆ ಮಾಡಿಸಿಕೊಂಡರು. ಸುಮಾರು 150 ಮಂದಿ ಸ್ತ್ರೀಯರು ಸ್ತನದ ಅರ್ಬುದ ರೋಗ ಪತ್ತೆ ಪರೀಕ್ಷೆಯ ಪ್ರಯೋಜನ ಪಡೆದುಕೊಂಡರು. ರೆಡ್ ಕ್ರಾಸ್ ಆಶ್ರಯದಲ್ಲಿ ಸುಮಾರು 25–30 ಬಾಟಲ್ ರಕ್ತ ಶೇಖರಿಸಲಾಯಿತು. ಪ್ರಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ ರೈ ಯವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯದರ್ಶಿ ಶ್ರೀ ಸಂತೋಷ ಶೆಟ್ಟಿ ಜಪ್ತಿ, ಖಜಾಂಚಿ ಶ್ರೀ ಆನಂದರಾಮ್ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ರತ್ನಾಕರ ಶೆಟ್ಟಿ, ಶ್ರೀ ರಾಧಾಕೃಷ್ಣ ಶೆಟ್ಟಿ, ಶ್ರೀಮತಿ ಅಮೃತಾ ಶೆಟ್ಟಿ ಹಾಗೂ ಯೋಜನಾ ಸಮಿತಿಯ ಸಂಚಾಲಕರಾದ ಶ್ರೀ ಶಿವಾನಂದ ಶೆಟ್ಟಿ ಟಿ ಎನ್, ಮತ್ತು ಆರೋಗ್ಯ ವಿಮೆ ಸಮಿತಿಯ ಚೇರ್‌ಮೆನ್ ಶ್ರೀ ಪ್ರಶಾಂತ್ ಶೆಟ್ಟಿ ಎಸ್ ಹಾಜರಿದ್ದರು. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

**● ಡಾ. ಜಗದೀಶ ಶೆಟ್ಟಿ**
ಚೇರ್‌ಮೆನ್, ವೈದ್ಯಕೀಯ ವಿಭಾಗ

## ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ

# 18ನೇ ವಾರ್ಷಿಕೋತ್ಸವ ಸಮಾರಂಭ

ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ಪ್ರಾಂಗಣದಲ್ಲಿ 18ನೇ ವಾರ್ಷಿಕೋತ್ಸವವನ್ನು ದಿನಾಂಕ 19.01.2018ನೇ ಶುಕ್ರವಾರದಂದು ವಿಜೃಂಭಣೆಯಿಂದ ಆಚರಿಸಲಾಯಿತು.

ನಮ್ಮ ಸಂಘದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನ ಅನುಗ್ರಹದಿಂದ ನಾವು ಆಯೋಜಿಸಿರುವ ಕೆಲವು ಪ್ರಮುಖ ಕಾರ್ಯಗಳನ್ನು ಈಗಾಗಲೇ ನಿರ್ವಿಘ್ನವಾಗಿ ಪೂರ್ಣಗೊಳಿಸಲಾಗಿದೆ. ಒಂದು ಆಲೋಚನೆ ಹಲವಾರು ಉತ್ತಮ ಕಾರ್ಯಗಳಿಗೆ ಪ್ರೇರಣೆಯಾಗುತ್ತದೆ ಎಂಬುದು ಇದರಿಂದ ವಿದಿತವಾಗುತ್ತದೆ. ಪೂರ್ವಾಹ್ನ 8.00 ಗಂಟೆಗೆ ಫಲ ಪಂಚಾಮೃತ ಅಭಿಷೇಕ, ಗಣಹೋಮ ಇತ್ಯಾದಿ ಪೂಜಾ ಕಾರ್ಯಕ್ರಮ ಗಳೊಂದಿಗೆ ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ್ ರೈ ದಂಪತಿಗಳ ಪೂಜಾ ದೀಕ್ಷೆಯೊಂದಿಗೆ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ಕಟ್ಕೇರೆ ರತ್ನಾಕರ ಶೆಟ್ಟಿ ದಂಪತಿಗಳ ಹಾಗೂ ಸಾವಿರಾರು ಭಕ್ತರ ಉಪಸ್ಥಿತಿಯಲ್ಲಿ ಗಣಹೋಮವನ್ನು ನಡೆಸಲಾಯಿತು.

ಆಬಾಲ ವೃದ್ಧರಾದಿಯಾಗಿ ಪ್ರತಿಯೊಬ್ಬರ ಪೂಜೆಗೂ ಸಂಪ್ರೀತನಾಗುವ ಗಣಪ ಭಕ್ತರ ಅಧಿದೇವರಾ,. ಸಮಕಾಲೀನ ವಿದ್ಯಮಾನಗಳಿಗೆ ಈತ ಹೊಂದಿಕೊಳ್ಳುವಷ್ಟು ಸುಲಭವಾಗಿ ಮತ್ತಾರು ಹೊಂದಿಕೊಳ್ಳಲಾರರು. ಒಟ್ಟಾರೆ ಈತ ಕಲ್ಪನಾತೀತ. ಹೊಸ ವಾಹನ ಖರೀದಿ, ವ್ಯಾಪಾರ ಪ್ರಾರಂಭ, ಗೃಹ ಪ್ರವೇಶ, ಮದುವೆ ಹೀಗೆ ಪ್ರತಿಯೊಂದು ಕಾರ್ಯವೂ ನಿರಾತಂಕವಾಗಿ ನೆರವೇರಲಿ ಎಂದು ಮೊರೆಯಿಡುವುದು ಗಣಪತಿಗೆ.

ಮಧ್ಯಾಹ್ನ 12.00ಗಂಟೆಗೆ ಮಹಾಮಂಗಳಾರತಿ ನಡೆಯಿತು. ಶ್ರೀಮತಿ ಶೋಭ ಜಯರಾಮ ರೈ ಮತ್ತು ತಂಡದವರಿಂದ ಭಜನಾ ಕಾರ್ಯಕ್ರಮವನ್ನು ಏರ್ಪಡಿಸ ಲಾಗಿತ್ತು. ಸುಮಾರು 1600 ಮಂದಿ ಭಕ್ತಾಧಿಗಳಿಗೆ ಅನ್ನಸಂತರ್ಪಣೆಯನ್ನು ನೀಡಲಾಯಿತು.

ಮಧ್ಯಾಹ್ನ 2.30ರಿಂದ ಯಕ್ಷಗಾನ ಸಮಿತಿಯ ಸಂಚಾಲಕರಾದ ಶ್ರೀ ಚಂದ್ರಶೇಖರ್ ಶೆಟ್ಟಿ ಕೊಡ್ಲಾಡಿ ಇವರ ನೇತೃತ್ವದಲ್ಲಿ ಗಧಾಯುದ್ಧ ಯಕ್ಷಗಾನ ಸಂಘದ ಹವ್ಯಾಸಿ ಕಲಾವಿದರು ಹಾಗೂ ಅತಿಥಿ ಕಲಾವಿದರಿಂದ ಪ್ರದರ್ಶನಗೊಂಡು ಜನಮನ ಸೂರೆಗೊಂಡಿತು.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ವಿಶೇಷ ಆಹ್ವಾನಿತರಾಗಿ ಶ್ರೀ ಎಂ. ಕೃಷ್ಣಪ್ಪನವರು ಮಾನ್ಯ ವಸತಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಕರ್ನಾಟಕ ಸರ್ಕಾರ ಮತ್ತು ಶ್ರೀ ಪ್ರಿಯಕೃಷ್ಣ ಶಾಸಕರು ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರ ಇವರು ಭಾಗವಹಿಸಿ ಶ್ರೀ ವರಸಿದ್ಧಿ ವಿನಾಯಕ ದೇವರ ಕೃಪೆಗೆ ಪಾತ್ರರಾದರು. ದೇವಸ್ಥಾನ ಮತ್ತು ಗಣೇಶ ಮೂರ್ತಿಯ ವಿನ್ಯಾಸ ಹಾಗೂ ಮೂರ್ತಿಯ ಪರಿಕಲ್ಪನೆಯನ್ನು ಕಂಡು ಸಂತಸ ವ್ಯಕ್ತಪಡಿಸಿ ಅಲ್ಲಿ ಇದ್ದ ಎಲ್ಲರನ್ನು ಅಭಿನಂದಿಸಿದರು. ಸಚಿವರು ಹಾಗೂ ಶಾಸಕರನ್ನು ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಮ್ಮುಖದಲ್ಲಿ ಹೂವಿನ ಹಾರ ಹಾಕಿ ಶಾಲು ಹೊದಿಸಿ ಪ್ರಸಾದ ನೀಡಿ ಗೌರವಿಸಲಾಯಿತು.

ಸಂಘದ ಮಾಜಿ ಅಧ್ಯಕ್ಷರುಗಳಾದ ಶ್ರೀ ಎಂ.ಟಿ. ರೈ, ಶ್ರೀ ಅಮರನಾಥ ಹೆಗ್ಡೆ, ಶ್ರೀ ಭಗವಾನ್ ದಾಸ್ ರೈ, ಮಾಜಿ ಪದಾಧಿಕಾರಿಗಳು, ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸಂಘದ ಹಾಲಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಭಾಗವಹಿಸಿ ಶ್ರೀ ವರಸಿದ್ಧಿ ವಿನಾಯಕ ದೇವರ ಕೃಪೆಗೆ ಪಾತ್ರರಾದರು.

ಧರ್ಮೋರಕ್ಷತಿ ರಕ್ಷಿತಃ ಯಾರು ಧರ್ಮವನ್ನು ಕಾಪಾಡುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತವೆಯಂತೆ. ಹಾಗೇ ಈ ಬಾರಿ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 18ನೇ ವಾರ್ಷಿಕೋತ್ಸವ ವಿಜೃಂಭಣೆಯಿಂದ ಜರುಗಿ ಬಂಟ ಸಮುದಾಯದ ಜೊತೆಗೆ ನಮ್ಮ ಪರಿಸರದ ಜನತೆ ಸೇರಿಕೊಂಡು ಒಂದು ಉತ್ಸವವೇ ನಡೆಯಿತು ಎಂದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಹಲವಾರು ದಾನಿಗಳು ನಮ್ಮೊಂದಿಗೆ ಕೈ ಜೋಡಿಸಿದ್ದಾರೆ. 1600 ಕ್ಕೂ ಮಿಕ್ಕಿದ ಭಕ್ತಾಧಿಗಳಿಗೆ ಅನ್ನಸಂತರ್ಪಣೆಯ ವ್ಯವಸ್ಥೆಯನ್ನು ಸೇವಾ ಕೈಂಕರ್ಯ ರೂಪದಲ್ಲಿ ನೀಡಿದ ಖ್ಯಾತ ಹೋಟೆಲ್ ಉದ್ಯಮಿ ಹಾಗೂ ಸಂಘದ ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಗೋಪಾಲ ಶೆಟ್ಟಿ ಕೊರ್ಗಿ ದಂಪತಿಗಳಿಗೆ ಅಭಿನಂದನೆಗಳು.

ಈ ದೇವತಾ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಭಕ್ತಾದಿಗಳಿಗೂ ಪ್ರಾರ್ಥನಾ ಮಂದಿರ ಸಮಿತಿಯ ಪರವಾಗಿ ವಂದನೆಗಳು.

**ಶ್ರೀ ಭೋಜರಾಜ ಶೆಟ್ಟಿ ಕೊರ್ಗಿ**
ಸಂಚಾಲಕರು ಪ್ರಾರ್ಥನಾ ಮಂದಿರ ಸಮಿತಿ

**ಶ್ರೀ ಕಟ್ಕೇರೆ ರತ್ನಾಕರ ಶೆಟ್ಟಿ**
ಚೇರ್‌ಮೆನ್, ಪ್ರಾರ್ಥನಾ ಮಂದಿರ ಸಮಿತಿ

## ಸಂಘದ ಚುನಾವಣೆ ಹೇಗಿರಬೇಕು? ನಿಮ್ಮ ಅಭಿಪ್ರಾಯಗಳಿಗೆ ಸ್ವಾಗತ

ಆತ್ಮೀಯ ಸದಸ್ಯ ಬಂಧುಗಳೇ,

ಸಂಘದ ಚುನಾವಣೆಯ ಕಾವು ರಂಗೇರುತ್ತಲಿದೆ. ಪೂರ್ವಭಾವಿ ತಾಲೀಮುಗಳನ್ನು ನೋಡಿದರೆ ಈ ಬಾರಿಯೂ ಅತಿರೇಕಕ್ಕೆ ಹೋಗುವ ಎಲ್ಲಾ ಲಕ್ಷಣಗಳು ಕಾಣುತ್ತಿವೆ. ನಿಮ್ಮ ದೃಷ್ಠಿಯಲ್ಲಿ ಸಂಘದ ಚುನಾವಣೆ ಹೇಗಿರಬೇಕು? ಒಂದು ಸಮಾಜ ಸಂಘಟನೆಯ ಚುನಾವಣೆ ಹೇಗಿದ್ದರೆ ಚೆಂದ. ಸಂಘದ ಚುನಾವಣೆ ಬಗ್ಗೆ ತಮ್ಮ ಅನುಭವ, ಅಭಿಪ್ರಾಯ, ಸಲಹೆಗಳನ್ನು ಸಂಕ್ಷಿಪ್ತವಾಗಿ ಬರೆದು ಕಳುಹಿಸಿ. ಉತ್ತಮವಾದವುಗಳನ್ನು **'ಸ್ನೇಹ ಚಿಂತನೆ'**ಯಲ್ಲಿ ಪ್ರಕಟಿಸಲಾಗುವುದು.

**– ಸಂಪಾದಕ**

### ಸ್ನೇಹ ಚಿಂತನೆಯ ಜಾಹೀರಾತು ದರಗಳು

| | ಪುಟ | ಪ್ರತೀ ಸಂಚಿಕೆಗೆ | 6 ಸಂಚಿಕೆಗೆ | 12 ಸಂಚಿಕೆಗೆ | ಜಾಹೀರಾತಿನ ಅಳತೆ |
|---|---|---|---|---|---|
| 1 | ಒಳ ಪುಟ – ಕಲರ್ | 5000 | 25000 | 45000 | 19.5 x 16 cm |
| 2 | ಒಳ ಪುಟ – ಬ್ಲ್ಯಾಕ್ & ವೈಟ್ | 3000 | 15000 | 25000 | 19.5 x 16 cm |
| 3 | ಅರ್ಧ ಪುಟ – ಬ್ಲ್ಯಾಕ್ & ವೈಟ್ | 1500 | 6000 | 12000 | 9.5 x 16 cm |

ತಮ್ಮ ಜಾಹೀರಾತು ಕೋರಲ್‌ಡ್ರಾ/ಪಿ.ಡಿ.ಎಫ್./ಜೆ.ಪಿ.ಜೆ.ನಲ್ಲಿ ವಿನ್ಯಾಸ ಮಾಡಿ ಸಿ.ಡಿ.ಯಲ್ಲಿ ಅಥವಾ ಸಂಘದ ಇಮೈಲ್: (info@buntsanghablr.com)ಗೆ ಕಳುಹಿಸಬಹುದು.

## ಯುವ ವಿಭಾಗದ ಆಶ್ರಯದಲ್ಲಿ ಯುವೈಕ್ಯ 2018 ಯುವ ಬಂಟರ

# ರಾಷ್ಟ್ರೀಯ ಸಮಾವೇಶದ ಯಶಸ್ವಿ ಆಯೋಜನೆ

**13.01.2018 ಮತ್ತು 14.01.2018**

ದೇಶದ ವಿವಿಧ ಭಾಗಗಳಿಂದ ಯುವ ಬಂಟರನ್ನು ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿವಸದ ಅಂಗವಾಗಿ ಒಂದೆಡೆ ಸೇರಿಸಿ ಪರಸ್ಪರ ಬಾಂಧವ್ಯ ವೃದ್ಧಿಸುವ, ಪರಿಣಿತರಿಂದ ಯುವಕರಿಗೆ ಪೂರಕವಾಗುವ ವಿಷಯಗಳ ಬಗ್ಗೆ ಚರ್ಚೆ ಹಾಗೂ ಸಂವಾದ ನಡೆಸುವ, ಯುವ ಪ್ರತಿಭೆಗಳ ಕಲಾಸಕ್ತಿಗೆ ವೇದಿಕೆ ಕಲ್ಪಿಸುವ ಬಂಟ ಸಮಾಜಕ್ಕೆ ಅಗತ್ಯವಿರುವ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳುವ, ಯುವ ಪುರಸ್ಕಾರ ಹಾಗೂ ಸನ್ಮಾನದ ಮೂಲಕ ಯುವಕರಲ್ಲಿ ಸಾಧನೆ ಮಾಡಲು ಪ್ರೇರೆಪಿಸುವ ಯುವ ಉದ್ಯೋಗಾಕಾಂಕ್ಷಿಗಳಿಗೆ ಉಪಯುಕ್ತ ಮಾಹಿತಿ ಹಾಗೂ ಸಂಪರ್ಕ ಕಲ್ಪಿಸುವ ಹೆಚ್.ಆರ್.ಗಳ ಸಭೆ, ಪರಿಸರ ಉಳಿಸಿ ಜಾಗೃತಿ ಮೂಡಿಸುವ ಛಾಯಾಚಿತ್ರ ಪ್ರದರ್ಶನ, ನಮ್ಮ ಸಂಸ್ಕೃತಿ ಹಾಗೂ ಇತಿಹಾಸದ ಅರಿವು ಮೂಡಿಸುವ ಹುಲಿ ವೇಷ ನೃತ್ಯ ಸಂಗೀತದ ಮೂಲಕ ಮನರಂಜಿಸುವ ಹತ್ತಾರು ಚಟುವಟಿಕೆಗಳಿಗೆ ಯುವೈಕ್ಯ-2018 ಯುವ ಬಂಟರ ರಾಷ್ಟ್ರೀಯ ಸಮಾವೇಶ ಸಾಕ್ಷಿಯಾಯಿತು.

ಉದ್ಘಾಟನಾ ಕಾರ್ಯಕ್ರಮ: 13-1-2018ರ ಸಂಜೆ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯದ ಮಾನ್ಯ ಗೃಹ ಮಂತ್ರಿಗಳಾದ ಶ್ರೀ ರಾಮಲಿಂಗಾ ರೆಡ್ಡಿಯವರು, ಮುಂಬೈ ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಪದ್ಮನಾಭ ಎಸ್ ಪಡೆಯವರು, ಬಂಟರ ಯಾನೆ ನಾಡವರ ಮಾತೃ ಸಂಘದ ಮಹಿಳಾ ಅಧ್ಯಕ್ಷೆಯಾದ ಡಾ| ಆಶಾ ಜ್ಯೋತಿ ರೈಯವರು, ಉದ್ಯಮಿಗಳಾದ ಶ್ರೀ ಉದಯ ಕುಮಾರ್ ಹೆಗ್ಡೆ, ಹರೀಶ್ ಶೆಟ್ಟಿ ಹಾಗೂ ಉಪೇಂದ್ರ ಶೆಟ್ಟಿಯವರು ಅತಿಥಿಗಳಾಗಿ ಆಗಮಿಸಿದ್ದರು. ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಡಿ. ಚಂದ್ರಹಾಸ್ ರೈಯವರು, ಗೌ| ಕಾರ್ಯದರ್ಶಿಗಳಾದ ಶ್ರೀ ಸಂತೋಷ್ ಶೆಟ್ಟಿಯವರು, ಉಪಾಧ್ಯಕ್ಷರಾದ ಶ್ರೀ ಕೆ. ಬಾಲಚಂದ್ರ ಶೆಟ್ಟಿಯವರು ಹಾಗೂ ಅಮೃತ್ ಪಿ. ರೈಯವರು, ಜೊತೆ ಕಾರ್ಯದರ್ಶಿಗಳಾದ ಶ್ರೀಮತಿ ಕಾಂತಿ ಶೆಟ್ಟಿಯವರು ಉಪಸ್ಥಿತರಿದ್ದರು.

ಪ್ರಾಸ್ತವಿಕವಾಗಿ ಮಾತನಾಡಿದ ಯುವ ವಿಭಾಗದ ಅಧ್ಯಕ್ಷರಾದ ಶ್ರೀ ಪ್ರೇಮ್ ಪ್ರಸಾದ್ ಶೆಟ್ಟಿಯವರು ರಾಷ್ಟ್ರೀಯ ಯುವ ದಿವಸ ಹಾಗೂ ಸ್ವಾಮಿ ವಿವೇಕಾನಂದರ ಜಯಂತಿಯ ಸಂದರ್ಭದಲ್ಲಿ ಯುವ ಬಂಟರೆಲ್ಲರನ್ನೂ ಸಮಾವೇಶದ ಮೂಲಕ ಒಂದುಗೂಡಿಸಿ ವಿವಿಧ ಚಟುವಟಿಕೆಗಳ ಮೂಲಕ ಅವರನ್ನು ಸಂಘಟಿಸುವ, ಪ್ರತಿಭೆಗಳನ್ನು ಪ್ರೋತ್ಸಾಹಿಸುವ, ಸಮಾಜ ಹಾಗೂ ರಾಷ್ಟ್ರ ಭಕ್ತಿಯೆಡೆಗೆ ಪ್ರೇರೆಪಿಸುವ, ಸಮಾಜಕ್ಕೆ ಅಗತ್ಯವಿರುವ ನಿರ್ಣಯಗಳನ್ನು ಕೈಗೊಳ್ಳುವ, ಸಾಂಸ್ಕೃತಿಕ ಕಾರ್ಯಕ್ರಮದ ಮೂಲಕ ಸಂಸ್ಕೃತಿಯ ಪರಿಚಯವನ್ನು ಪಸರಿಸುವ ಉದ್ದೇಶದೊಂದಿಗೆ 'ಯುವೈಕ್ಯ-2018' ಯುವ ಬಂಟರ ರಾಷ್ಟ್ರೀಯ ಸಮಾವೇಶವನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿದರು.

ವಿವಿಧ ಬಂಟರ ಸಂಘದ ಸದಸ್ಯರಿಂದ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ: ಇದೇ ದಿನ ನಡೆದ ಸಾಂಸ್ಕೃತಿಕ ಸಂಜೆಯ ಕಾರ್ಯಕ್ರಮದಲ್ಲಿ ಅನೇಕ ಸಂಘಗಳ ಸದಸ್ಯರುಗಳು ತಮ್ಮ ಪ್ರತಿಭೆಯ ಅನಾವರಣಗೊಳಿಸಿದರು. ಜೆಪ್ಪು ಬಂಟರ ಸಂಘದವರ ಬಂಟ ಗೀತೆ, ಕಾರ್ಕಳ ಬಂಟರ ಸಂಘದಿಂದ ವಿಶೇಷವಾದ ಪೂಜಾ ಕುಣಿತ, ಮೂಲ್ಕಿ ಬಂಟರ ಸಂಘದಿಂದ "ಗಡು ಪತ್ತುನು" ಎನ್ನುವ ಕಿರುನಾಟಕ, ಕುಂದಾಪುರ ಬಂಟರ ಸಂಘದಿಂದ ಸಂಗೀತ, ನೃತ್ಯ, ಕಿರುನಾಟಕ, ಮುಂಬೈ ಬಂಟರ ಸಂಘದಿಂದ ಹಾಸ್ಯ ಕಿರುನಾಟಕ, ಚೆನ್ನೈ ಬಂಟರ ಸಂಘದಿಂದ ಸಮಕಾಲೀನ ನೃತ್ಯ, ಬೆಂಗಳೂರು ಬಂಟರ ಸಂಘದಿಂದ ಗಾಯನ, ಕಾಸರಗೋಡು ಬಂಟರ ಸಂಘದಿಂದ ನೃತ್ಯ ಪ್ರದರ್ಶನ, ಮಂಗಳೂರು ಬಂಟರ ಸಂಘದಿಂದ ಮಿಸ್ಟರ್ ಬಂಟ್ಸ್ ಮತ್ತು ಮಿಸ್ ಬಂಟ್ಸ್ ರ್‍ಯಾಂಪ್ ವಾಕ್ ಶೋ ಹೀಗೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಉತ್ತಮವಾಗಿ ಮೂಡಿ ಬಂದು ನೆರೆದಿದ್ದ ಸಭಿಕರ ಮನರಂಜಿಸಿತು.

ಸ್ವಾಮಿ ವಿವೇಕಾನಂದರ ಜೀವನ ಸಂದೇಶ ಕುರಿತು ಶ್ರೀ ನಿಕೇತ್‌ರಾಜ್‌ರವರಿಂದ ವಿಶೇಷ ಭಾಷಣ ಆಯೋಜಿಸಲಾಗಿತ್ತು. ತದನಂತರ ನಡೆದ ವಿಚಾರ ಗೋಷ್ಠಿಯಲ್ಲಿ ಈ ಎರಡು ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. ಬಂಟರನ್ನು ಮೀಸಲಾತಿಯ 2ಎ ಅಥವಾ 3ಎ ಪ್ರವರ್ಗಕ್ಕೆ ಸೇರಿಸುವಂತೆ ಅಗ್ರಹ.

2. ತುಳು ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿಸುವಂತೆ ಅಗ್ರಹ.

**ಸಮಾರೋಪ ಸಮಾರಂಭ ಹಾಗೂ ಯುವ ಪುರಸ್ಕಾರ**


ಎರಡು ದಿನದ ಬಹಳಷ್ಟು ಗೋಷ್ಠಿಗಳು, ಚರ್ಚೆ-ಸಂವಾದಗಳು, ವಿಶೇಷ ಭಾಷಣ, ನಿರ್ಣಯಗಳು ಹೀಗೆ ಅನೇಕ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಐಕಳ ಹರೀಶ್ ಶೆಟ್ಟಿ, ಬಂಟರ ಯಾನೆ ನಾಡವರ ಮಾತೃ ಸಂಘದ ಮಹಿಳಾ ವಿಭಾಗದ ಅಧ್ಯಕ್ಷೆ ಡಾ। ಆಶಾ ಜ್ಯೋತಿ ರೈ, ಉಡುಪಿ ಜಿಲ್ಲಾ ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ಚೆನ್ನೈ ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಅಶ್ವಿನ್ ಹೆಗ್ಡೆ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಸ್ವಲ್ಪ ತಡವಾಗಿ ಆಗಮಿಸಿದ ಕರ್ನಾಟಕ ಸರ್ಕಾರದ ಯುವಜನ ಖಾತೆ ಹಾಗೂ ಕ್ರೀಡಾ ಸಚಿವರಾದ ಶ್ರೀ ಪ್ರಮೋದ್ ಮಧ್ವರಾಜ್‌ರವರು ನೆರೆದಿದ್ದ ಸಭಿಕರನ್ನು ಕುರಿತು ಬಂಟ ಸಮಾಜದಲ್ಲಿ ರಕ್ತಗತವಾಗಿ ನಾಯಕತ್ವ ಗುಣಗಳಿದ್ದು ಎಲ್ಲಾ ಕ್ಷೇತ್ರದಲ್ಲೂ ಬಂಟರು ಉನ್ನತ ಸಾಧನೆಗೈದಿದ್ದಾರೆ. ಇಂತಹ ಸಂದರ್ಭ ಯುವ ವಿಭಾಗವು ಈ ರೀತಿಯ ಯುವೈಕ್ಯ ಹೆಸರಿನಲ್ಲಿ ಈ ಸಮಾವೇಶವನ್ನು ಆಯೋಜಿಸಿ ಮುಂದಿನ ದಿನಗಳಲ್ಲಿ ಸಮಾಜಕ್ಕೆ ಭದ್ರ ಅಡಿಪಾಯ ಹಾಕುವ ಕೆಲಸವನ್ನು ಮಾಡಿರುವುದು ಅತ್ಯಂತ ಸೂಕ್ತ ಮತ್ತು ಶ್ಲಾಘನೀಯ ಕೆಲಸವೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಕಾರ್ಯಕ್ರಮದಲ್ಲಿ ಉದ್ಯಮ ಕ್ಷೇತ್ರದಲ್ಲಿನ ಸಾಧನೆಗಾಗಿ ಶ್ರೀ ಅಲೋಕ್ ಶೆಟ್ಟಿ, ಕ್ರೀಡಾ ಕ್ಷೇತ್ರದ ಸಾಧನೆಗಾಗಿ ಆಯುಶ್ ಆರ್. ಶೆಟ್ಟಿ, ಕಲಾ ಕ್ಷೇತ್ರದ ಸಾಧನೆಗಾಗಿ ಚೇತನ್ ಶೆಟ್ಟಿ ಮುಂಡೋಡಿ, ಸಾಂಸ್ಕೃತಿಕ ಕ್ಷೇತ್ರದ ಸಾಧನೆಗಾಗಿ ವಿನಯ್ ಆರ್ ಶೆಟ್ಟಿ, ಶಿಕ್ಷಣ ಕ್ಷೇತ್ರದ ಸಾಧನೆಗಾಗಿ ಕವಿತಾ ಶೆಟ್ಟಿ, ಕೃಷಿ ಕ್ಷೇತ್ರದ ಸಾಧನೆಗಾಗಿ ಕೊಡ್ಮಣ್ ದೇವಿಪ್ರಸಾದ್ ಶೆಟ್ಟಿಯವರನ್ನು ಯುವೈಕ್ಯ ಯುವ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ್ ರೈ, ಗೌ। ಕಾರ್ಯದರ್ಶಿಗಳಾದ ಶ್ರೀ ಸಂತೋಷ್ ಶೆಟ್ಟಿ ಜೆ. ಉಪಾಧ್ಯಕ್ಷರಾದ ಶ್ರೀ ಕೆ. ಬಾಲಚಂದ್ರ ಶೆಟ್ಟಿ ಹಾಗೂ ಯುವ ವಿಭಾಗದ ಚೇರ್‌ಮೆನ್‌ರಾದ ಶ್ರೀ ಪ್ರೇಮ್ ಪ್ರಸಾದ್ ಶೆಟ್ಟಿಯವರು ಉಪಸ್ಥಿತರಿದ್ದರು. ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಕಾಸರಗೋಡು ಹಾಗೂ ಮಹಾನಗರಿಗಳಾದ ಮುಂಬೈ, ಪುಣೆ, ಚೆನ್ನೈ ಹಾಗೂ ಬೆಂಗಳೂರು ಹೀಗೆ ವಿವಿಧ ಸಂಘಗಳಿಂದ ನೂರಾರು ಯುವಕ ಯುವತಿಯರು ಸಮಾವೇಶದ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಅನೇಕ ಗಣ್ಯಾತಿ-ಗಣ್ಯ ಅತಿಥಿಗಳು ಸಮಾವೇಶದಲ್ಲಿ ಪಾಲ್ಗೊಂಡು ಯುವಕರಿಗೆ ಮಾರ್ಗದರ್ಶನ ಮಾಡಿ ಮುಂದಿನ ದಿನಗಳಲ್ಲಿ ಸಮಾಜಕ್ಕೆ ಭದ್ರ ಅಡಿಪಾಯ ಹಾಕುವ ಯುವ ವಿಭಾಗದ ಈ ಪ್ರಯತ್ನಕ್ಕೆ ತಮ್ಮ ಮೆಚ್ಚುಗೆ ವ್ಯಕ್ತ ಪಡಿಸಿದರು.

● **ಪ್ರೇಮ್‌ಪ್ರಸಾದ್ ಶೆಟ್ಟಿ**
ಚೇರ್‌ಮೆನ್ ಯುವ ವಿಭಾಗ

# ಅಭಿನಂದನೆಗಳು



**ಪ್ರೊ. ಡಾ। ಎಸ್. ಚಂದ್ರಶೇಖರ್ ಶೆಟ್ಟಿ**

**ಖ್ಯಾತ ನೇತ್ರ ತಜ್ಞ ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಹಾಗೂ ಕೋಲಾರದ ಶ್ರೀ ದೇವರಾಜ ಅರಸ್ ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿ ಪ್ರೊ. ಡಾ। ಎಸ್. ಚಂದ್ರಶೇಖರ ಶೆಟ್ಟಿಯವರು ದಿನಾಂಕ 20.02.2018 ರಂದು ಲೋಕಾರ್ಪಣೆ ಗೊಳ್ಳಲಿರುವ ಆದಿಚುಂಚನಗಿರಿ ವೈದ್ಯಕೀಯ ವಿಶ್ವವಿದ್ಯಾನಿಲಯದ ಪ್ರಪ್ರಥಮ ಉಪಕುಲಪತಿಗಳಾಗಿ ನೇಮಕ ಗೊಂಡಿರುತ್ತಾರೆ. ಸಂಘದ ಹಿರಿಯ ಸದಸ್ಯ, ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲಾಡಳಿತ ಮಂಡಳಿಯ ಸದಸ್ಯರೂ ಆಗಿರುವ ಡಾ। ಎಸ್. ಚಂದ್ರಶೇಖರ್ ಶೆಟ್ಟಿಯವರಿಗೆ ಬಂಟರ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.**

### ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ

# ಸಾಂಸ್ಕೃತಿಕ ಮತ್ತು ಕ್ರೀಡಾ ದಿನಾಚರಣೆಯ ವರದಿ

ಜನವರಿ ತಿಂಗಳ 26ನೇ ತಾರೀಕು ನಮ್ಮ ದೇಶದ ಗಣರಾಜ್ಯೋತ್ಸವದ ಸುದಿನ. ಅಂದು ನಮ್ಮ ಸ್ಥಾಪಕರ ದಿನಾಚರಣೆ. ಇದರ ಅಂಗವಾಗಿ ಸಂಘದಲ್ಲಿ ರಾಧಾಬಾಯಿ ತಿಮ್ಮಪ್ಪ ಭಂಡಾರಿ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಸಡಗರ. ಸಂಜೆ 6 ಗಂಟೆಗೆ ಸರಿಯಾಗಿ ಶ್ರೀ ನಿರೂಪ್ ಕೆ. ಶೆಟ್ಟಿಯವರ ಸುಶ್ರಾವ್ಯ ಪ್ರಾರ್ಥನೆಯೊಂದಿಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ 2017–18 ನೇ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಅತಿಥಿಗಳು ಬಹುಮಾನಗಳನ್ನು ವಿತರಿಸಿದರು.

ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ವತಿಯಿಂದ ವಿವಿಧ ಕ್ಷೇತ್ರಗಳ ಪ್ರತಿಭಾನ್ವಿತರಿಗೆ ದತ್ತಿನಿಧಿ ಪ್ರಶಸ್ತಿಗಳನ್ನು ಹಾಗೂ ಸಾಧನಾ ಪ್ರಶಸ್ತಿಗಳಿಗೆ ಭಾಜನರಾದವರನ್ನು ನಗದು ಹಾಗೂ ಫಲಕವನ್ನು ನೀಡಿ ಗಣ್ಯರು ಪುರಸ್ಕರಿಸಿದರು. ಇದೇ ಸಂದರ್ಭದಲ್ಲಿ ಸಾಹಿತ್ಯ ಮತ್ತು ಪ್ರಕಾಶನ ಸಮಿತಿ ಏರ್ಪಡಿಸಿದ ಮುದ್ದುಕಂದ ಹಾಗೂ ಪ್ರಬಂಧ ಸ್ಪರ್ಧೆಗಳ ಬಹುಮಾನಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಖ್ಯಾತ ಕ್ರೀಡಾ ವೈದ್ಯಕೀಯ ತಜ್ಞ ಡಾ। ಕಿರಣ್ ಕುಲಕರ್ಣಿಯವರು ಸಂಘವು ಕ್ರೀಡೆ, ಸಾಹಿತ್ಯ ಹಾಗೂ ಕಲೆಗೆ ನೀಡುತ್ತಿರುವ ಪ್ರೋತ್ಸಾಹವನ್ನು ಶ್ಲಾಘಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಡಿ. ಚಂದ್ರಹಾಸ ರೈಯವರು ಸಂಘವನ್ನು ಕಟ್ಟಿ ಬೆಳೆಸಿದ ಹಿರಿಯರನ್ನು ನೆನಪಿಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯವೆಂದರು.

ಸಂಘದ ಗೌರವ ಕಾರ್ಯದರ್ಶಿ ಶ್ರೀ ಜೆ.ಸಂತೋಷ್ ಶೆಟ್ಟಿಯವರು ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲಾ ಅತಿಥಿ ಅಭ್ಯಾಗತರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಜೊತೆ ಕಾರ್ಯದರ್ಶಿ ಶ್ರೀಮತಿ ಕಾಂತಿ ಶೆಟ್ಟಿಯವರ ಧನ್ಯವಾದ ಸಮರ್ಪಣೆಯೊಂದಿಗೆ ಸಭಾ ಕಾರ್ಯಕ್ರಮವು ಮುಕ್ತಾಯ ವಾಯಿತು.

ಸಭಾಕಾರ್ಯಕ್ರಮದ ನಂತರ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತ ಪ್ರತಿಭೆಗಳಿಂದ ವಿವಿಧ ನೃತ್ಯ ಪ್ರದರ್ಶನ ಜನಮನ ಸೂರೆಗೊಂಡಿತು. ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಾಂಸ್ಕೃತಿಕ ದಿನಾಚರಣೆಯ ಅಂಗವಾಗಿ ಸಾಂಸ್ಕೃತಿಕ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮಗಳು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಶ್ರೀಮತಿ ಶೈನಾ ಶ್ರೀನಿವಾಸ್ ಶೆಟ್ಟಿ ಹಾಗೂ ಅಜಿತ್ ಶೆಟ್ಟಿಯವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಸದಸ್ಯ ಬಾಂಧವರಿಗೆ ಹಾಗೂ ಅತಿಥಿಗಳಿಗೆ ಶುಚಿ–ರುಚಿಯಾದ ಸಹಭೋಜನ ಏರ್ಪಡಿಸಲಾಗಿತ್ತು.

## CORRIGENDUM

January 2018 issue Page No. 43
Ladies Throw ball Winners should be read as **“Mulki Sundarram Shetty Nagar Team”** which is mentioned as Bhannerghatta Team.

**Surendra Shetty K**
Chairman, Sports Committee

# ಸಂಸ್ಥಾಪಕರ ದಿನದ ಸಂಭ್ರಮಾಚರಣೆ

ಬಂಟರ ಸಮುದಾಯದ ಅತಿ ದೊಡ್ಡ ಸಂಭ್ರಮದ ಆಚರಣೆಯಾದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಂಸ್ಥಾಪಕರ ದಿನಾಚರಣೆ ಎಂದಿನಂತೆ ಈ ವರ್ಷವೂ ಸಹ ಭಾರತೀಯರ ಹೆಮ್ಮೆಯ ಗಣರಾಜ್ಯ ದಿನವಾದ ಜನವರಿ 26ರಂದು ಅತ್ಯಂತ ಸ್ಫೂರ್ತಿ ಮತ್ತು ಸಡಗರದಿಂದ ಆಚರಿಸಲಾಯಿತು.

ಪ್ರತಿ ವರ್ಷದಂತೆ ಈ ಬಾರಿಯೂ ವಿವಿಧ ಸಾಂಸ್ಕೃತಿಕ ಸ್ಪರ್ಧೆಯನ್ನು ಆಯೋಜಿಸಿ ವಿಜೇತರಿಗೆ ಬಹುಮಾನವನ್ನು ನೀಡಿ ಉತ್ತೇಜಿಸಲಾಯಿತು. ವಿಶೇಷವೆಂದರೆ ಈ ಬಾರಿ ಸಂಘದ ಎಲ್ಲಾ ಸದಸ್ಯರು ಸಂಘಟಿತರಾಗಿ ಅತ್ಯಂತ ಮುತುವರ್ಜಿ ವಹಿಸಿ ಎಲ್ಲರ ಸಾಂಸ್ಕೃತಿಕ ಸ್ಫೂರ್ತಿ ಇನ್ನಷ್ಟು ಇಮ್ಮಡಿಯಾಗಲಿ ಎನ್ನುವ ಉದ್ದೇಶದಿಂದ ಬೆಂಗಳೂರಿನ ಯಲಹಂಕ ಪೀಣ್ಯ, ಸುಂದರರಾಮ ಶೆಟ್ಟಿ ನಗರ, ವಿಜಯನಗರ ಹಾಗೂ ವಿವಿಧ ಭಾಗದ ಸಂಘದ ಸದಸ್ಯರು ಮತ್ತು ಮಕ್ಕಳು ಸತತ ಎರಡು ತಿಂಗಳುಗಳ ಕಾಲ ಅಭ್ಯಾಸ ನಡೆಸಿ ಶಾಸ್ತ್ರೀಯ, ಸಿನಿಮಾ, ಜಾನಪದ ಮತ್ತು ಪಾಶ್ಚಿಮಾತ್ಯ ಶೈಲಿಯ ವಿಶೇಷ ಮನೋರಂಜನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅದರಲ್ಲೂ ದಕ್ಷಿಣ ಕನ್ನಡದ ಅತ್ಯಂತ ಶ್ರೀಮಂತ ಮತ್ತು ಪ್ರಮುಖ ಸಾಂಸ್ಕೃತಿಕ ನೃತ್ಯವಾದ ಹುಲಿಕುಣಿತವನ್ನು ಅತ್ಯಂತ ವಿಜೃಂಭಣೆಯಿಂದ ನಮ್ಮ ಮಕ್ಕಳು ಪ್ರದರ್ಶಿಸಿ ಎಲ್ಲರ ಮನಸೂರೆಗೊಳಿಸಿದರು.

ತಂಡಗಳ ಭಾಗವಹಿಸುವಿಕೆಯಲ್ಲಿ ಶ್ರಮಿಸಿದ ಅರುಣ್ ಕುಮಾರ್ ಶೆಟ್ಟಿ ಪೀಣ್ಯ, ಉದಯ ಶೆಟ್ಟಿ ಯಲಹಂಕ, ಅನುರಾಧ ಶೆಟ್ಟಿ ಸುಂದರರಾಮ್ ಶೆಟ್ಟಿ ನಗರ ಇವರ ಪಾತ್ರ ಶ್ಲಾಘನೀಯ. ಉಚಿತ ನೃತ್ಯ ತರಬೇತಿಯನ್ನು ನೀಡಿ ಬಂಟರ ಮಕ್ಕಳನ್ನು ಹುರಿದುಂಬಿಸಿದ ಸಚಿನ್ ಶೆಟ್ಟಿ, ಅಮೃತ ಹೇಮಂತ್ ಶೆಟ್ಟಿ, ಸೃಜನ್ ಶೇಖ ಇವರುಗಳಿಗೆ ಆಭಾರಿಯಾಗಿದ್ದೇನೆ. ಈ ಕಾರ್ಯಕ್ರಮ ಯಶಸ್ವಿಯಾಗಲು ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ್ ರೈ, ಗೌ। ಕಾರ್ಯದರ್ಶಿ ಶ್ರೀ ಸಂತೋಷ್ ಶೆಟ್ಟಿ ಜೆ., ಶ್ರೀ ಬಾಲಚಂದ್ರ ಶೆಟ್ಟಿ ಕೆ., ಶ್ರೀಮತಿ ಅಮೃತ್ ಪಿ. ರೈ, ಶ್ರೀಮತಿ ಕಾಂತಿ ಶೆಟ್ಟಿ, ಶ್ರೀ ಆನಂದ್‌ರಾಮ್ ಶೆಟ್ಟಿ ಬಿ., ಎಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರು, ಸಂಘದ ಸಿಬ್ಬಂದಿ ವರ್ಗದವರು ತುಂಬು ಸಹಕಾರವನ್ನು ನೀಡಿರುತ್ತಾರೆ.

ಕಾರ್ಯಕ್ರಮವನ್ನು ಅತ್ಯಂತ ಅಚ್ಚುಕಟ್ಟಾಗಿ ನಡೆಸಿ ಕೊಡುವಲ್ಲಿ ಶ್ರಮಿಸಿದ ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಶ್ರೀ ವಿಜೇತ್ ಶೆಟ್ಟಿ, ಶ್ರೀಮತಿ ತಾರಮಣಿ ಹೆಗ್ಡೆ, ಶ್ರೀಮತಿ ಜಯಶ್ರೀ ಸಿ. ರೈ, ಶ್ರೀ ಸಂದೀಪ್ ಹೆಗ್ಡೆ, ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ, ಶ್ರೀಮತಿ ಯೋಗ್ಯ ಎಲ್. ರೈ, ಶ್ರೀಮತಿ ಸಬಿತಾ ಎ. ಮಲ್ಲಿ ಶ್ರೀಮತಿ ಶೋಭಾ ಎಸ್ ಶೇಖ, ಶ್ರೀಮತಿ ಶೋಭಾ ಶೆಟ್ಟಿ, ಶ್ರೀಮತಿ ಅನುಸೂಯ ಶೆಟ್ಟಿ, ಶ್ರೀಮತಿ ಸುಜಾತ ಶೆಟ್ಟಿ ಇವರುಗಳನ್ನು ಅಭಿನಂದಿಸುತ್ತೇನೆ.

ಸಾಂಸ್ಕೃತಿಕ ಸ್ಪರ್ಧೆ ಮತ್ತು ಕಾರ್ಯಕ್ರಮಗಳನ್ನು ಚಂದಗಾಣಿಸಿದ ಎಲ್ಲಾ ಸ್ಪರ್ಧಿಗಳಿಗೂ, ತೀರ್ಪುಗಾರರಿಗೂ ಹಾಗೂ ತಮ್ಮ ಕರ್ತವ್ಯಗಳನ್ನು ಅತ್ಯಂತ ಶ್ರದ್ಧೆ, ಜವಾಬ್ದಾರಿ ಮತ್ತು ಪ್ರಾಮಾಣಿಕವಾಗಿ ನಿಭಾಯಿಸಿದ ಸಂಘದ ಎಲ್ಲಾ ಸದಸ್ಯರುಗಳಿಗೂ ಹಾಗೂ ನಮ್ಮ ಎಲ್ಲಾ ಪ್ರಯತ್ನವನ್ನು ಆನಂದಿಸಿ ನಮ್ಮಲ್ಲಿ ಇನ್ನಷ್ಟು ಸ್ಫೂರ್ತಿಯ ಚಿಲುಮೆಯನ್ನು ಹೆಚ್ಚಿಸಿ ಹುರಿದುಂಬಿಸಿದ ಸಂಘದ ಸದಸ್ಯರುಗಳಿಗೂ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

**● ಆರ್. ಉಪೇಂದ್ರ ಶೆಟ್ಟಿ**
ಚೇರ್‌ಮೆನ್, ಸಾಂಸ್ಕೃತಿಕ ವಿಭಾಗ

# Bunts Sangha RNS Vidyaniketan

## Republic Day

*Freedom In mind*
*Faith in words*
*Pride in our heart and*
*with memories in soul*



Our school celebrated in a magnificent way, the 69th Republic Day of our country.

It was a day cherished with pride and gratitude by one and all, representing our spirits of togetherness.

This glorious function was graced by Dr. B. Vasantha Shetty, the Deputy Registrar, Rajiv Gandhi University of Health Sciences, Karnataka as the Chief guest. Dr. Vasantha Shetty is the recipient of several honours to his credit including National N.S.S award from Sri. Pranab Mukharjee, the Former president of India for his devoted services to the community in the year 2011-12. The Chief guest enlightened us with his vast experience of life and urged the students to be devoted in their life particularly, their duties towards the Nation.

The occasion was graced by Sri. D. Chandrahas Rai, President, Bunts' Sangha, Sri. Santhosh Shetty J, Hon. Secretary, Bunts' Sangha , Sri. Anandram Shetty B, Treasurer Bunts' Sangha and other dignitaries.


The Republic Day celebration of our school was adorned with galaxy of events like hoisting of National Flag followed by the National Anthem and various cultural programmes in the form of patriotic Dance drama, rendition of songs, performance of Yoga, a display of Martial arts and pyramids.

The cultural fiesta concluded with a vote of thanks and a memory devoured by all.




ಇವರು ನಮ್ಮವರು

# ಸಹಕಾರಿ ರಂಗದ ಧುರೀಣ - ರವಿರಾಜ್ ಹೆಗ್ಡೆ



ಕ್ಷೀರಕ್ರಾಂತಿಯ ಮೂಲಕ ಇಡೀ ದೇಶದ ರೈತರ ಬಾಳಿನಲ್ಲಿ ಹೊಸ ಬೆಳಕು ಮೂಡಿಸಿದ ಕುರಿಯನ್ ಅವರಂತೆ ದಕ್ಷಿಣ ಕನ್ನಡ– ಉಡುಪಿ ಜಿಲ್ಲೆಯ ಸಾವಿರಾರು ಬಡಕುಟುಂಬಗಳಿಗೆ ಜೀವನಾಧಾರ ಕಲ್ಪಿಸುವಲ್ಲಿ ನೆರವಾದ ದಕ್ಷಿಣ ಕನ್ನಡ ಹಾಲು ಒಕ್ಕೂಟದ ಸಾರಥ್ಯ ವಹಿಸಿ, ಸಂಘಟನೆಯನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸುವಂತೆ ಮಾಡುವಲ್ಲಿ ಮುಂಚೂಣಿಯಲ್ಲಿ ನಿಂತವರು ರವಿರಾಜ್ ಹೆಗ್ಡೆ.

ಅವಳಿ ಜಿಲ್ಲೆಯ ಮನೆ ಮನೆಯಲ್ಲಿ ಕ್ಷೀರಕ್ರಾಂತಿಗೆ ಮುನ್ನುಡಿ ಬರೆಯುವಲ್ಲಿ ಹೆಗ್ಡೆಯವರ ಪಾತ್ರ ಮಹತ್ವದ್ದು. ಸಹಕಾರ ಚಳವಳಿ ಮತ್ತು ಹಾಲು ಉತ್ಪಾದಕ ಸಹಕಾರ ಸಂಘಗಳ ಮೂಲಕ ಸಾವಿರಾರು ಕೃಷಿ ಕೂಲಿ ಕುಟುಂಬಗಳು, ನಿರ್ಗತಿಕರು, ಬಡವರು ಬದುಕು ಕಂಡುಕೊಂಡಿದ್ದಾರೆ. ಅವಳಿ ಜಿಲ್ಲೆಯಲ್ಲಿ ಕ್ಷೀರಕ್ರಾಂತಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗೆ ನಾಂದಿಯಾಗಿದೆ ಎಂದರೆ ತಪ್ಪಲ್ಲ. ಇಂಥ ಚಳವಳಿಗೆ ಸಮರ್ಥ ನಾಯಕತ್ವ ನೀಡಿದ ಹೆಗ್ಗಳಿಕೆ ರವಿರಾಜ್ ಹೆಗ್ಡೆಯವರದ್ದು.

ಉಡುಪಿ ತಾಲೂಕು ಕೊಡವೂರಿನ ಪರೀಕ ಶೇಖರ ಹೆಗ್ಡೆ– ರಾಧಾ ಹೆಗ್ಡೆ ದಂಪತಿಯ ಮಗನಾಗಿ 1956ರ ಆಗಸ್ಟ್ ಒಂದರಂದು ಜನಿಸಿದ ಹೆಗ್ಡೆಯವರು, ಗ್ರಾಮದ ಪ್ರಾಥಮಿಕ ಶಾಲೆ, ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜು, ಉಡುಪಿ ಪೂರ್ಣಪ್ರಜ್ಞ ಕಾಲೇಜು ಹಾಗೂ ಉಡುಪಿ ಕಾನೂನು ಕಾಲೇಜಿನಲ್ಲಿ ಶಿಕ್ಷಣ ಪಡೆದರು. ವಿದ್ಯಾರ್ಥಿದೆಸೆಯಲ್ಲೇ ನಾಯಕತ್ವ ಗುಣ ಬೆಳೆಸಿಕೊಂಡಿದ್ದ ಇವರು, ಉಡುಪಿ ಕಾನೂನು ಕಾಲೇಜು ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಕಾಲೇಜಿನ ಕ್ರಿಕೆಟ್ ತಂಡದ ನಾಯಕರಾಗಿ, ಕಬಡ್ಡಿ ತಂಡದ ನಾಯಕರಾಗಿದ್ದ ಹೆಗ್ಡೆಯವರದ್ದು ಆಟೋಟಗಳಲ್ಲೂ ಎತ್ತಿದ ಕೈ. ಎನ್‌ಸಿಸಿ ಸಿ ಸರ್ಟಿಫಿಕೆಟ್ ಪಡೆದು ಅಂಡರ್ ಆಫೀಸರ್ ಆಗಿ ನಿಯುಕ್ತಿಗೊಂಡರು. ಬಳಿಕ ವೆಲ್ಲಿಂಗ್ಟನ್‌ನಲ್ಲಿ ಆರ್ಮಿ ಅಟ್ಯಾಚ್‌ಮೆಂಟ್ ಕೋರ್ಸ್ ಪಡೆದ ಹೆಗ್ಗಳಿಕೆ ಇವರದ್ದು.

1982ರಲ್ಲಿ ವಕೀಲಿ ವೃತ್ತಿ ಆರಂಭಿಸಿದ ಇವರು ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳನ್ನು ಚಾಕಚಕ್ಯತೆಯಿಂದ ನಿಭಾಯಿಸುವ ಮೂಲಕ ಜನಮೆಚ್ಚುಗೆ ಪಡೆದರು. ಕೇಂದ್ರ ಸರ್ಕಾರ ಇವರನ್ನು ನೋಟರಿ ಪಬ್ಲಿಕ್ ಆಗಿ ನಿಯೋಜಿಸಿತು. ವಿಜಯಾ ಬ್ಯಾಂಕ್, ಕೆನರಾ ಬ್ಯಾಂಕ್, ಅಭ್ಯುದಯ ಕೋ ಆಪರೇಟಿವ್ ಬ್ಯಾಂಕ್ ಸೇರಿದಂತೆ ಹಲವು ಸಂಘ ಸಂಸ್ಥೆಗಳಿಗೆ ಕಾನೂನು ಸಲಹೆಗಾರರಾಗಿಯೂ ಇವರು ಸೇವೆ ಸಲ್ಲಿಸುತ್ತಿದ್ದಾರೆ.

ವೃತ್ತಿ ಬದುಕಿನ ಜತೆಜತೆಗೆ ಸಮಾಜಸೇವೆಯನ್ನೂ ರೂಢಿಸಿಕೊಂಡ ಇವರು ಸಹಕಾರ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಉತ್ತಮ ಹಾಗೂ ಪ್ರಗತಿಪರ ರೈತರಾಗಿಯೂ ಹೆಸರು ಮಾಡಿರುವ ಇವರು ಭತ್ತ, ತೆಂಗು ಸೇರಿದಂತೆ ಹಲವು ಬೆಳೆಗಳನ್ನು ಇಂದಿಗೂ ಬೆಳೆಯುತ್ತಿದ್ದಾರೆ.

ಹುಟ್ಟೂರನ್ನೇ ಸಮಾಜಸೇವೆಯ ಕ್ಷೇತ್ರವಾಗಿ ಆಯ್ಕೆ ಮಾಡಿಕೊಂಡ ಹೆಗ್ಡೆ, ಕೊಡವೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ 1995ರಲ್ಲಿ ಆಯ್ಕೆಯಾದರು. 2009ರ ವರಗೂ ಅದೇ ಹುದ್ದೆಯಲ್ಲಿದ್ದರು. 2013ರ ಆಗಸ್ಟ್‌ನಿಂದ ಇಂದಿನವರೆಗೂ ಈ ಹುದ್ದೆಯನ್ನು ಹೊಂದಿದ್ದಾರೆ. ಇವರ ಪರಿಶ್ರಮದಲ್ಲಿ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಅತ್ಯುತ್ತಮ ಹಾಲು ಸೊಸೈಟಿ ಎಂಬ ಪ್ರಶಸ್ತಿ ಪಡೆದಿದೆ. 2006–07, 2007–08 ಹಾಗೂ 2010–11ರಲ್ಲಿ ಉಡುಪಿ ಜಿಲ್ಲಾ ಮಟ್ಟದ ಅತ್ಯುತ್ತಮ ಸೊಸೈಟಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ದಕ್ಷಿಣ ಕನ್ನಡ ಕೃಷಿ ಅಭಿವೃದ್ಧಿ ಸೊಸೈಟಿ ಅಧ್ಯಕ್ಷರಾಗಿ 1997ರಿಂದ

2013ರವರೆಗೂ ಕಾರ್ಯನಿರ್ವಹಿಸಿದ ಇವರು, 1991ರಿಂದ 97ರವರೆಗೆ ಸೊಸೈಟಿಯ ನಿರ್ದೇಶಕರಾಗಿದ್ದರು. ಕೊಡವೂರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ, ಉಡುಪಿ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾಗಿ, ತಾಲೂಕು ಕೃಷಿ ಉತ್ಪನ್ನ ಸಹಕಾರ ಸಂಘದ ನಿರ್ದೇಶಕರಾಗಿ, ಕೆನರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಮತ್ತು ಮಾತೃಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರ ನಿಯಮಿತದ ಸಂಸ್ಥಾಪಕ ನಿರ್ದೇಶಕರಾಗಿ, ಭಾರತಿ ಪ್ರವಾಸೋದ್ಯಮ ಅಭಿವೃದ್ಧಿ ಸಹಕಾರ ಸಂಘದ ಪ್ರವರ್ತಕ ನಿರ್ದೇಶಕರಾಗಿ ಕೃಷಿ– ಸಹಕಾರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ.ಮಲ್ಪೆ ಉಡುಪಿ ರೋಟರಿ ಕ್ಲಬ್‌ನ ಚಾರ್ಟರ್ ಸದಸ್ಯರಾಗಿ, ಅಧ್ಯಕ್ಷರಾಗಿ ಕರ್ನಾಟಕ ರಾಜ್ಯ ಸಹಕಾರ ಭಾರತಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಇವರು ಉಡುಪಿ ಜಿಲ್ಲಾ ಸಹಕಾರ ಭಾರತಿಯ ಸಂಚಾಲಕರಾಗಿಯೂ ದುಡಿಯುತ್ತಿದ್ದಾರೆ. ದಕ್ಷಿಣ ಕನ್ನಡ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ನಿರ್ದೇಶಕರಾಗಿ 15 ವರ್ಷ ಕಾಲ ಸೇವೆ ಸಲ್ಲಿಸಿದ್ದಾರೆ. ಮಂಗಳೂರು ಕೆಎಂಎಫ್ ಅಧ್ಯಕ್ಷರಾಗಿ 2009–2014ರವರೆಗೆ ಸೇವೆ ಸಲ್ಲಿಸಿದ್ದು, 03–07–2014ರಂದು ನಡೆದ ಚುನಾವಣೆಯಲ್ಲಿ ಮುಂದಿನ ಐದು ವರ್ಷಗಳ ಅವಧಿಗೆ ಮತ್ತೆ ಅಧ್ಯಕ್ಷರಾಗಿ ಚುನಾಯಿತರಾದರು.

2008–09ರ ಅವಧಿಯಲ್ಲಿ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ದೊರಕುತ್ತಿದ್ದ ಗರಿಷ್ಠ ಬೆಲೆ ಲೀಟರ್‌ಗೆ 12.30 ರೂಪಾಯಿ. ಇದೀಗ ಇವರ ಅವಧಿಯಲ್ಲಿ 28.67 ರೂಪಾಯಿ ದರ ನಿಡಲಾಗುತ್ತಿದ್ದು, ರಾಜ್ಯದಲ್ಲಿ ಗರಿಷ್ಠ ಬೆಲೆಯಲ್ಲಿ ರೈತರಿಂದ ಹಾಲು ಖರೀದಿಸುವ ಒಕ್ಕೂಟಗಳಲ್ಲಿ ದಕ್ಷಿಣ ಕನ್ನಡ ಮೊದಲನೇ ಸ್ಥಾನದಲ್ಲಿದೆ. ಇವರು ಅಧ್ಯಕ್ಷರಾಗುವ ವೇಳೆ ದಿನಕ್ಕೆ 1.66 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದರೆ, ಇಂದು ಸರಾಸರಿ ದಿನಕ್ಕೆ 4.06 ಲಕ್ಷ ಲೀಟರ್ ಹಾಲು ಸಂಗ್ರಹಿಸುತ್ತಿದೆ. ಅಂತೆಯೇ ಇವರ ಅಧಿಕಾರವಧಿಯಲ್ಲಿ ಒಕ್ಕೂಟದ ವಹಿವಾಟು 203.73 ಕೋಟಿ ರೂಪಾಯಿಗಳಿಂದ 753.00 ಕೋಟಿ ರೂಪಾಯಿಗೆ ಹೆಚ್ಚಿರುವುದು ಇವರ ದಕ್ಷತೆ, ಪ್ರಾಮಾಣಿಕತೆ ಮತ್ತು ಕಠಿಣ ಪರಿಶ್ರಮಕ್ಕೆ ಸಂದ ಗೌರವ ಎನ್ನಬಹುದು.

ಕಳೆದ ಸೆಪ್ಟೆಂಬರ್‌ನಲ್ಲಿ ಎನ್‌ಡಿಡಿಬಿ ವತಿಯಿಂದ ನೀಡುವ ಡೈರಿ ಎಕ್ಸಲೆನ್ಸ್ ಪ್ರಶಸ್ತಿ ದಕ್ಷಿಣ ಕನ್ನಡ ಹಾಲು ಒಕ್ಕೂಟಕ್ಕೆ ಸಂದಿದೆ. ಎನ್‌ಡಿಡಿಬಿ ಕ್ವಾಲಿಟಿ ಮಾರ್ಕ್ ಯೋಜನೆಯಡಿ ಮಂಗಳೂರು ಹಾಗೂ ಮಣಿಪಾಲ ಘಟಕಗಳು ಈ ಪ್ರಮಾಣಪತ್ರ ಪಡೆದಿವೆ. ಇದು ಅವಳಿ ಜಿಲ್ಲೆಯಲ್ಲಿ ಉತ್ಪಾದನೆಯಾಗುವ ಹಾಲು ಅಂತರರಾಷ್ಟ್ರೀಯ ಗುಣಮಟ್ಟವನ್ನು ಹೊಂದಿವೆ ಎನ್ನುವುದಕ್ಕೆ ಸಾಕ್ಷಿ. 2014ರ ನವೆಂಬರ್ ಒಂದರಿಂದೀಚೆಗೆ ರಾಜ್ಯದ 14 ಒಕ್ಕೂಟಗಳ ಪೈಕಿ ದಕ್ಷಿಣ ಕನ್ನಡ ಒಕ್ಕೂಟ ಒಂದನೇ ಸ್ಥಾನದಲ್ಲಿದೆ ಎನ್ನುವುದು ಇವರ ಕೀರ್ತಿಯ ಮುಕುಟಕ್ಕೆ ಗರಿಯಂತಿದೆ.

ಇವರ ಸಾರಥ್ಯದಲ್ಲಿ ಒಕ್ಕೂಟಕ್ಕೆ ಐಎಸ್‌ಓ ಪ್ರಮಾಣಪತ್ರ 2012ರಲ್ಲಿ ಲಭಿಸಿದ್ದು, ಇಂದಿನವರೆಗೂ ಇದು ಉಳಿದುಕೊಂಡು ಬಂದಿದೆ. ಕ್ಲೌಡ್ ಆಧರಿತ ಇಆರ್‌ಪಿ ಸಾಫ್ಟ್‌ವೇರ್‌ಗಳನ್ನು ಹಾಲು ಒಕ್ಕೂಟದಲ್ಲಿ ಅಳವಡಿಸಿ, ಈ ಸಾಧನೆ ಮಾಡಿದ ಮೊದಲ ಒಕ್ಕೂಟ ಎಂಬ ಹಿರಿಮೆಯನ್ನೂ ದಕ್ಷಿಣ ಕನ್ನಡ ಒಕ್ಕೂಟ ಪಡೆದುಕೊಂಡಿದೆ. ರಾಜ್ಯದಲ್ಲೇ ಮೊದಲ ಬಾರಿಗೆ ಯುಎಚ್‌ಟಿ ಫ್ಲೆಕ್ಸಿ ಪ್ಯಾಕ್ ಬಿಡುಗಡೆ ಮಾಡಲಾಗಿದೆ. ಕರ್ನಾಟಕ ಹಾಲು ಒಕ್ಕೂಟಗಳ ಮಹಾಮಂಡಲದ ನಿರ್ದೇಶಕರಾಗಿಯೂ ಇವರು ಸೇವೆ ಸಲ್ಲಿಸುತ್ತಿದ್ದಾರೆ.

ಸರಳ–ಸಜ್ಜನಿಕೆಯ ವ್ಯಕ್ತಿತ್ವ, ಬಡವರ ಪರ ಕಾಳಜಿ, ಕಠಿಣ ಪರಿಶ್ರಮ, ಶಿಸ್ತುಬದ್ಧ ಜೀವನ ಇಂದು ಅವರನ್ನು ಉನ್ನತ ಮಟ್ಟದ ನಾಯಕರನ್ನಾಗಿ ರೂಪಿಸಿದೆ.

ವಿನಯಾ ಹೆಗ್ಡೆಯವರನ್ನು ವಿವಾಹವಾಗಿ ಸುಖಸಂಸಾರ ಸಾಗಿಸುತ್ತಿರುವ ಹೆಗ್ಡೆಯವರು ರಿಯಾ ಹಾಗೂ ರೋಹನ್ ಎಂಬ ಹೆಮ್ಮೆಯ ಮಕ್ಕಳನ್ನು ಪಡೆದಿದ್ದಾರೆ. ಮಗಳು ರಿಯಾ ಕಂಪ್ಯೂಟರ್ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಅಶ್ವಥ್ ಶೆಟ್ಟಿಯವರನ್ನು ವಿವಾಹವಾಗಿ ಆಸ್ಟ್ರೇಲಿಯಾದ ಮೆಲ್‌ಬೋರ್ನ್‌ನಲ್ಲಿ ನೆಲೆಸಿದ್ದಾರೆ. ಮಗ ರೋಹನ್ ಹೆಗ್ಡೆ ಬೆಂಗಳೂರಿನ ಕ್ರೈಸ್ಟ್ ಕಾಲೇಜಿನಲ್ಲಿ ಬಿಬಿಎ ಎಲ್‌ಎಲ್‌ಬಿ ಪದವಿಯನ್ನು ವ್ಯಾಸಂಗ ಮಾಡುತ್ತಿದ್ದಾರೆ.

ಹೀಗೆ ಇಡೀ ಸಮಾಜದ ಅಭಿವೃದ್ಧಿಯ ಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಶ್ರಮಿಸುತ್ತಿರುವ ರವಿರಾಜ್ ಹೆಗ್ಡೆಯವರು ನಿಜಕ್ಕೂ ನಮ್ಮ ಬಂಟ ಸಮುದಾಯಕ್ಕೇ ಹೆಮ್ಮೆ.

● **ರವಿರಾಜ್ ಎಸ್. ಶೆಟ್ಟಿ**

# ವೇಗ ಓದು-ಬಗೆ ಹೇಗೆ?



ನಾಗರಮಠ ಜಯರಾಮ ಶೆಟ್ಟಿ

ನಾಲ್ಕು ಶತಮಾನಗಳ ಹಿಂದೆ ವರ್ಷಕ್ಕೆ ಸಾವಿರ ಪುಸ್ತಕಗಳು ಬೆಳಕನ್ನು ಕಂಡಿವೆಯಾದರೆ, ಇಂದು ಸಾವಿರಕ್ಕೂ ಮಿಕ್ಕಿ ಪುಸ್ತಕಗಳು ಹೊರ ಬರುತ್ತಿವೆ. ಇದು ಮಾಹಿತಿ ಯುಗ ಓದುವ ಮನಸ್ಸಿದ್ದವರಿಗೆ ಸಮಯದ ಅಭಾವವಿದ್ದಿರಬಹುದೇ ಹೊರತು ಸಾಮಾಗ್ರಿಗಳದ್ದಲ್ಲ. ಸಮಯವಿಲ್ಲವೆನ್ನುವವರು ನೆಪಕ್ಕೆ ಮೊರೆ ಹೋಗುವವರು. ಸರಿಯಾದ ಓದುವ ಕ್ರಮ ರೂಢಿಸಿಕೊಂಡಾಗ, ಈ ಪ್ರಕ್ರಿಯೆ ಕಡಿಮೆ ತ್ರಾಸದಾಯಕ ಮತ್ತು ಹೆಚ್ಚು ಪರಿಣಾಮಕಾರಿಯಾಗಿ ಕಾಣಿಸಿಕೊಳ್ಳಬಹುದು. ವೇಗ ಓದು ಒಂದು ಉತ್ತಮ ಅಭ್ಯಾಸ ಮತ್ತು ಇದನ್ನು ರೂಡಿಸಿಕೊಳ್ಳಲಿಕ್ಕೆ ಬೇಕಾದ ಮೂರು ಮುಖ್ಯ ಅಂಶಗಳು ಯಾವುದೆಂದರೆ ಶಿಸ್ತು, ಕ್ರಮಬದ್ಧತೆ ಮತ್ತು ನಿರಂತರ ಪ್ರಯತ್ನ. ಶಬ್ದದಿಂದ ಶಬ್ದಕ್ಕೆ ಹೊರಳುವುದು, ಇಂಚು ಇಂಚಿನ ನಡಿಗೆಗೆ ಸಮಾನ. ಇದರಿಂದ ಕಣ್ಣುಗಳಿಗೆ ಮತ್ತು ಮನಸ್ಸಿಗೆ ಆಯಾಸವಲ್ಲದೆ ಮತ್ತೇನು ಅಲ್ಲ. ಪದಗಳನ್ನು ಪ್ರತ್ಯೇಕ ತುಟಿಚಲನೆಯಲ್ಲಿ ಓದುವ ಅಭ್ಯಾಸ ನಮಗೆಲ್ಲರಿಗೂ ಚಿಕ್ಕಂದಿನಿಂದಲೇ ಬಂದದ್ದಾದರೂ, ಆ ಕ್ರಮಕ್ಕೆ ವಿದಾಯ ಹೇಳಲೇ ಬೇಕಾಗಿದೆ. ವಾರಕ್ಕೆ ಸುಮಾರು 1000 ಪುಟಗಳನ್ನು ಓದುವ ಅನಿವಾರ್ಯತೆ ನಿಮ್ಮ ವೈಯುಕ್ತಿಕ ಅಥವಾ ವ್ಯಾವಸಾಯಿಕ ಜೀವನದಲ್ಲಿದ್ದರೆ, ದಿನವೊಂದಕ್ಕೆ ನೀವೆಷ್ಟು ಪುಟ ಓದಬಲ್ಲಿರಿ? ಅತಿ ಮಂದಗತಿಯ ಓದುವ ಕ್ರಮ ವೈಯುಕ್ತಿಕ ಕ್ಷಮತೆಯನ್ನು ಬಾಧಿಸುವುದಲ್ಲದೆ ಅದೊಂದು ಮಾನಸಿಕ ಜಾಡ್ಯವನ್ನೂ ಪ್ರಕಟಿಸುತ್ತದೆ. ವ್ಯಕ್ತಿತ್ವ ವಿಕಸನದಲ್ಲಿ ಸಾಧನೆ ಮತ್ತು ಸಿದ್ಧಿಗೆ ಪೂರಕವಾಗಿರುವುದು ವೇಗದ ಓದು ಎಂದರೆ ತಪ್ಪಿಲ್ಲ.

ನೀವು ಒಬ್ಬ ಉದ್ಯೋಗಿ ನಿಮ್ಮ ಪದೋನ್ನತಿ ಪತ್ರ ಮೇಲಾಧಿಕಾರಿಯ ಕೈಲಿದೆ. ದೂರದಿಂದ ಅದನ್ನು ಇಣುಕಿ ನೋಡುವ ನೀವು ಆ ಪತ್ರದ ಇಡಿ ಒಕ್ಕಣೆಯನ್ನು ಕ್ಷಣಗಳಲ್ಲಿ ದಕ್ಕಿಸಿಕೊಳ್ಳಲಿಲ್ಲವೆ? ಅಂದರೆ ವೇಗ ಓದು ನಿಮಗೆ ಅರಿಯದ ಗ್ರಹಿಸಲಾಗದ ವಿದ್ಯೆಯೇನಲ್ಲ. ಓದಿನಲ್ಲಿ ಕಣ್ಣಿನ ಚಲನೆಯನ್ನು ನಿಯಂತ್ರಿಸುವುದು ಅತಿ ಮುಖ್ಯ. ನಿಮ್ಮ ಎದುರು ಕುಳಿತ ವ್ಯಕ್ತಿ ಓದುವ ರೀತಿಯನ್ನು ಗಮನಿಸಿ. ಸಾಲೊಂದಕ್ಕೆ ಎರಡು ಅಥವಾ ಮೂರು ನಿಲುಗಡೇ ಅಪೇಕ್ಷಣೀಯ. ಮಂದಗತಿಯ ಓದುಗರು ಸಾಮಾನ್ಯ, ಸಾಲಿಗೆ ಐದು/ಆರು ಸಲ ಕಣ್ ದೃಷ್ಟಿ ನಿಲ್ಲಿಸಿಕೊಂಡು ಮುಂದುವರಿಯುತ್ತಾರೆ.

ನೀವು ಓದುವ ವಿಷಯ ಯಾ ಘಟನೆ ಚಿತ್ರ ರೂಪದಲ್ಲಿ ಕಾಣಿಸಿಕೊಂಡಾಗ, ಅದರ ಸಂಬಂಧಿ ಮಾಹಿತಿಗಳನ್ನು ನೀವು ಶೀಘ್ರವಾಗಿ ಗ್ರಹಿಸಬಲ್ಲಿರಿ. ಕ್ರಿಕೆಟ್ ನಿಮ್ಮ ನೆಚ್ಚಿನ ಆಟವಾಗಿದ್ದು, ಮೈದಾನದಲ್ಲಿ ಕ್ಷೇತ್ರಪಾಲಕರ ಸ್ಥಾನಗಳ ಪರಿಚಯವಿದ್ದರೆ, ಕ್ರಿಕೆಟ್ ಕಾಮೆಂಟ್ರಿ ಅಥವಾ ಬರಹಗಳನ್ನು ವೇಗವಾಗಿ ಗ್ರಹಿಸುವುದು/ಓದುವುದು ಕಷ್ಟವಾಗದು. ಓದುವ ವಿಷಯಗಳನ್ನು ಮನಸ್ಸಿನಲ್ಲಿ ಚಿತ್ರೀಕರಿಸಿ ಸ್ಥಿರೀಕರಿಸಿಕೊಳ್ಳುವ ಮಾನಸಿಕ ವ್ಯಾಯಾಮ ಫಲಕಾರಿ.

**ವೇಗ ಓದಿನಲ್ಲಿ ಈ ಕೆಳಗಿನ ಐದಂಶಗಳನ್ನು ಗಮನಿಸಿ.**


1. ಪರಿವೀಕ್ಷಣೆ 2. ಪ್ರಶ್ನಾರ್ಥಕ ಮನಸ್ಸು 3. ಓದುವ ಕ್ರಿಯೆ 4 ಸ್ವವ್ಯಾಖ್ಯಾನ 5. ಪುನರ್ ವಿಮರ್ಶೆ. ಒಂದು ಹೊಸ ಅಧ್ಯಾಯವನ್ನು ಓದಲು, ಒಂದು ತಾಸು ಬೇಕಾಗಿದ್ದರೆ, ನೀವು ಮೇಲಿನ ವಿಭಾಗಗಳಿಗೆ ಕೊಡಬೇಕಾದ ಸಮಯ ಕ್ರಮವಾಗಿ ಐದು, ಐದು, ಮೂವತ್ತು, ಹದಿನೈದು ಮತ್ತು ಐದು ನಿಮಿಷಗಳು.

ವೇಗ ಓದಿಗೆ ಪೂರಕವಾಗಿರುವ ಕೆಲವು ಹೆಜ್ಜೆಗಳನ್ನು ಗಮನಿಸಿ. ಯಾವುದೇ ಪುಸ್ತಕ, ಪ್ರತ್ಯೇಕ ಅಧ್ಯಾಯ, ಲೇಖನ ಓದುವ ಮುನ್ನ ಅದರ ಮುನ್ನುಡಿ, ಲೇಖಕರ ಆಶಯ ಮಾತುಗಳು, ಸಾರಾಂಶ ಸಂಗ್ರಹಗಳನ್ನು ಪ್ರಥಮದಲ್ಲಿ ಓದಿಕೊಳ್ಳಿ. ಇದರಿಂದ ಲೇಖಕರು ಹೇಳ ಹೊರಟ ಸಮಗ್ರ ವಿಷಯಗಳ ಸೀಳು ನೋಟ ಸಿಕ್ಕಿದಂತಾಗುತ್ತದೆ.

ಒಂದು ಪುಟದಲ್ಲಿ ಕೆಲವೊಂದು ಪ್ಯಾರಾಗಳಿವೆ, ನಿಮ್ಮಲ್ಲಿ ಸಮಯ / ವ್ಯವಧಾನ ಕಡಿಮೆಯೆನ್ನಿ, ಮೊದಲ ಮತ್ತು ಕೊನೆಯ ಪ್ಯಾರಾಗಳ ಮೊದಲ, ಕೊನೆಯ ವಾಕ್ಯಗಳನ್ನು ಗಮನಿಸಿ. ಅನಂತರ ಉಳಿದಂತೆ ಪ್ಯಾರಾಗಳ ಮೊದಲ ವಾಕ್ಯದ ಮೇಲೆ ಮಾತ್ರ ಕಣ್ ಹಾಯಿಸುತ್ತಾ ಸಾಗಿ. ಈಗ ಇಡೀ ಪುಟದ ಕೇಂದ್ರ ವಿಷಯ ನಿಮಗೆ ಪರಿಚಯವಾದಂತೆ. ಸಾಮಾನ್ಯವಾಗಿ ಪ್ರತಿ ಪ್ಯಾರಾದ ಮೊದಲ ವಾಕ್ಯ ಅರ್ಥೈಸಿಕೊಳ್ಳುವುದು ಮುಖ್ಯ.

25ನೇ ಪುಟ ನೋಡಿ

# ಹಿರಿಯ ನಾಗರೀಕರ ಸ್ನೇಹಿ ಕರ್ನಾಟಕ : ನಮ್ಮ ಗುರಿ



**ಬಾಲಕೃಷ್ಣ ಶೆಟ್ಟಿ (ಎಬಿ)**
ಮಾಜಿ ಸದಸ್ಯ
ಖಾಯಂ ಜನತಾ ನ್ಯಾಯಾಲಯ ಬೆಂಗಳೂರು

ಇತ್ತೀಚೆಗಿನ ದಿನಗಳಲ್ಲಿ ನಮ್ಮ ಹಿರಿಯ ನಾಗರೀಕರು ಎದುರಿಸುತ್ತಿರುವ ವಿವಿಧ ರೀತಿಯ ತೊಂದರೆಗಳಲ್ಲಿ ಒಂಟಿತನ ವಿಶೇಷವಾದುದು. ಈ ವಯಸ್ಸಿನಲ್ಲಿ ತಮ್ಮನ್ನು ನೋಡಿಕೊಳ್ಳಬೇಕಾದವರು, ಅದರಲ್ಲೂ ಮುಖ್ಯವಾಗಿ ಮಕ್ಕಳು ಜೀವನ ನಿರ್ವಹಣೆಗಾಗಿ ತಮ್ಮ ತಂದೆ-ತಾಯಿಗಳನ್ನು ಬಿಟ್ಟು ದೂರದ ಊರುಗಳಲ್ಲಿ ನೆಲೆಸುವ ಅನಿವಾರ್ಯ ಸ್ಥಿತಿ ತೀರ ಸಾಮಾನ್ಯವಾಗಿದೆ. ಹಾಗೆಯೇ ಹೊಣೆಗಾರಿಕೆ ಹೊರುವ ಮಕ್ಕಳ ನಿರ್ಲಕ್ಷ್ಯದಿಂದಲು ಹಿರಿಯ ನಾಗರೀಕರು ಒಂಟಿತನ ಮತ್ತು ತನ್ಮೂಲಕ ಖಿನ್ನತೆಯಿಂದ ಬಳಲಬೇಕಾದ ಉದಾಹರಣೆಗಳು ಸಮಾಜದಲ್ಲಿ ಸಾಕಷ್ಟಿವೆ. ಈ ಒಂಟಿತನ, ಕ್ಷೀಣಿಸುತ್ತಿರುವ ಆರೋಗ್ಯ, ಕುಟುಂಬ ಕಲಹಗಳು, ಆಸ್ತಿ ಸಂಬಂಧಿ ವ್ಯಾಜ್ಯಗಳು ಮತ್ತು ಹಣಕಾಸಿನ ತೊಂದರೆಗಳು ಅವರ ದಿನನಿತ್ಯದ ಬದುಕನ್ನು ಹೈರಾಣಾಗಿಸುತ್ತವೆ. ಜೀವನದ ಮುಸ್ಸಂಜೆಯಲ್ಲಿರುವ ಈ ಹಿರಿಯ ಜೀವಗಳ ಸಂಕಷ್ಟಗಳನ್ನು ಗಮನದಲ್ಲಿಟ್ಟುಕೊಂಡು, ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರವು ಹಿರಿಯ ನಾಗರೀಕರಿಗೆ ಸಂವಿಧಾನದಲ್ಲಿ ನಿರ್ದೇಶಿಸಿದಂತೆ ಘನತೆ, ಸ್ವಾತಂತ್ರ್ಯ, ಸ್ವಾಭಿಮಾನದಿಂದ ಸುಗಮ ಬದುಕನ್ನು ಸಾಗಿಸಲು ಅವರಿಗೆ ದೊರಕಬೇಕಾದ ಎಲ್ಲಾ ರೀತಿಯ ಸೌಲಭ್ಯಗಳು ಮತ್ತು ಸವಲತ್ತುಗಳು ಸುಲಭ ರೀತಿಯಲ್ಲಿ ಮತ್ತು ಶೀಘ್ರವಾಗಿ ದೊರಕುವಂತೆ ಸಹಾಯ ಮಾಡುವ ಉದ್ದೇಶಗಳಿಂದ ಎಲ್ಲಾ ರಾಜ್ಯಗಳಿಗೂ ಸುತ್ತೋಲೆಗಳನ್ನು ಕಳುಹಿಸಿದೆ. ಕೇಂದ್ರ ಸರ್ಕಾರವು ಈ ನಿಟ್ಟಿನಲ್ಲಿ "ಪೋಷಕರು ಮತ್ತು ಹಿರಿಯ ನಾಗರೀಕರ ರಕ್ಷಣಾ ಕಾಯ್ದೆ 2007"ನ್ನು ಕಾರ್ಯರೂಪಕ್ಕೆ ತಂದು ಅವರಿಗೆ ಬೇಕಾದ ಸಂರಕ್ಷಣೆಗಾಗಿ ಹಿರಿಯ ನಾಗರೀಕರ ವಸತಿ ಸೌಲಭ್ಯ ಸ್ಥಾಪಿಸಿ ಅವರ ಜೀವನ ನಿರ್ವಹಣೆ ಮತ್ತು ಆಸ್ತಿಯ ರಕ್ಷಣೆಗಾಗಿ ದೊರಕಬೇಕಾದ ಸವಲತ್ತುಗಳ ಬಗೆಗೆ ಮನವರಿಕೆ ಮಾಡುತ್ತಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಮತ್ತು ನಿಮ್ಹಾನ್ಸ್ ಸಂಸ್ಥೆ ಜಂಟಿಯಾಗಿ ಜನವರಿ 29, 2018 ರಂದು ಬೆಂಗಳೂರಿನ ನಿಮ್ಹಾನ್ಸ್ ಸಭಾಂಗಣದಲ್ಲಿ ಹಿರಿಯ ನಾಗರೀಕರ ಹಿತದೃಷ್ಟಿಯಲ್ಲಿ ಶಿಬಿರವೊಂದನ್ನು ಏರ್ಪಡಿಸಲಾಗಿತ್ತು. "ಹಿರಿಯ ನಾಗರೀಕರ ಸ್ನೇಹಿ ಕರ್ನಾಟಕ : ನಮ್ಮ ಗುರಿ" ಎಂಬ ಹೆಸರಿನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಮಾಜದ ಕೆಳ ವರ್ಗದ ಮತ್ತು ಮಧ್ಯಮ ವರ್ಗದ ಸಾವಿರಾರು ಹಿರಿಯ ನಾಗರೀಕರು ಭಾಗವಹಿಸಿ ಪ್ರಯೋಜನ ಪಡೆದು ತೃಪ್ತಿ ಪಟ್ಟಿರುತ್ತಾರೆ. ಸಾಮಾಜಿಕ ಕಳಕಳಿ ಇರುವ ರಾಜ್ಯದ ಪೊಲೀಸ್ ಇಲಾಖೆ, ಆರೋಗ್ಯ, ಕಾನೂನು ಸೇವೆ, ವಿಮೆ, ಅಂಚೆ, ಪಿಂಚಣಿ ಯೋಜನೆ, ಕಾರ್ಮಿಕ ಇಲಾಖೆ, ಹಿರಿಯ ನಾಗರೀಕರ ಸಬಲೀಕರಣ, ಸಾರಿಗೆ, ಜಿಲ್ಲಾಡಳಿತ, ಸಮಾಜ ಕಲ್ಯಾಣ ಇಲಾಖೆ ಮತ್ತು ಜಯದೇವ ಆಸ್ಪತ್ರೆ, ವಿಕ್ಟೋರಿಯಾ ಮತ್ತು ನಿಮ್ಹಾನ್ಸ್ ಆಸ್ಪತ್ರೆಗಳು ಇದರಲ್ಲಿ ಭಾಗವಹಿಸಿ ಪರಿಣಿತ ವೈದ್ಯರಿಂದ ಉಚಿತ ಆರೋಗ್ಯ ಶಿಬಿರವನ್ನು ನೆರವೇರಿಸಿ ಸಹಕಾರ ಮತ್ತು ಮಾರ್ಗದರ್ಶನ ನೀಡಿದರು. ಆ ದಿನ ಅಂಗಾಂಗ ದಾನದ ವಿಚಾರದಲ್ಲಿ ಅಲ್ಲಿ ಬಂದವರಿಗೆ ಬಹಳಷ್ಟು ಮನವರಿಕೆ ಮಾಡಿ ಹಲವಾರು ಜನ ಅಂಗಾಂಗ ದಾನ ಮಾಡಿದ್ದರು. ಹಿರಿಯ ನಾಗರೀಕರಿಗೆ ದೊರಕಬೇಕಾದ ಯೋಜನೆಗಳು ಮತ್ತು ಅದರ ನಿಯಮಾವಳಿಗಳ ಬಗೆಗೆ ಅರಿವು ಮೂಡಿಸುವುದು ಮತ್ತು ಅಂತಹ ಸವಲತ್ತುಗಳು ಅವರಿಗೆ ತಲುಪುವಂತಹ ಕಾರ್ಯಕ್ರಮಗಳನ್ನು ನಿರೂಪಿಸಿ, ಅದನ್ನು ಕಾರ್ಯರೂಪಕ್ಕೆ ತಂದು ಹಿರಿಯ ನಾಗರೀಕರಿಗೆ ತಲುಪುವಂತೆ ಮಾಡುವುದು ಈ ಕಾರ್ಯಕ್ರಮದ ಗುರಿಯಾಗಿತ್ತು.

ಸರ್ಕಾರ ನೀಡುವ ಸವಲತ್ತುಗಳ ಬಗೆಗೆ ಅರಿವು ಮತ್ತು ಮಾಹಿತಿ ಇಲ್ಲದೆ ಹಿರಿಯ ನಾಗರೀಕರು ಪರದಾಡುತ್ತಾರೆ ಮತ್ತು ಹಲವು ಬಾರಿ ಅನವಶ್ಯಕವಾಗಿ ಅಲೆದಾಡುತ್ತಾರೆ ಕೂಡ. ಅವುಗಳು ಎಲ್ಲಿ ಮತ್ತು ಹೇಗೆ ದೊರಕುತ್ತವೆ ಮತ್ತು ಯಾರನ್ನು ಸಂಪರ್ಕಿಸಬೇಕು ಎನ್ನುವ ಬಗೆಗೂ ಗೊಂದಲದಲ್ಲಿರುತ್ತಾರೆ ಭ್ರಷ್ಟಾಚಾರ ಮತ್ತು ನೌಕರ ಶಾಹಿಯ ಸಿಲುಕಿನಲ್ಲಿ ಸಿಲುಕಿಕೊಂಡು ಭ್ರಮನಿರಸನಗೊಳ್ಳುತ್ತಾರೆ. ಅಂತೆಯೇ ಈ ಎಲ್ಲಾ ಅಡೆತಡೆಗಳನ್ನು ಹೋಗಲಾಡಿಸಲು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಮತ್ತು ನಿಮ್ಹಾನ್ಸ್ ಸಂಸ್ಥೆಗಳು ಕೈ

ಜೋಡಿಸಿದ್ದು, ಈ ನಿಟ್ಟಿನಲ್ಲಿ ಬೆಂಗಳೂರು ಮತ್ತು ಕೋಲಾರದಲ್ಲಿ ಮೊದಲ ಹೆಜ್ಜೆ ಇಟ್ಟಿವೆ. ಇದನ್ನು ಕ್ರಮೇಣ ರಾಜ್ಯದ ಇತರ ಜಿಲ್ಲೆಗಳಿಗೂ ವಿಸ್ತರಿಸುವ ಮಹದಾಶೆ ಅವರಿಗಿದೆ. ಹಾಗೆಯೇ ಈ ಅರಿವು ಪಸರಿಸುವ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಯೋಜನೆಗಳು ಅವರ ಚಿಂತನೆಯಲ್ಲಿದೆ.

ಈ ಕಾರ್ಯದಲ್ಲಿ ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದೊಂದಿಗೆ ಅವರ ಸಂಗಡ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್, ಅಖಿಲ ಭಾರತ ಬ್ಯಾಂಕ್ ನಿವೃತ್ತ ನೌಕರರ ಸಂಘ, ಇನ್ನಿತರ ಕೆಲವು ಸ್ವಯಂ ಸೇವಕ ಸಂಘಗಳು ಮತ್ತು ಸರಕಾರದ ಕೆಲವು ಇಲಾಖೆಗಳ ಅಧಿಕಾರಿಗಳು ಕೈಜೋಡಿಸಿರುವುದು ಒಂದು ಸ್ತುತ್ಯರ್ಹ ಬೆಳವಣಿಗೆ. ಅದರಲ್ಲಿ ಈ ಸವಲತ್ತುಗಳಲ್ಲಿ ಮುಖ್ಯವಾಗಿ ಭಾರತೀಯ ರೆಡ್‌ಕ್ರಾಸ್‌ನಿಂದ ಅತ್ಯುತ್ತಮ ಔಷಧಿಗಳು ಒದಗುವ ವಿವರ, ಮಿಂಟೊ ಆಸ್ಪತ್ರೆ ಆವರಣದಲ್ಲಿ ರೆಡ್‌ಕ್ರಾಸ್‌ನ ಆಪ್ಟಿಕಲ್ ಸೆಂಟರ್‌ನಲ್ಲಿ ಕನ್ನಡಕಗಳನ್ನು ಅತೀ ಕಡಿಮೆ ದರದಲ್ಲಿ ಯಾವುದೇ ಲಾಭವಿಲ್ಲದೆ ವಿತರಿಸುವ ಬಗೆಗೆ ಹಾಗೂ ವಿಕಲಚೇತನರಿಗೆ ಉಚಿತವಾಗಿ ದೊರಕಿಸುವ ಕೃತಕ ಅಂಗಗಳು ಮತ್ತು ಲಯನ್ಸ್‌ಕ್ಲಬ್ ಇಂಟರ್ ನ್ಯಾಷನಲ್‌ನಲ್ಲಿ ಒದಗುತ್ತಿರುವ ಉಚಿತ ಕನ್ನಡಕಗಳು ಮತ್ತು ಉಚಿತ ಕ್ಯಾಟೆರಾಕ್ಟ್ ಶಸ್ತ್ರ ಚಿಕಿತ್ಸೆ ನಡೆಸುವ ಮಾಹಿತಿಯನ್ನು ನೀಡಲಾಯಿತು. ಅದರೊಂದಿಗೆ ರೆಡ್‌ಕ್ರಾಸ್‌ನಿಂದ ಕಡುಬಡವರಿಗೆ ಸಂದಿಗ್ಧ ಪರಿಸ್ಥಿತಿಯಲ್ಲಿ ರಕ್ತದ ಅವಶ್ಯಕತೆ ಬಿದ್ದಲ್ಲಿ ಬದಲಿ ರಕ್ತದಾನ ಕೇಳದೇ ಉಚಿತವಾಗಿ ರಕ್ತವನ್ನು ಒದಗಿಸುವ ಬಗ್ಗೆ ಇಲ್ಲಿ ಮಾಹಿತಿ ನೀಡಲಾಯಿತು. ಲಯನ್ಸ್ ಕ್ಲಬ್‌ನವರು WESRV ಎನ್ನುವ APP ಅನ್ನು ಸ್ಮಾರ್ಟ್ ಫೋನ್ ಹಾಗೂ ಅಂತರ್ಜಾಲ ಮೂಲಕ ಸೇವೆಗಳನ್ನು ಕೋರುವ ಮತ್ತು ಪೂರೈಸುವ ಒಂದು ಸಾಮೂಹಿಕ ವೇದಿಕೆಯನ್ನು ರೂಪಿಸಿದ್ದು, ಹಿರಿಯ ನಾಗರೀಕರು ಈ APP ಮೂಲಕ ಸೇವೆಯನ್ನು ಕೋರಿದಾಗ, ಅದನ್ನು ಹತ್ತಿರವಿರುವ ಸ್ವಯಂ ಸೇವಕರು ಗಮನಿಸಿ ಸೇವೆಯನ್ನು ಪೂರೈಸಲು ಮುಂದಾಗುತ್ತಾರೆ. ಈ ನಿಟ್ಟಿನಲ್ಲಿ ನೈಟಿಂಗೇಲ್, ಹೆಲ್ಪೇಜ್ ಕೇರ್‌ನಂತ ಸಂಸ್ಥೆಗಳಿಂದ ಕೂಡಾ ಹಿರಿಯ ನಾಗರೀಕರಿಗೆ ಸಹಾಯ ದೊರಕುತ್ತಿದೆ. ಹಾಗೆಯೇ ಭಾರತ ಸರ್ಕಾರದ ಅಂಚೆ ಇಲಾಖೆ ಭಾರತೀಯ ವಿಮಾ ಸಂಸ್ಥೆಗಳು ಹಿರಿಯ ನಾಗರೀಕರಿಗಾಗಿ ವಿವಿಧ ರೀತಿಯ ವಿಶೇಷ ಸೌಲಭ್ಯಗಳನ್ನು ನೀಡುತ್ತಿದ್ದಾರೆ. ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರವು ಜೀವನದ ಮುಸ್ಸಂಜೆಯಲ್ಲಿರುವವರಿಗೆ ನೆಮ್ಮದಿಯನ್ನು ನೀಡುವಲ್ಲಿ ಮಹತ್ತರ ಹೆಜ್ಜೆ ಇಡುತ್ತಿರುವುದು ಸಂತೃಪ್ತಿಯ ವಿಷಯ. (ಲೇಖಕರು ಈ ಶಿಬಿರದ ಸಫಲತೆಗೆ ಸಂಪೂರ್ಣವಾಗಿ ಕೈಜೋಡಿಸಿದವರು).

## ಅಭಿನಂದನೆಗಳು



**ಇತ್ತೀಚೆಗೆ ಹೊಸಕೋಟೆಯಲ್ಲಿ ನಡೆದ ರಾಜ್ಯ ಮಟ್ಟದ ಹಿರಿಯರ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಸಂಘದ ಹಿರಿಯ ಸದಸ್ಯೆ ಶ್ರೀಮತಿ ಮುಕ್ತಾ ಉದಯರಾಜ್ ಶೆಟ್ಟಿಯವರು 65 ವರ್ಷಕ್ಕಿಂತ ಮೇಲ್ಪಟ್ಟ ಸ್ಪರ್ಧೆಗಳಲ್ಲಿ ಭಾಗವಹಿಸಿ ಗುಂಡು ಎಸೆತದಲ್ಲಿ ಪ್ರಥಮ ಸ್ಥಾನ, ಈಟಿ ಎಸೆತದಲ್ಲಿ ಪ್ರಥಮ ಸ್ಥಾನ, 100 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನ, 200 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನವನ್ನು ಪಡೆಯುವುದರೊಂದಿಗೆ ದಿನಾಂಕ 21.02.2018 ರಂದು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದಾರೆ. ಶ್ರೀಮತಿ ಮುಕ್ತಾ ಶೆಟ್ಟಿಯವರಿಗೆ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.**

# ಮದ್ವಾಚಾರ್ಯರು (ಕ್ರಿಸ್ತ ಶಕ 1238-ಕ್ರಿಸ್ತ ಶಕ 1317)



ಕೆ. ಜಯಪ್ರಕಾಶ ಶೆಟ್ಟಿ

ಮದ್ವಾಚಾರ್ಯರು ಇಪ್ಪತ್ತೊಂದು ಜನರು ಮಾಡಿರುವ ಬ್ರಹ್ಮಸೂತ್ರ ಭಾಷ್ಯ ಸೂತ್ರಗಳನ್ನು ನಿರಾಕರಿಸಿದರು. ಮದ್ವರ ಭಾಷ್ಯ ಹೆಚ್ಚಾಗಿ ಭಗವಂತನ ಮಹಿಮೆಯನ್ನು ತೋರಿಸುತ್ತದಲ್ಲದೆ, ವಿದ್ವಾಸಂರಿಗೂ, ಪಂಡಿತರಿಗೂ ಸುಲಭವಾಗಿ ಅರ್ಥವಾಗುತ್ತಿದ್ದಿತು.

ಪ್ರತಿಯೊಬ್ಬರೂ ಕೇಳಿದ ಪ್ರಶ್ನೆಗಳಿಗೆ ಮದ್ವರು ಸಮರ್ಪಕವಾಗಿ ಉತ್ತರಿಸಿಬಿಟ್ಟರು, ಪ್ರಭಾಕರ, ವಿಶಶಿರಾ, ನೈಯಾಯಿಕಮ್ ಬೌದ್ಧ, ಚಾರ್ವಕ ಸಿದ್ಧಾಂತಗಳನ್ನು ಖಂಡಿಸಿದರು. ಬಂದಿದ್ದ ವಿದ್ವಾಂಸರು ಹಲವು ರೀತಿಯಿಂದ ಮದ್ವಾಚಾರ್ಯರನ್ನು ತಮ್ಮ ಪ್ರಶ್ನೆಗಳಿಂದ ಒರೆಹಚ್ಚಿ ನೋಡಿದರು. ಆದರೆ ಆಚಾರ್ಯರ ವಾದ ವೈಖರಿ, ತರ್ಕ ಇವು ಅವರೆಲ್ಲರನ್ನು ಸೋಲುವಂತೆ ಮಾಡಿತು. ಆಚಾರ್ಯರು ಹೋದಲೆಲ್ಲ ಗುರುಗಳ ಭಾಷ್ಯವನ್ನು ಸಮರ್ತಿಸಿದ್ದರು. ಜ್ಞಾನ ಮಾರ್ಗವನ್ನು ಪಡೆಯಲು ಇಚ್ಛಿಸುತ್ತಿದ್ದ ಅನೇಕ ಜನರಿಗೆ ಬೋದಿಸಿದರು. ಚಿಕ್ಕ ಹುಡುಗನಿದ್ದಾಗಲೇ ಕಾಳಿಂಗ ಸರ್ಪವನ್ನು ಕಾಲಲ್ಲಿ ಹೊಸಕಿ ಹಾಕಿದ್ದ ಆಚಾರ್ಯರಿಗೆ ಭಯವೆಂದರೇನೆಂದೇ ತಿಳಿಯದು. ಅಂತಹ ಧೀರರು ಎಂದೂ ಇನ್ನೊಬ್ಬರಿಗೆ ತಲೆ ಬಾಗಲಿಲ್ಲ.

ವಾಯುದೇವರ ಕ್ರೀಡಾದ್ವಿಗುಣ ವಿಶಿಷ್ಟವಾದ ಹನುಮ, ಭೀಮ ಮತ್ತು ಮದ್ವ ಎಂಬ ಮೂರು ರೂಪಗಳು ಬಲ ರೂಪವಾದವುಗಳನ್ನು ಹಾಗೂ ಜ್ಞಾನಪೂರ್ಣವಾದವುಗಳು. ಮೊದಲನೆಯದು ಹನುಮರೂಪ. ಶ್ರೀರಾಮನ ಚರಿತ್ರೆಯನ್ನು ಶಿಷ್ಯರಿಗೆ ಉಪದೇಶಿಸುತ್ತದೆ. ಎರಡನೆಯದಾಗಿ ಭೀಮರೂಪ ಶತ್ರುಗಳಾದ ಕೌರವರ ಸೇನೆಯನ್ನು ನಾಶ ಮಾಡುವಂತಹುದಾಗಿದೆ. ಮೂರನೆಯದಾದ ಮಧ್ವಾತಾರವು ಶ್ರೀ ಹರಿಯ ಪ್ರೀತಿಯನ್ನುದ್ದೇಶಿಸಿ ಭಾಷ್ಯ ಗ್ರಂಥ ರಚನೆ ಮಾಡಿದೆ. ಶ್ರೀ ವಾಯುದೇವರ ಮೂರು ರೂಪಗಳ ಮಹಿಮೆಯನ್ನು ತಿಳಿದವನು ವೇದಾರ್ಥವನ್ನು ಸರಿಯಾಗಿ ತಿಳಿದವನಾಗಿ ವಾಯುದೇವರ ಅನುಗ್ರಹಕ್ಕೆ ಪಾತ್ರನಾಗುತ್ತಾನೆ.

ಒಮ್ಮೆ ಮದ್ವಾಚಾರ್ಯರು ಜನರ ಶ್ರದ್ಧಾಭಕ್ತಿಗಳಿಗೆ ಪೂರಕವಾಗುವಂತೆ ಶ್ರೀಕೃಷ್ಣನ ಪ್ರತಿಮೆಯೊಂದನ್ನು ಸ್ಥಾಪಿಸುವ ಬಗೆಗೆ ಆಲೋಚಿಸಿದರು. ಮಹಾತ್ಮರು ಬಯಸಿದುದು ಆಗುತ್ತದೆಯಲ್ಲವೇ? ಮದ್ವಾಚಾರ್ಯರ ದಿವ್ಯದೃಷ್ಟಿಗೆ ಶ್ರೀಕೃಷ್ಣನ ವಿಗ್ರಹವೊಂದು ಸಮುದ್ರದಲ್ಲಿ ಅಡಗಿ ಕುಳಿತಿರುವುದು ಹೊಳೆಯಿತು.



ಕಲಿಯುಗ ಪ್ರಾಪ್ತವಾದಾಗ ದ್ವಾರಕೆಯಿಂದ ಹೊರಟ ಹಡಗೊಂದರಲ್ಲಿ ಗೋಪಿಚಂದನದ ಗಡ್ಡೆಗಳನ್ನಿರಿಸಿ ಕಳುಹಿಸಲಾಗಿತ್ತು. ಆ ಹಡಗು ಉಡುಪಿಗೆ ಬರುವಾಗ ಉಡುಪಿಗೆ ಸಮೀಪದ ವಡಭಾಂಡೇಶ್ವರದ ಬಳಿ ಕಡಲ ತೀರದ ಬಂಡೆಕಲ್ಲಿಗೆ ತಾಗಿ ಒಡೆದು ನೀರು ಪಾಲಾಯಿತು. ಆಗ ಆ ಗೋಪಿಚಂದನದ ಗಡ್ಡೆಯೊಳಗೆ ಸೇರಿ ಹೋಗಿದ್ದ ಕೃಷ್ಣನ ವಿಗ್ರಹವು ನೀರು ಪಾಲಾಗಿ ಅದು ಜಲಧಿವಾಸದಲ್ಲಿರಬೇಕಾಯಿತು. ಮದ್ವಾಚಾರ್ಯರು ಇದನ್ನು ಧ್ಯಾನಯೋಗದಿಂದ ತಿಳಿದು ಕಡಲ ತೀರಕ್ಕೆ ಬಂದವರಾಗಿ, ಸಮುದ್ರತಳದಲ್ಲಿ ಮುಳುಗಿದ್ದ ಶ್ರೀಕೃಷ್ಣನನ್ನು ಉಪ್ಪು ನೀರಿನಿಂದ ತೆಗೆಸಿ ಉಡುಪಿಗೆ ಹೊತ್ತು ತಂದರು. ಜಲಾಧಿವಾಸದ ಅನಂತರ ಮಠದಲ್ಲಿ ಪ್ರತಿಷ್ಠಾಪಿಸಿದರು ಎಂದು ಹೇಳುತ್ತಾರೆ.

ಗೋಪಿ ಚಂದನದ ದೊಡ್ಡ ಹೆಂಟೆಯನ್ನು ಆಚಾರ್ಯರು ಹೊರಿಸಿಕೊಂಡು ಉಡುಪಿಗೆ ತರುವಾಗ ಕೈಜಾರಿ ಅದು ಒಂದು ಕಲ್ಲಿನ ಮೇಲೆ ಬಿದ್ದು ಒಡೆದು ಹೋಯಿತು. ಆ ಸ್ಥಳ ಮುಂದೆ (ಒಡೆ) ಒಡೆಬಂಡೇಶ್ವರ ಎಂದು ಪ್ರಸಿದ್ಧವಾಗಿದೆ. ಸ್ವಾರಸ್ಯವೆಂದರೆ ಒಡೆದ ಹೆಂಟೆಯಿಂದ ಸುಂದರವಾದ ಶ್ರೀಕೃಷ್ಣನ ವಿಗ್ರಹ ಹೊರ ಬಂದಿದ್ದಿತು.

ಒಮ್ಮೆ ಶ್ರೀ ಮದ್ವಾಚಾರ್ಯರು ತಮ್ಮ ದ್ವೈತ ಸಿದ್ಧಾಂತ ಪ್ರಚಾರ ಮಾಡುವ ಕಾರ್ಯವನ್ನು ಆರಂಭಿಸಬೇಕಾಗಿತ್ತು. ಇದು ಅವರ ಅವತಾರದ ಉದ್ದೇಶವು ಆಗಿತ್ತು. ಕೆಲಸ ಆರಂಭಿಸುವ ಮೊದಲು ವೇದಾವ್ಯಾಸರ ಆಶೀರ್ವಾದ ಪಡೆಯಬೇಕೆಂದು ಆಶಿಸಿ ಪುನಃ ಬದರಿಕಾಶ್ರಮಕ್ಕೆ ಹೊರಟರು. ಬದರೀ ವೃಕ್ಷಗಳ ಅನೇಕ ಗುಂಪುಗಳಿದ್ದುದರಿಂದಲೇ ಆ ಪ್ರದೇಶಕ್ಕೆ ಬದರೀ ಎಂಬ ಹೆಸರು ಬಂದಿತೆಂದು ಹೇಳುತ್ತಾರೆ. ಉತ್ತಾರಾಭಿಮುಖವಾಗಿ ಆಚಾರ್ಯರು ಸಂಚರಿಸುತ್ತಿರಲು ದಾರಿಯಲ್ಲಿ ಗಂಗಾನದಿ ಅಡ್ಡವಾಯಿತು. ಮುಂದಕ್ಕೆ ಪ್ರಯಾಣ ಬೆಳೆಸಲು ನದಿ ದಾಟಬೇಕಿತ್ತು. ಶತ್ರುಗಳ ಭಯ ಉಂಟಾಗಬಹುದೆಂದು ನದಿ ದಡದಲ್ಲಿ ಯಾವ ದೋಣಿಗಳನ್ನು ನಿಲ್ಲಿಸಿರಲಿಲ್ಲ. ಆ ಪ್ರದೇಶದ ರಾಜನೇ ಹೀಗೆ ಮಾಡಿದ್ದಿರಬೇಕು.

ಆದರೆ ಎದುರು ದಡದಲ್ಲಿ ಶಸ್ತ್ರಸಜ್ಜಿತವಾದ ಸೈನಿಕರ ಒಂದು ಪಡೆಯೇ ಇತ್ತು. ಅವರೆಲ್ಲ ಮುಸಲ್ಮಾನ ಸಿಪಾಯಿಗಳಾಗಿದ್ದರು. ಆಚಾರ್ಯರು ಈಜುಬಲ್ಲವರಾಗಿದ್ದರು. ಸ್ವಲ್ಪವೂ ಹೆದರದೆ ನದಿಗಿಳಿದರು. "ಶಿಷ್ಯರೇ, ಹೆದರಬೇಡಿ ಸಂಸಾರವೆಂಬ ಸಾಗರವನ್ನು ದಾಟಿ ಬಂದ ನಾವು ಗಂಗೆಯನ್ನು ದಾಟಿಸಲಾರೆವೆ? ನನ್ನ ಬೆನ್ನ ಹಿಂದೆಯೇ ನೀರಿಗಿಳಿಯಿರಿ ಹಾಗೆಯೇ ಒಬ್ಬರನೊಬ್ಬರು ಹಿಡಿದು ನದಿಯನ್ನು ದಾಟಿರಿ ಎಂದು ಹೇಳಿದರು.

ಗಂಗೆ ತುಂಬಿ ಹರಿಯುತ್ತಿದ್ದಳು. ಆಚಾರ್ಯರು ನದಿಯ ವಿಸ್ತಾರ, ಆಳ ಯಾವುದನ್ನೂ ಲೆಕ್ಕಿಸದೆ ಈಜುತ್ತಾ ನದಿಯನ್ನು ದಾಟಿಯೇ ಬಿಟ್ಟರು. ಅವರ ಹಿಂದೆ ಶಿಷ್ಯರೂ. ದಡಕ್ಕೆ ಬಂದ ಇವರನ್ನು ನೋಡಿದ ಸೈನಿಕರು ಅಬ್ಬ! ಎಂಥಹ ಧೀರ ಸನ್ಯಾಸಿ ಶಿಷ್ಯರನ್ನು ಸಾವಿನ ಭಯದಿಂದ ತಪ್ಪಿಸಿ ಈ ಮಹಾ ನದಿಯನ್ನೇ ದಾಟಿ ಬಿಟ್ಟರಲ್ಲ ಎಂದು ಆಶ್ಚರ್ಯಪಟ್ಟರು. ಆದರೂ ಸೈನಿಕರು ಆಚಾರ್ಯರು ಮತ್ತವರ ಶಿಷ್ಯರನ್ನು ಸುತ್ತುವರಿದುಕೊಂಡು ರಾಜಬೀದಿಯಲ್ಲಿ ಅವರನ್ನು ಕರೆದು ತಂದರು.

ಈ ಪದೇಶ ಮುಸ್ಲಿಂ ರಾಜನ ಆಳ್ವಿಕೆಯಲ್ಲಿತ್ತು. ರಾಜನ ಹೆಸರು ಜಲಾಲುದ್ದೀನ್ ಖಿಲ್ಜಿ. ನಾವು ದೇವರ ಅನುಗ್ರಹದಿಂದ ದೋಣಿಯ ನೆರವಿಲ್ಲದೆ ನದಿಯನ್ನು ದಾಟಿದೆವು. ನಿನ್ನ, ನನ್ನ, ನಮ್ಮೆಲ್ಲರ ದೇವರು ಒಬ್ಬನೇ ಯಾವ ದೇವರನ್ನು ನೀನು ಅಲ್ಲಾ ಎನ್ನುವೆಯೋ ಆತನೇ ನನಗೆ ನಾರಾಯಣ. ದೇವರು ಒಬ್ಬನೇ ಎಂದರು.

ಜಲಾಲುದ್ದೀನ್ ಖಿಲ್ಜಿ ಧಿಗ್ಭ್ರಾಂತನಾದ. ಆಚಾರ್ಯರ ಮುಖದ ಕಾಂತಿ, ವರ್ಚಸ್ಸು, ತೇಜಸ್ಸು ಇವೆಲ್ಲ ಕಂಡು ಬೆರಗಾದ. ಅವರ ಆತ್ಮ ಶಕ್ತಿ ಎಂಥ ದೊಡ್ಡದೆಸಿಸಿತು. ಕೂಡಲೇ ಆಚಾರ್ಯರನ್ನು ಸಕಲ ರಾಜ ಮರ್ಯಾದೆಗಳೊಂದಿಗೆ ನಾನಾ ವಿಧದಲ್ಲಿ ಸತ್ಕರಿಸಿದ. ಅಪಾಯವೊದಗಿದಾಗ ಯುಕ್ತಿಯಿಂದ ಹೇಗೆ ಪರಿಸ್ಥಿತಿಯನ್ನು ಎದುರಿಸಬೇಕೆಂಬುದು ಈ ಪ್ರಸಂಗದಿಂದ ಶಿಷ್ಯರಿಗೆ ಅರಿವಾಯಿತು.

ಆಚಾರ್ಯರು ವೇದವ್ಯಾಸರ ಆಶೀರ್ವಾದ ಪಡೆದು ಹಿಂದಿರುಗಿ ಬರುತ್ತಿರುವಾಗ ದಾರಿಯಲಿ ಗಂಗೆ ಎದುರಾದಳು. ಇಲ್ಲಿಯೂ ಗಂಗೆಯನ್ನು ದಾಟಲು ದೋಣಿ ಇರಲಿಲ್ಲ. ಸೂರ್ಯ ಮುಳುಗುವ ಸಮಯ ಬೇರೆ. ಮದ್ವಾಚಾರ್ಯರು ತಾವೊಬ್ಬರೇ ನದಿಯಲ್ಲಿಳಿದು ಜಲಸ್ತಂಬನ ವಿದ್ಯೆಯಿಂದ ಬಟ್ಟೆ ಒದ್ದೆಯಾಗದಂತೆ ಗಂಗೆಯನ್ನು ದಾಟಿಯೇ ಬಿಟ್ಟರು. ಅವರ ಬಟ್ಟೆಗಳು ಒದ್ದೆಯಾಗದಂತೆ ಕಂಡು ದಡದಲ್ಲಿದ್ದ ರಾಜನೂ, ಬ್ರಾಹ್ಮಣರೂ ಅಚ್ಚರಿಗಿಂಡು ಅವರಿಗೆ ಸಾಷ್ಟಾಂಗವೆರಗಿದರು.

ಮುಂದೆ ಆಚಾರ್ಯರು ಪ್ರಸಿದ್ಧ ಹಸ್ತಿನಾಪುರಕ್ಕೆ ಹೋಗಿ ಒಂದು ಮಠದಲ್ಲಿ ಮಳೆಗಾಲದ ನಾಲ್ಕು ತಿಂಗಳು ಚಾತುರ್ಮಾಸ್ಯ ವ್ರತವನ್ನು ಕೈಗೊಂಡರು. ಆಗ ಗಂಗೆಯು ಆಚಾರ್ಯರನ್ನು ಸೇವಿಸುವ ಇಚ್ಛೆ ಉಳ್ಳವಳಾಗಿ ಮಠದ ಸಮೀಪವೇ ಇದ್ದ ಮರದ ಬುಡದಲ್ಲಿ ಒಂದು ಶಾಕರೂಪದಿಂದ ಭೂಮಿಯನ್ನು ಸೀಳಿ ಕಾಣಿಸಿಕೊಂಡಳು. ಶರೀರ ರೂಪಳಾಗಿಯೂ ತೋರಿ ಆಚಾರ್ಯರಿಗೆ ದೂರದಿಂದಲೇ ನಮಸ್ಕರಿಸಿದಳು. ಇದರಿಂದ ಎಲ್ಲ ಶಿಷ್ಯರೂ ಚಕಿತಗೊಂಡರು. ಪಾಪನಾಶಿತ ಗಂಗೆಯನ್ನು ಕಂಡು ಆನಂದ ಹೊಂದಿದರು.

ಭಾರತೀಯ ತತ್ವ ಶಾಸ್ತ್ರದ ಆಧಾರಸ್ತಂಬಗಳಂತಿರುವ ಬ್ರಹ್ಮಸೂತ್ರ, ಭಗವದ್ಗೀತೆ, ಹಾಗೂ ಉಪನಿಷತ್ತುಗಳಿಗೆ ಭಾಷ್ಯ ಬರೆದು ಆಚಾರ್ಯರು ಭಾಷ್ಯಕಾರರೆನಿಸಿದರು. ಶ್ರೀ ಹರಿಯ ಅನುಗ್ರಹವಿಲ್ಲದೆ ಒಂದು ಹುಲ್ಲು ಕಡ್ಡಿಯೂ ಕದಲದು ಎಂಬುವುದನ್ನು ಸಾರುವ ಉಪನಿಷತ್ತನ್ನು ಮನಮುಟ್ಟುವಂತೆ ವ್ಯಾಖ್ಯಾನಿಸಿದರು.

ಯಾರು ಭಗವಂತನನ್ನು ಸೃಷ್ಟಿಕರ್ತನೆಂದು ವಿಧೇಯ ನಾಗಿರುವರೋ ಅವರು ಜೀವನ ನೀಡಿರುವುದೆಲ್ಲವನ್ನೂ ಪಡೆಯುವರು. ಸರಳತೆ, ಸಂಯಮ ಅಭ್ಯಾಸ ಮಾಡುವವರು ಇದನ್ನೂ ಮೀರಿ ಸ್ವರ್ಗ ಹೊಂದುವರು. ಜೀವ ಮತ್ತು ಆತ್ಮ

ಇವೆರಡೂ ಒಂದಕ್ಕೊಂದು ಬೆರೆತುದಾಗಿದೆ. ಶರೀರದೊಳಗೆ ಜೀವವು ಮನಸ್ಸಿನ ಬಯಕೆಗಳು ತೀರಲೆಂದು ಒಳಹೋಗುತ್ತದೆ. ಆತ್ಮ ಹೃದಯದಲಿ ವಾಸಿಸುತ್ತದೆ.

ಒಂದು ಸಲ ಪೂರ್ಣಪ್ರಜ್ಞರು ಗೋಮತಿ ನದಿ ತೀರದಲ್ಲಿದ್ದಾಗ ಒಬ್ಬ ಶೂದ್ರ ರಾಜನು ವೇದಗಳನ್ನು ನಿಂದಿಸತೊಡಗಿದನು. ಆಗ ಆಚಾರ್ಯರು ರಾಜನನ್ನು ಪ್ರಶ್ನಿಸಿದರು “ವೇದಗಳನ್ನು ಯಾಕೆ ನಿಂದಿಸುತ್ತಿರುವೆ? ಅವು ನಿನಗೇನು ಮಾಡಿದವು?” ಆಗ ಶೂದ್ರ ರಾಜ ಗಹಗಹಿಸಿ ನಗುತ್ತಾ “ಇನ್ನೇನು ನಿಂದಿಸಲೇ ಅಲ್ಲಾ ಸ್ವಾಮಿ, ವೇದಗಳು ಸುಳ್ಳು ಹೇಳುತ್ತಿವೆ. ಈ ಮಂತ್ರ ಹೇಳಿದ ತಕ್ಷಣ ಬೀಜಗಳು ಮೊಳೆತು ಸಸಿಯಾಗಿ ಫಲಪುಷ್ಪ ನೀಡುತ್ತದೆ ಎಂದು ನಿಮ್ಮ ವೇದ ಹೇಳುತ್ತದೆ. ಆದರೆ ವಾಸ್ತವದಲ್ಲಿ ಅದು ಆಗುವದೇ ಇಲ್ಲ. ಇದಕ್ಕೆ ಏನು ಹೇಳುವಿರಿ?” ಎಂದು ಪ್ರಶ್ನಿಸಿದನು.

ಆಚಾರ್ಯರು “ರಾಜ, ವೇದ ಹೇಳಿದುದು ನಿಜವಾಗಬೇಕಾದರೆ ವೇದ ಓದುವ ಅರ್ಹತೆ ಉಳ್ಳವನಷ್ಟೇ ವೇದ ಓದಬೇಕು. ಅರ್ಹತೆ ಇಲ್ಲದವನು ಓದಿದರೆ ಅದರಿಂದ ಫಲ ಹೊಂದಲಿಲ್ಲವೆಂದಾಕ್ಷಣ ವೇದ ಸುಳ್ಳಾಗುವುದಿಲ್ಲ” ಎಂದರು. ರಾಜನ ಮೊಂಡುತನ ನೋಡಿ ಇಂಥವನಿಗೆ ಪ್ರಮಾಣ ಅಗತ್ಯವೆಂದು, ಆಚಾರ್ಯರು ಉತ್ತರಿಸದೆ ಕೈಯಲ್ಲಿ. ಒಂದು ಮುಷ್ಠಿ ಹೆಸರುಕಾಳುಗಳನ್ನು ಹಿಡಿದುಕೊಂಡು ಮಂತ್ರ ಜಪಿಸಿದಾಕ್ಷಣ ಬೀಜಗಳು ಮೊಳೆತು ಸಸಿಯಾಗಿ ಪುಷ್ಪ ಬೀಜಗಳುಂಟಾದವು. ಆಗ ಆಚಾರ್ಯರು ಬೀರಿದ ಪ್ರಭೆಯಿಂದ ರಾಜ ನಿರುತ್ತೇಜಕನಾಗಿ ಹೋದನು. ಭಕ್ತಿಯಿಂದ ಆಚಾರ್ಯರ ಪಾದಮುಟ್ಟಿಇ ನಮಸ್ಕರಿಸಿದನು.

ಋಗ್ವೇದದಲ್ಲಿ ನಾವು ಈ ಭೂಮಿಯ ಮೇಲೆ ಹುಟ್ಟಿರುವುದು ಭಗವಂತನ ದಯೆಯಿಂದ ಆದುದರಿಂದ ನಿರಾಶೆ ತಾಳಬೇಕಾಗಿಲ್ಲ. ಹುಟ್ಟಿಸಿದ ದೇವರು ಹುಲ್ಲು ಮೇಯಿಸಿವುದಿಲ್ಲವೇ, ಅವನ ದಯೆ ನಮ್ಮನ್ನು ರಕ್ಷಿಸುತ್ತದೆ.



Advt.

# "ಸಪ್ತ ಕನ್ಯೆಯರ ಕನ್ಯೆ ಭೂಮಿಯಲ್ಲಿ ನಮ್ಮ ನಡೆ"

## ಪುಸ್ತಕ ಲೋಕಾರ್ಪಣೆ

ಡಾ. ಇಂದಿರಾ ಹೆಗ್ಗಡೆಯವರ ಪ್ರವಾಸಕಥನ "ಸಪ್ತ ಕನ್ಯೆಯರ ಕನ್ಯೆ ಭೂಮಿಯಲ್ಲಿ ನಮ್ಮ ನಡೆ" ದಿನಾಂಕ 16–12–2017ರಂದು ರವೀಂದ್ರ ಕಲಾಕ್ಷೇತ್ರದ ಮಹಿಳಾ ವಿಶ್ರಾಂತಿ ಗೃಹದಲ್ಲಿ ಡಾ.ವಿಜಯಮ್ಮ ಅವರಿಂದ ಲೋಕಾರ್ಪಣೆ ಗೊಂಡಿತು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ. ವಸುಂದರಾ ಭೂಪತಿಯವರು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಲೇಖಕಿಯರ ಸಂಘ ಐಬಿಎಚ್ ಪ್ರಕಾಶನ ಮತ್ತು ಯಸ್.ಆರ್ ಹೆಗ್ಡೆ ಚಾರಿಟೇಬಲ್ ಟ್ರಸ್ಟ್ ಜಂಟಿಯಾಗಿ ಪುಸ್ತಕ ಬಿಡುಗಡೆ ಸಮಾರಂಭವನ್ನು ಏರ್ಪಡಿಸಿತ್ತು

ಕೃತಿಯನ್ನು ಲೋಕಾರ್ಪಣೆಗೊಳಿಸಿದ ಡಾ. ವಿಜಯಾ ಅವರು ತನಗಾದ ಆಘಾತದಿಂದ ಖಿನ್ನತೆಯಿಂದ ಬಳಲುತ್ತಿದ್ದ ಡಾ. ಇಂದಿರಾ ಹೆಗ್ಗಡೆಯವರನ್ನು ತಟ್ಟಿ ಹುರುಪುಗಳನ್ನು ತುಂಬಿಸಿ ಬರವಣಿಗೆಯ ಕಡೆ ಮುಖ ಮಾಡಲು ಹೇಳಿದಾಗ ಆಕೆ ತನ್ನ ಹಿಂದಿನ ಕೃತಿಗಳನ್ನು ಪ್ರಕಟಿಸುವ ಆಶಯವನ್ನು ವ್ಯಕ್ತಪಡಿಸಿದರು. ಅಂತೆಯೇ ನನ್ನ ಸಲಹೆಯಂತೆ ಐ.ಬಿ.ಎಚ್ ಪ್ರಕಾಶನದ ಸಂಜಯ ಅಡಿಗರು ಆ ಕೆಲಸವನ್ನು ಕೈಗೆತ್ತಿಕೊಂಡರು ಎಂದರು.

ಪುಸ್ತಕದ ಪರಿಚಯವನ್ನು ಮಾಡಿದ ಡಾ. ಭೈರಮಂಗಲ ರಾಮೇಗೌಡ ಅವರು ಒಂದು ಪ್ರವಾಸಕಥನ ಹೇಗಿರ ಬೇಕೆಂಬುದಕ್ಕೆ ಇದೊಂದು ಮಾದರಿ ಕೃತಿ ಎಂದರು. ತಾನು ಓಡಾಡಿದ ನೆಲದಲ್ಲಿ ಪಡೆದ ಅನುಭವಗಳನ್ನು, ಎದುರಿಸಿದ ಆತಂಕಗಳನ್ನು ಬಹಳ ರೋಮಾಂಚನಕಾರಿ ಯಾಗಿ ವಿವರಿಸಿದ್ದಾರೆ ಎಂದರು.

ಮಾತೃ ಪ್ರಧಾನ ಕುಟುಂಬದಲ್ಲಿ ಜನಿಸಿ, ಅದರ ದಟ್ಟ ಪ್ರಭಾವದ ನಡುವೆ ಬೆಳೆದ ಇವರು 'ಬಂಟರು ಒಂದು ಸಮಾಜೋಸಾಂಸ್ಕೃತಿಕ ಅಧ್ಯಯನ' ಕೃತಿಯನ್ನು ರಚಿಸಿದ್ದಾರೆ. ಎಲ್ಲಾ ಜನಾಂಗಗಳ ಅಧ್ಯಯನಕ್ಕೆ ಉತ್ತಮ ಆಕರ ಗ್ರಂಥವಾಗುವ ರೀತಿಯಲ್ಲಿ ಆ ಕೃತಿಯನ್ನು ಇಂದಿರಾ ಹೆಗ್ಗಡೆಯವರು ನೀಡಿದ್ದಾರೆ. ತುಳುನಾಡಿನ ಸಂಸ್ಕೃತಿಯ ಬಗ್ಗೆ ಬುಡಕಟ್ಟುಗಳ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಕೆಲವೇ ಮಂದಿಗಳಲ್ಲಿಇಂದಿರಾ ಹೆಗ್ಗಡೆಯವರು ಕೂಡಾ ಒಬ್ಬರು.

ಮಾತೃ ಪ್ರದಾನ ಸಂಸ್ಕೃತಿಯ ಈಶಾನ್ಯ ಭಾರತದ ಏಳು ರಾಜ್ಯಗಳ ಸಂಸ್ಕೃತಿಯನ್ನು, ಉಪಾಸನೆಯನ್ನು ತನ್ನ ನೆಲದ ಸಂಸ್ಕೃತಿ ಮತ್ತುಉಪಾಸನೆಯ ಜೊತೆ ತುಲನೆಮಾಡಿ ಇಲ್ಲಿ ಬರೆದಿದ್ದಾರೆ. ಈ ಭಾಗಕ್ಕೆ 2010 ಮತ್ತು 2012ರಲ್ಲಿ ಹೀಗೆ ಎರಡು ಬಾರಿ ಪ್ರವಾಸ ಹೋಗಿದ್ದಾರೆ. ಜೊತೆಗೆ ಇಲ್ಲಿ ಸಿಕ್ಕಿಂ ಕೂಡಾ ಸೇರಿದೆ. ಇಲ್ಲಿ ಇಂದಿರಾ ಹೆಗ್ಗಡೆಯವರು ತಾವು ನೋಡಿದ ಬುಡಕಟ್ಟು ಜನಾಂಗದ ಕುಟುಂಬದ ಬೆರಳೆಣಿಕೆಯ ಮಂದಿ ಭಾಗವಹಿಸುವ ಒಂದು ಸರಳ ಮದುವೆಯ ಬಗ್ಗೆ ಬರೆಯುತ್ತಾ. ನಮ್ಮಲ್ಲಿ ಹೆಣ್ಣು ಹೆತ್ತವರನ್ನು ಶೋಷಿಸುವ ಆಡಂಬರದ ಮದುವೆಗಳ ಬಗ್ಗೆ ನೊಂದುಕೊಳ್ಳುತ್ತಾರೆ. ಹೋಟೆಲ್ ನೌಕರರಿಂದ ತೊಡಗಿ ಎಲ್ಲರನ್ನೂ ಮಾತನಾಡಿಸಿ ಅವರಿಂದ ಅವರ ಭಾವನೆಗಳನ್ನು, ವಿಷಯಗಳನ್ನು ಅಚ್ಚುಕಟ್ಟಾಗಿ ಇಂದಿರಾ ಹೆಗ್ಗಡೆಯವರು ಸಂಗ್ರಹಿಸಿದ್ದಾರೆ.

ಬಾಬ್ರಿ ಮಸೀದಿಯ ಬಗ್ಗೆ ತೀರ್ಪು ಬರುವ ದಿನ ಇವರು ಅಸ್ಸಾಮ್‌ನ ಗುವಾಹಾಟಿಯಲ್ಲಿ ಇದ್ದರು. ಅವರು ಬೆಂಗಳೂರು ಬಿಡುವ ಮೊದಲ ತೀರ್ಪಿನಿಂದ ರಾಜ್ಯದಲ್ಲಿ ಸಂಭವಿಸಬಹುದಾದ ಘಟನೆಗಳ ಬಗ್ಗೆ ಪೂರ್ವಬಾವಿ ಸುರಕ್ಷತೆಯನ್ನು ಕರ್ನಾಟಕ ಸರಕಾರ ಮಾಡಿತ್ತು. ಆದರೆ ಅಲ್ಲಿ ಹೋದಾಗ ಎಲ್ಲವೂ ಮಾಮೂಲಿಯಾಗಿತ್ತು. ಈ ಬಗ್ಗೆ ಇಂದಿರಾ ಹೆಗ್ಗಡೆಯವರು ಸ್ಥಳೀಯರನ್ನು ಪ್ರಶ್ನಿಸಿದಾಗ "ಹಸಿದ ಹೊಟ್ಟೆಗಳಿಗೆ ಮಸೀದಿಯೂ ಬೇಕಾಗಿಲ್ಲ ರಾಮನೂ ಬೇಕಾಗಿಲ್ಲ ಎನ್ನುತ್ತಾರೆ ಇವರು ಪ್ರಶ್ನಿಸಿದ ಜನಗಳು. ಅವರಿಗೆ ದುಡಿಮೆ ಮುಖ್ಯ.

ತನ್ನ ಸೈನಿಕ ಪತಿ ಬಾರದೆ ಇದ್ದರೂ ಅವರು ಬೆನ್ನಿಗೆ ಇದ್ದಾರೆ ಎಂಬ ಧೈರ್ಯವನ್ನು ಕಟ್ಟಿಕೊಂಡು ಕಾಮಾಖ್ಯ ಕ್ಷೇತ್ರದಲಿರುವ ಶಕ್ತಿ ದೇವತೆಯ ಗರ್ಭರೂಪದ,

ಯೋನಿರೂಪದ ಗರ್ಭಗೃಹಕ್ಕೆ ಇಳಿಯುವ ಅನುಭವವನ್ನು ವಿವರಿಸುತ್ತಾರೆ. ಮತ್ತೊಂದೆಡೆ ಗರ್ಭರೂಪದ ಯೋನಿ ಯೊಳಗೆ ಇರುವ ಶಿವಲಿಂಗದ ಬಗ್ಗೆ ಬರೆಯುತ್ತಾರೆ.

ಜಸ್ವಂತ್ಸಿಂಗ್ರಾವತ್ 1962ರಲ್ಲಿ ಚೀನಾ ಯುದ್ಧದಲ್ಲಿ ಏಕಾಂಗಿಯಾಗಿ ಹೋರಾಡಿದ ಕಥೆಯನ್ನು ಹಾಗೂ ಅವನ ಹೋರಾಟದ ಸಂದರ್ಭದಲ್ಲಿ ಅವರಿಗೆ ಆಹಾರ ಸರಬರಾಜು ಮಾಡಿದ ಇಬ್ಬರು ಸೋದರಿಯರ ಬಗ್ಗೆ ಬರೆಯುತ್ತಾರೆ. ಅವರಲ್ಲಿ ಒಬ್ಬಳು ಅವರ ಗುಂಡಿಗೆ ಆಹುತಿಯಾಗುತ್ತಾಳೆ. ಮತ್ತೊಬ್ಬಳನ್ನು ಸೆರೆಹಿಡಿದು ಚೀನಾದ ಸೈನಿಕ ಅಧಿಕಾರಿ ಮದ್ದು ಗುಂಡು ದಾಸ್ತಾನು ಇಟ್ಟ ಸ್ಥಳ ತೋರಿಸು ಎಂದು ಶಿಖರಗಳ ತುದಿಯಲ್ಲಿ ಕರೆದೊಯ್ಯುವಾಗ ಶಿಖರದಿಂದ ಅವನನ್ನೂ ಎಳದು ಕಣಿವೆಗೆ ಹಾರುತ್ತಾಳೆ. ಈ ಘಟನೆಯ ಬಗ್ಗೆ ಇಂದಿರಾ ಹೆಗ್ಗಡೆಯವರು ಬರೆಯುತ್ತಾ ಆ ಸೈನಿಕನಿಗೆ ಮರಣೋತ್ತರ ಪ್ರಶಸ್ತಿ ಬಂತು. ಆದರೆ ಈ ಇಬ್ಬರು ಹೆಣ್ಣ ಮಕ್ಕಳ ಬಗ್ಗೆ ಸೈನ್ಯದ ಇತಿಹಾಸದಲ್ಲಿ ದಾಖಲಾಗಿಲ್ಲ. ಮೌಖಿಕವಾಗಿ ಮಾತ್ರ ಉಳಿದು ಬಂದಿದೆ ಎಂದು ಬರೆಯುತ್ತಾರೆ.

ಹೀಗೆ ತಮಗೆ ದಕ್ಕಿದ ವಿಶಿಷ್ಟ ಅನುಭವಗಳನ್ನು ಬಹಳ ಸ್ವಾರಸ್ಯವಾಗಿ ವಿವರಿಸುತ್ತಾರೆ.

ಆಮೇಲೆ ಮಾತನಾಡಿದ ಇಂದಿರಾ ಹೆಗ್ಗಡೆಯವರು ತಾವು ತನಗಾದ ಆಘಾತದಿಂದ ಚೇತರರಿಸಿಕೊಳ್ಳಲಾಗದೆ ಖಿನ್ನತೆಯಲ್ಲಿ ಇದ್ದಾಗ ಬರವಣಿಗೆ ನಿಲ್ಲಿಸಬಾರದೆಂದು ಪದೇಪದೇ ತನ್ನನ್ನು ವಿಚಾರಿಸುತ್ತಿದ್ದ ಡಾ. ಬಿ.ಎ. ವಿವೇಕ ರೈ ಹಾಗೂ ತನ್ನ ಬರವಣಿಗೆ ನಿಲ್ಲ ಬಾರದು ಎಂದು ತನ್ನನ್ನು ಮತ್ತೆ ಹೊರ ಪ್ರಪಂಚಕ್ಕೆ ಎಳೆಯುತ್ತಾ ಮಂಗಳೂರು ಪರಿಸರದಲ್ಲಿ ಸಾರ್ವಜನಿಕ ವೇದಿಕೆಗಳಲ್ಲಿ ತನ್ನನ್ನು ಭಾಗವಹಿಸುವಂತೆ ಮಾಡಿದ ಭಾಸ್ಕರ. ರೈ ಕುಕ್ಕುವಳ್ಳಿ ಯವರನ್ನು ನೆನಸಿಕೊಂಡರು. ಬೆಂಗಳೂರಲ್ಲಿ ಈ ಕೃತಿ ಹೊರಬರುವಂತೆ ಮಾಡಿದ ವಿಜಯಾ ಅವರಿಗೂ ಈ ಪ್ರವಾಸಕಥನವನ್ನು ಹೊರತಂದ ಐ.ಬಿ.ಎಚ್ ಪ್ರಕಾಶನದ ಸಂಜಯ ಅಡಿಗಾ ಅವರಿಗೂ ಕೃತಜ್ಞತೆಯನ್ನು ಸಲ್ಲಿಸಿದರು.

ಸೌಜನ್ಯ : **ಸುಜಾತಾ ಕೊಡ್ಮಣ್**

## ಮೂಕ ಸಾಕ್ಷಿಯಾದಳು

ಹೊನ್ನಾವರದ ಹಳ ದೀಪುರದಲ್ಲಿ ಕಣ್ಣು ತೆರೆದವಳು
ಬಣ್ಣ ಬಣ್ಣದ ಕನಸು ಕಾಣುತ್ತಾ ಮುಂಬಯಿ ಸೇರಿದವಳು
ಚೈತನ್ಯದ ಚೆಲುಮೆ ನೇರ ನಡೆ ನುಡಿಯವಳು
ಜನ ಸೇವೆಯ ದೀಕ್ಷೆ ಪಡೆದವಳು

ಸುದೀಪನ ಬದುಕಿನಂಗಳಕೆ ದೀಪ
ಹಚ್ಚಬೇಕೆಂದು ಬಯಸಿದವಳು
ಅನ್ಯಾಯದ ವಿರುದ್ಧ ಸಿಡಿದು ನಿಂತವಳು
ಕಳ್ಳ ಸೋಹನನ ದುಷ್ಕೃತ್ಯಕ್ಕೆ ಕಡಿವಾಣ ತೊಡಿಸಲು ಯತ್ನಿಸಿದವಳು
ಸತ್ಯ ನಿಷ್ಠೆಗಾಗಿ ತನ್ನ ಬದುಕನ್ನು ಬಲಿಕೊಟ್ಟವಳು

ಬಲಾತ್ಕಾರಗೊಳಗಾಗಿ ಜೀವ್.....
ಹೂವಾಗಿ ಅರಳುವ ಮುನ್ನವೆ ಕಾಲಡಿಗೆ ಬಿದ್ದವಳು
ದಯಾಮರಣಕ್ಕೆ ನಾಂದಿ ಹಾಡಿದವಳು
ನಿಷ್ಕ್ರಿಯ ಸುಖ ಮರಣಕೆ ಮುನ್ನುಡಿ ಬರೆದವಳು

ಗಂಡಿನ ದುರಾಸೆಯ ಪರಮಾವಧಿಗೆ
ಮೂಕ ಸಾಕ್ಷಿಯಾದವಳು
ಹೆಣ್ಣಿನ ಕಣ್ಣೀರ ಕಥೆಗೆ ದುರಂತ ನಾಯಕಿಯಾದವಳು
ದಾದಿಯರ ನಿಸ್ವಾರ್ಥ ಪ್ರೀತಿಯಲಿ ಮಗುವಾಗಿ...


------ನೀನು --------ಪಡೆಯದಿರು
ಪಡೆದರೂ ಭಾರತ ದೇಶದಲಿ ಮಾತ್ರ ಹುಟ್ಟದಿರು
ಭಾರತ ದೇಶದಲಿ ಮಾತ್ರ ಮತ್ತೆ ಹುಟ್ಟು ಪಡೆಯದಿರು.

ಡಾ. ಕರುಣಾಕರ ಎಸ್ ಶೆಟ್ಟಿ ಪಣಿಯೂರು

# ಮಹಿಳಾವಿಭಾಗ - ರಜತ ಸಂಭ್ರಮ

ಮಹಿಳಾ ಸಾಧಕಿಯರಿಗೆ ಸನ್ಮಾನ





# ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 18ನೇ ವಾರ್ಷಿಕೋತ್ಸವ ಪೂಜಾ ಕಾರ್ಯಕ್ರಮ ಮತ್ತು ಯಕ್ಷಗಾನ








ವಾರ್ಷಿಕೋತ್ಸವದ ಅನ್ನಸಂತರ್ಪಣೆ ಪ್ರಾಯೋಜಕರಾದ ಕೊರ್ಗಿ ಗೋಪಾಲಶೆಟ್ಟಿ ದಂಪತಿ

# ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ
# ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ

## ಸಾಂಸ್ಕೃತಿಕ ವೈಭವ



## 'ಯುವೈಕ್ಯ' ರಾಷ್ಟ್ರೀಯ ಯುವ ಬಂಟರ ಸಮಾವೇಶ






Creating life-long bonds
Since 18 Years

HOME FOR ALL

AVAIL THE BENEFITS OF
PMAY
PRADHAN MANTRI AWAS YOJANA



MATHA Residency
NH-66, Haleyangadi




MATHA Residency
NH-66, Padubidri



MATHA Jyothi Residency
NH-66, Mukka



MATHA Residency
NH-66, Mulky



SAI MATHA GARDEN
Surathkal, Mangaluru.
Near Railway Station and International Airport Road, Surathkal

1. MATHA Emerald
2. MATHA Opal
3. MATHA Ruby
4. MATHA Diamond
5. MATHA Pearl
6. MATHA Crystal

Just pay ₹1 Lakhs* to book your dream home

Budget flats 15 Lakhs Onwards

Ready to occupy Flats
₹ 2,300 /-
Sft Onwards

Project Approved in All Nationalized Bank

MATHA Developers Pvt. Ltd.
Builders & Developers
mathadevelopers108@gmail.com, www.mathadevelopers.com

SURATHKAL : Thara Towers, 2nd Floor, International Airport Road, Surathkal Mangaluru-575 014.
MUMBAI : Shop No. 8, Bldg. No.1, New Venkateshwar Nagar, Cabin Road Bhayandar (E), Thane Dist - 401 105.

CREDAI

7259209966, 9980711966, 7022481666, 7259269966 (MUMBAI)

Best Investment with Assured Rental Return

ADVT.


ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ (ರಿ) ಮಂಗಳೂರು
ಬೆಂಗಳೂರು ಘಟಕದ ಉದ್ಘಾಟನಾ ಸಮಾರಂಭ
ಪಟ್ಲ ಪಂಚಮಿ
ಗಾನ ವೈವಿಧ್ಯ
ಮಹಿಳಾ ಯಕ್ಷಗಾನ
ತೆಂಕು ಯಕ್ಷಗಾನ
ತಾಳ ಮದ್ದಲೆ
ಬಡಗು ಯಕ್ಷಗಾನ
ದಿನಾಂಕ: 17.02.2018, ಶನಿವಾರ, ಬೆಳಿಗ್ಗೆ 10 ರಿಂದ, ಸ್ಥಳ: ಬಂಟರ ಸಂಘ ಬೆಂಗಳೂರು
ಗಾನ ವೈವಿಧ್ಯ
ತೆಂಕು – ಬಡಗು
ಪಟ್ಲ ಸತೀಶ್ ಶೆಟ್ಟಿ, ಸುರೇಶ್ ಶೆಟ್ಟಿ, ಪುಣಿಚಿತ್ತಾಯ, ವಿಶ್ವನಾಥ ಶೆಟ್ಟಿ, ವಿನಯ ಆರ್ ಶೆಟ್ಟಿ.
ವಾಲಿ ಮೋಕ್ಷ
ತಾಳ ಮದ್ದಲೆ
ಪುಣಿಚಿತ್ತಾಯ, ಉಮಾಕಾಂತ ಭಟ್, ಜಯಪ್ರಕಾಶ ಶೆಟ್ಟಿ ಪೆರ್ಮುದೆ, ವಾಸುದೇವ ರಂಗಾ ಭಟ್.
ಶಶಿಪ್ರಭೆ ಪರಿಣಯ
ಮಹಿಳಾ ಯಕ್ಷಗಾನ
ಬೇಗಾರ್ ಶಿವಕುಮಾರ್ ನಿರ್ದೇಶನದಲ್ಲಿ ಬಂಟರ ಸಂಘದ ಮಹಿಳೆಯರಿಂದ
ಕನಕಾಂಗಿ ಕಲ್ಯಾಣ
ತೆಂಕು
ಜಯರಾಮ ಆಚಾರ್ಯ, ಸದಾಶಿವ ಶೆಟ್ಟಿಗಾರ್ ಸಿದ್ಧಕಟ್ಟೆ, ವಾಸುದೇವ ರಂಗಭಟ್ಟ, ಲಕ್ಷ್ಮಣಕುಮಾರ್ ಮರಕಡ, ರಾಕೇಶ್ ರೈ ಅಡ್ಕ, ಪ್ರಶಾಂತ್ ಶೆಟ್ಟಿ ನೆಲ್ಯಾಡಿ, ರಕ್ಷಿತ್ ಶೆಟ್ಟಿ ಪಡ್ರೆ.
ಮಾರುತಿ ಪ್ರತಾಪ
ಬಡಗು
ಕುಮಟಾ ಗಣಪತಿ ನಾಯ್ಕ್, ತೋಟಿಮನೆ ಗಣಪತಿ ಹೆಗಡೆ, ಹಳ್ಳಾಡಿ ಜಯರಾಮ್ ಶೆಟ್ಟಿ, ಬೇಗಾರ್ ಶಿವಕುಮಾರ್, ಪ್ರಶಾಂತ್ ಹೆಗ್ಡೆ, ರಾಘು ಕಾಮನಮಕ್ಕಿ.
ಪಟ್ಲ ಸತೀಶ್ ಶೆಟ್ಟಿ ಮತ್ತು ಸುರೇಶ ಶೆಟ್ಟಿ ಶಂಕರನಾರಾಯಣರವರ ಸಾರಥ್ಯದಲ್ಲಿ ತೆಂಕು - ಬಡಗು ಯಕ್ಷಗಾನ
ಚಂಡೆ: ಚೈತನ್ಯ ಕೃಷ್ಣ ಪದ್ಯಾಣ, ರಾಧಾಕೃಷ್ಣ ಹಳ್ಳಿಹೊಳೆ
ಮದ್ದಲೆ : ಎ ಪಿ ಪಾಟಕ್, ಪ್ರಶಾಂತ್ ಶೆಟ್ಟಿ ವಗೆನಾಡು
ನಿಧಿ ಸಮರ್ಪಣೆ
ಬೆಂಗಳೂರು ಘಟಕದಿಂದ
ಅಶಕ್ತ ಕಲಾವಿದರಿಗೆ ಕಲಾ ಕಾಣಿಕೆ ಸಮರ್ಪಣೆ
ದಿ. ಆಲ್ಮನೆ ಪದ್ಮನಾಭರವರ ಶ್ರೀಮತಿಯವರಿಗೆ, ಶ್ರೀ ಕೊಪ್ಪಟೆ ಮುತ್ತ ರವರಿಗೆ
ಗೌರವ ಸಮರ್ಪಣೆ
ಅತಿಥಿ ಮತ್ತು ದಾನಿಗಳ
ಯಕ್ಷಗಾನವೇ ಜಾತಿ – ಯಕ್ಷಗಾನವೇ ಧರ್ಮ
ಉಚಿತ ಪ್ರವೇಶ


Aura Jewels
Dear Customers,
This Season - Double Your Celebrations
CHOOSE YOUR DESIGNS FROM VAST COLLECTION OF ANKLETS
NO MAKING
NO WASTAGE
CHARGES ON ALL SILVER ANKLETS
Enrol into our Advance Silver Purchase Plan

ADVT.




A Franchise Opportunity in Bengaluru you don't want to miss out on!

Playgroup | Nursery | Kindergarten

Over 125+ Successful Franchisee Centres

60000+ Satisfied Children and Parents

Most Admired and Fastest Growing Preschool Chain


For Franchise Enquiries across Karnataka

Call: 99000 83813 / 76763 80000 E mail: franchise@littleelly.com

Corporate Office: Learning Edge India Pvt. Ltd., #2, Honeydew Mansion, Near BDA Complex, HSR Layout, 7th Sector, Bangalore – 560 102 Tel: 080 2572 2464 / 2572 2474

www.littleelly.com

ADVT.


ನಿಮ್ಮ ಶೈಕ್ಷಣಿಕ ಗುರಿಗಳನ್ನು
ವಿಜಯ ಬ್ಯಾಂಕ್‌ನೊಂದಿಗೆ ಸಾಧಿಸಿ
ವಿಜಯ ಶೈಕ್ಷಣಿಕ ಸಾಲ
• ಭಾರತದಲ್ಲಿ ವ್ಯಾಸಂಗಕ್ಕೆ ₹ 10 ಲಕ್ಷವರೆಗಿನ ಸಾಲ
• ವಿದೇಶಗಳಲ್ಲಿ ವ್ಯಾಸಂಗಕ್ಕೆ ₹ 20 ಲಕ್ಷಗಳವರೆಗಿನ ಸಾಲ
• ಅರ್ಹ ಅಭ್ಯರ್ಥಿಗಳಿಗೆ ಹೆಚ್ಚಿನ ಮಿತಿಯನ್ನು ಪರಿಗಣಿಸಲಾಗುವುದು.
• ಸುಲಭ ಕಂತುಗಳು
• ಅನುಕೂಲಕರ ಮರುಪಾವತಿ ಅವಧಿ 15 ವರ್ಷಗಳವರೆಗೆ (ಮೊರಟೋರಿಯಂ ಅವಧಿಯ ನಂತರ)
• ವಿದ್ಯಾರ್ಥಿನಿಯರಿಗೆ 0.5% ಬಡ್ಡಿದರಲ್ಲಿ ವಿನಾಯಿತಿ
• ವಿದ್ಯಾಲಕ್ಷ್ಮಿ ಜಾಲತಾಣದಿಂದ (www.vidyalakshmi.co.in) ಅರ್ಜಿಗಳನ್ನು ಸಲ್ಲಿಸಬಹುದು
• ಅರ್ಹ ವಿದ್ಯಾರ್ಥಿಗಳಿಗೆ ಬಡ್ಡಿ ರಿಯಾಯಿತಿ ಸಹಾಯ ಸೌಲಭ್ಯ ಲಭ್ಯವಿದೆ
ಇಂದೇ ಶಾಖೆಯನ್ನು ಸಂಪರ್ಕಿಸಿ!
*ಷರತ್ತುಗಳು ಅನ್ವಯ
ವಿಜಯ ಬ್ಯಾಂಕ್
VIJAYA BANK
(ಭಾರತ ಸರಕಾರದ ಒಂದು ಉದ್ಯಮ)
ನಿಮ್ಮ ವಿಶ್ವಾಸಾರ್ಹ ಸಂಗಾತಿ
ವಿಜಯ ಬ್ಯಾಂಕ್ ಮತ್ತು ನೀವು
ಈಗ 24 x 7 ಸಮಯವೂ ಸಂಪರ್ಕದಲ್ಲಿ...
ನಮಗೆ Hello ಹೇಳಿ:
स्वच्छ भारत
एक कदम स्वच्छता की ओर

ADVT.

# ಮನುಷ್ಯ ಸ್ವಭಾವಗಳ ವೈವಿಧ್ಯತೆಗಳು



ಮಮತ ಎಸ್. ಹೆಗ್ಡೆ

ಜನನವಾದಾಗ ವ್ಯಕ್ತಿಯು ಮಾನವೀಯತೆಯ ಸದ್ಗುಣಗಳ ಜನ್ಮಸಿದ್ಧವಾದ ಸ್ವಭಾವವನ್ನು ಒಳಗೊಂಡಿದ್ದರೆ, ಕುಟುಂಬದ, ಸ್ನೇಹಿತರ, ಸಮಾಜದ ವಾತಾವರಣವು ಅವನನ್ನು ಬದಲಾಯಿಸುತ್ತಲೇ ಹೋಗುತ್ತದೆ. ಕೆಲವರಲ್ಲಿ ಸತ್ ಪ್ರಭಾವವು ಹೆಚ್ಚಾಗಿದ್ದರೆ, ದುಷ್ಟ ಪ್ರಭಾವವೂ ಅಷ್ಟೇ ಪರಿಣಾಮಕಾರಿಯಾಗಬಲ್ಲದು. ಮತ್ತೆ ಇತರರನ್ನು ತನ್ನಂತೆ ಬದಲಾಯಿಸಿಕೊಳ್ಳುವ ಪ್ರಭಾವ ಬೀರುವ ವ್ಯಕ್ತಿತ್ವವನ್ನು ಹೊಂದಿರುವುದೂ ಕಂಡುಬರುವುದು. ಸಂತ ಕಬೀರರ ನುಡಿಯಂತೆ ನಾವು ಹೊರಗೆ ಕೆಟ್ಟವರನ್ನು ಹುಡುಕುತ್ತಾ ಹೊರಟಾಗ ನಮಗೆ ಯಾರೂ ಸಿಗುವುದಿಲ್ಲ. ಆದರೆ ನಮ್ಮನ್ನೇ ನಾವು ಕೇಳಿಕೊಂಡಾಗ, ನಮ್ಮೊಳಗಿನ ಹುಳುಕುಗಳಿಗೆ, ನಮ್ಮ ವರ್ತನೆಗಳಿಗೆ ಕಾರಣವನ್ನು ಪ್ರಶ್ನಿಸಿಕೊಂಡಾಗ ನಾವು ಇತರರಿಗೆ ತೋರಿಸುವ ಗುಣ ಧರ್ಮವು, ತಾನು ತನ್ನವರೆನ್ನುವ ಭಾವಕ್ಕೊಳಗಾದಾಗ ನಡೆದುಕೊಳ್ಳುವ ಸ್ವಭಾವವನ್ನು ತುಲನಾತ್ಮಕವಾಗಿ ವಿಮರ್ಶೆಗೆ ಒಳಪಡಿಸಿದಾಗ ನಮಗೆ ಇದು ಸ್ಪಷ್ಟವಾಗಿ ನಮ್ಮಲ್ಲಿರುವ ಕೆಟ್ಟತನ ಗೋಚರವಾಗಬಲ್ಲದು.

ಯಾವುದೇ ವಿಷಯಗಳು ಚರ್ಚೆಗೆ ಇತರರೊಡನೆ ಒಳಪಡಬೇಕು. ಮುಕ್ತವಾಗಿ ಚರ್ಚಿಸಬೇಕು. ಅದು ತೀರಾ ವೈಯಕ್ತಿಕವಾಗಿಯಾದರೂ ಸರಿ, ಸಾಮಾಜಿಕವಾಗಿಯಾದರೂ ಸರಿ ಅದರ ಬಗ್ಗೆ ಕೌಟುಂಬಿಕ ವಲಯದಲ್ಲಿಯಾಗಲೀ, ಸಾರ್ವಜನಿಕ ವಲಯದಲ್ಲಾಗಲೀ ಸದಾ ಮುಕ್ತ ಚರ್ಚೆಗಳು ವ್ಯಕ್ತಿಯನ್ನು ಪರಿಪೂರ್ಣತೆಯೆಡೆಗೆ, ಮತ್ತು ತನ್ನನ್ನು ತಾನು ಅರಿತುಕೊಳ್ಳಲು ಸಹಾಯ ಮಾಡುತ್ತದೆ. ಖ್ಯಾತ ಸಾಮಾಜಿಕ ಚಿಂತನಕಾರ ಡಾ. ಸುಭಾಷ್ ಚಂದರ್ ರವರ ಅಭಿಪ್ರಾಯದಂತೆ ವ್ಯಕ್ತಿಯಲ್ಲಿ 1. ವೆಜಿಟೇಬಲ್ ಹ್ಯೂಮನ್ ಬೀಯಿಂಗ್ (ಸೀಮಿತ ಮಾನವೀಯ ಗುಣವುಳ್ಳವರು) 2. ಹ್ಯೂಮನ್ ಲೀ ಹ್ಯೂಮನ್ ಬೀಯಿಂಗ್ (ಮನುಷ್ಯತ್ವದಿಂದ ಮಾನವೀಯತೆಯನ್ನು ತೋರ್ಪಡಿಸಿ ನಡೆದುಕೊಳ್ಳುವವರು) 3. ಎನಿಮಲ್ ಹ್ಯೂಮನ್ ಬೀಯಿಂಗ್(ಸ್ವಾರ್ಥಪರರಾಗಿ ಯೋಚಿಸುತ್ತಾ ಇತರರನ್ನು ತನ್ನಂತೆ ಯೋಚಿಸುವಂತೆ ಮಾಡುವವರು) 4. ಗಾಡ್ಲೀ ಹ್ಯೂಮನ್ ಬೀಯಿಂಗ್ (ಪ್ರಕೃತಿಯಲ್ಲಿರುವ ಗಿಡ ಮರ ಬಳ್ಳಿ ಯಿಂದ ಹಿಡಿದು ಪ್ರಾಣಿ, ಪಕ್ಷಿ, ಜೀವಜಂತುಗಳ, ಸರ್ವ ಜನರ ಏಳಿಗೆಯನ್ನು ಬಯಸುತ್ತಾ ಅದರಂತೆ ನಡೆದುಕೊಳ್ಳುವವರು)ಈ ನಾಲ್ಕು ವ್ಯಕ್ತಿತ್ವವುಳ್ಳವರು ತಮ್ಮ ಸೀಮಿತ ಪರಿಧಿಯಲ್ಲಿ ಕೆಲವರ ಮೇಲೆ ಗಾಢವಾದ ಪರಿಣಾಮವನ್ನು ಬೀರಿದ್ದರೆ, ಇನ್ನೂ ಕೆಲವರು ಇಡೀ ಮನುಕುಲದ ಮೇಲೆಯೇ ತಮ್ಮ ಪ್ರಭಾವವನ್ನು ಬೀರಿದವರಾಗಿರುತ್ತಾರೆ. ನಮ್ಮ ದೈನಂದಿನ ಚಟುವಟಿಕೆಗಳಲ್ಲಿನ ಸಣ್ಣ ಪುಟ್ಟ ಘಟನೆಗಳು, ಆಚರಣೆಗಳ ವೈವಿಧ್ಯತೆಗಳು, ನಂಬಿಕೆಗಳು ಉದಾಹರಣೆಯಾಗಿ ಮುಂದಿನ ಜನಾಂಗದವರಿಗೆ ದಾರಿದೀಪವಾಗಿ ಬದಲಾಯಿಸಿಕೊಳ್ಳಲು ಪ್ರೇರಣೆಯಾಗಿ ನಿಲ್ಲಬಲ್ಲವು. ದೈವತ್ವದ ಮನುಷ್ಯನ ಸ್ವಭಾವಗಳು ಹೆಚ್ಚು ಹೆಚ್ಚಾಗಿ ಮಾನವತ್ವವನ್ನು ಎಚ್ಚರಿಸಿದಾಗ, ಪ್ರಕಟಗೊಂಡಾಗ ಇಡೀ ಜಗತ್ತು ಸುಂದರವಾಗಿ ಕಂಗೊಳಿಸಬಲ್ಲದು. ಅರಳಬಲ್ಲದು, ಮಾದರಿಯಾಗಿ ನಿಲ್ಲಬಲ್ಲದು ಎಂಬುದು ಸಾಬೀತಾಗಿದೆ.

**ವೆಜಿಟೇಬಲ್ ಹ್ಯೂಮನ್ ಬೀಯಿಂಗ್ (ಸೀಮಿತ ಮಾನವೀಯ ಗುಣವುಳ್ಳವರು):**

ಇಂತಹ ಸ್ವಭಾವವನ್ನು ಹೊಂದಿದವರು ತಾನು, ತನ್ನ ಕುಟುಂಬ, ತನ್ನ ಮಕ್ಕಳು, ತನ್ನ ಮನೆತನದ ಸಹೋದರ ಸಹೋದರಿಯರು ಅವರ ಇಷ್ಟಾನಿಷ್ಟಗಳು, ಆರ್ಥಿಕ ಭದ್ರತೆಗಾಗಿ ಕೇವಲ ಅವರಿಗಾಗಿ ಮಾಡಬೇಕಾದ ಕುರಿತು, ಅಲ್ಲದೆ ತನ್ನ ವೈಯಕ್ತಿಕ ಪ್ರತಿಷ್ಠೆಗಾಗಿ ಏನನ್ನಾದರೂ ಮಾಡಬೇಕು ಎನ್ನುವುದು, ಅವರ ಸಾಧನೆಗಳು ತೀರಾ ವೈಯಕ್ತಿಕಕ್ಕೆ ಮಾತ್ರ ಸೀಮಿತವಾಗಿ ಅವರು ಅದರಲ್ಲೇ ಅತ್ಯಂತ ತೃಪ್ತಿಯನ್ನೂ, ನೆಮ್ಮದಿಯನ್ನೂ ಪಡೆದುಕೊಂಡಿರುತ್ತಾರೆ. ತನ್ನ ವೈಯಕ್ತಿಕ ಮಟ್ಟದ ಸ್ವಾರ್ಥ ಪರತೆಯಲ್ಲಿ ತನ್ನ ಮಕ್ಕಳನ್ನು ಮತ್ತು ಕುಟುಂಬದ ತೀರಾ ಹತ್ತಿರದ ಮೊದಲ ಹಂತದ ಬಗ್ಗೆಯಷ್ಟೇ ಇವರು ಯೋಚಿಸುವಷ್ಟು ಸಂಕುಚಿತತೆಯನ್ನು ಹೊಂದಿರುತ್ತಾರೆ. ಇವರು ತಮ್ಮ ಕುಟುಂಬವನ್ನು ಬಿಟ್ಟು ಅಂತಹದೇ ಸಮಸ್ಯೆಯನ್ನು ಎದುರಿಸುತ್ತಿರುವ ಇತರ ವ್ಯಕ್ತಿಗಳ ಬಗ್ಗೆ ಮತ್ತು ತಮ್ಮ ಮಕ್ಕಳ ವಯಸ್ಸಿನವರು ಎದುರಿಸುತ್ತಿರುವ ಸಮಸ್ಯೆಗಳನ್ನು ತಮ್ಮ ಕಣ್ಣೆದುರಿಗೆ ಕಂಡರೂ ಇದಕ್ಕೆ ಪ್ರತಿಕ್ರಿಯೆಯನ್ನಾಗಲೀ, ಸಹಾಯವನ್ನಾಗಲೀ ಮಾಡಲಾರರು. ಗಮನಿಸಿದರೂ ಗಮನಿಸದಂತೆ ವರ್ತಿಸುವುದು, ಟೀಕೆಗಳನ್ನು ಮಾಡಿ ಅವರನ್ನು

ಇನ್ನಷ್ಟು ಕುಗ್ಗುವಂತೆ ಮಾಡುವಲ್ಲಿ ಇವರ ಪಾತ್ರವು ಸೀಮಿತವಾಗಿರುತ್ತದೆ. ಅತ್ಯಂತ ಸ್ವಾರ್ಥಪರರಾದ ಇವರ ನಡವಳಿಕೆಗಳು ಕೇವಲ ಕುಟುಂಬದ ಸಂತೋಷಕ್ಕೆ ಮಾತ್ರ ಸೀಮಿತವಾಗಿರುತ್ತದೆ.

**2. ಹ್ಯೂಮನ್‌ಲೀ ಹ್ಯೂಮನ್ ಬೀಯಿಂಗ್ (ಮನುಷ್ಯತ್ವದಿಂದ ಮಾನವೀಯುತೆಯನ್ನು ತೋರ್ಪಡಿಸಿ ನಡೆದುಕೊಳ್ಳುವವರು)**

ಮಾನವ ಸಹಜವಾದ, ಇತರರನ್ನು ಗುರುತಿಸುವ, ತನಗೆ ಸಾಧ್ಯವಾಗದ್ದನ್ನು ಇತರರ ಮೂಲಕ ಸಾಧಿಸಿ ಗುರಿ ಮುಟ್ಟಿಸುವ, ಇತರರ ಏಳಿಗೆಯಲ್ಲಿ ತನ್ನ ಸಂತೋಷವನ್ನು ಕಾಣುವ ಸ್ವಭಾವವನ್ನು ಇಂತಹವರು ಹೊಂದಿರುತ್ತಾರೆ. ಇಂತಹವರು ತಮ್ಮ ಸಾಧನೆಗಳ ಹಾದಿಯಲ್ಲಿ ಅಡ್ಡಿ ಆತಂಕಗಳು ಎದುರಾದರೆ ಲೆಕ್ಕಿಸುವುದಿಲ್ಲ; ತಮ್ಮಲ್ಲಿ ಅತೀವ ಆತ್ಮವಿಶ್ವಾಸವನ್ನು ಹೊಂದಿರುತ್ತಾರೆ. ತಮ್ಮ ಕೆಲಸ ಕಾರ್ಯಗಳಲ್ಲಿ ಗುರಿ ಮುಟ್ಟಿಸುವ ಛಲವಿರುತ್ತದೆ. ಇದಕ್ಕೆ ನಮ್ಮ ಸಮಾಜದಲ್ಲಿ ಅನೇಕ ಉದಾಹರಣೆಗಳನ್ನು ಕಾಣಬಹುದಾಗಿದೆ. ಇವರು ನೈತಿಕತೆಗೆ ಅತ್ಯಂತ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ನೈತಿಕತೆಯ ನೆಲೆಯಲ್ಲಿ ತನ್ನ ಗುರಿಯನ್ನು ತಲುಪಲು ಸಂಕಲ್ಪವನ್ನು ಇಟ್ಟುಕೊಳ್ಳಬಲ್ಲವ ರಾಗಿರುತ್ತಾರೆ.

ಕೆಲವೊಮ್ಮೆ ವ್ಯಕ್ತಿಯು ತನ್ನ ವೈಯಕ್ತಿಕ ನೆಲೆಯಲ್ಲಿ ತನಗೆ ಎದುರಾದ ಸಂಕಷ್ಟಗಳನ್ನು ಸವಾಲಾಗಿ ಸ್ವೀಕರಿಸಿ ತಾನೂ ಗುರಿ ತಲುಪುವುದಲ್ಲದೆ ಇತರರನ್ನು ಸಾಧನೆಗಳ ಹಾದಿಯಲ್ಲಿ ತಮ್ಮ ವೈಯಕ್ತಿಕ ಕೆಲಸ ಕಾರ್ಯಗಳನ್ನು ಬದಿಗಿಟ್ಟು ಆರ್ಥಿಕ ಸಹಾಯವನ್ನು ಅವರಿಗಾಗಿ ವಿನಿಯೋಗಿಸುವುದರಲ್ಲಿ ಕೂಡ ಸದಾ ಮುಂದಾಗಿರುತ್ತಾರೆ. ಇದು ಒಂದು ವರ್ಗದವರ ಮನೋಭಾವವಾಗಿರುತ್ತದೆ. ಪ್ರಾಣಿ ವರ್ಗಗಳಲ್ಲಿ, ಪ್ರಕೃತಿಯ ಸೌಂದರ್ಯದಲ್ಲಿ ಹೆಚ್ಚು ಆಸಕ್ತಿಯನ್ನು, ಕಾಳಜಿಯನ್ನು ಇಂತಹವರು ಹೊಂದಿರುತ್ತಾರೆ. ಪ್ರತಿಕ್ರಿಯೆ, ಸ್ಪಂದನ ಇವರ ಸಹಜ ಸ್ವಭಾವ ಸಿದ್ದವಾದ ಗುಣವಾಗಿರುತ್ತದೆ. ಸ್ವಂತ ಆಸಕ್ತಿಗಳು, ಯಾವುದೇ ವಿಷಯದ ಮೇಲಿನ ಪ್ರೀತಿಯು ಅವರನ್ನು ತಕ್ಷಣ ಕಾರ್ಯೋನ್ಮುಖವಾಗುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸೇವಾ ಮನೋಭಾವ ಇಂತಹವರಲ್ಲಿ ಅಧಿಕವಾಗಿರುತ್ತದೆ.

**3. ಎನಿಮಲ್ ಹ್ಯೂಮನ್ ಬೀಯಿಂಗ್ (ಸ್ವಾರ್ಥಪರರಾಗಿ ಯೋಚಿಸುತ್ತಾ ಇತರರನ್ನು ತನ್ನಂತೆ ಯೋಚಿಸುವಂತೆ ಮಾಡುವವರು)**

ಇದು ಹ್ಯೂಮನ್‌ಲೀ ಹ್ಯೂಮನ್ ಬೀಯಿಂಗ್ ಸ್ವಭಾವಕ್ಕೆ ವಿರುದ್ಧವಾದ ವ್ಯಕ್ತಿತ್ವವನ್ನು ಹೊಂದಿರುವುದು. ಇಂತಹವರಲ್ಲಿ ಅತ್ಯಂತ ಸ್ವಾರ್ಥ ಪರತೆ ಹೆಚ್ಚಾಗಿದ್ದು ತನ್ನ ಕುಟುಂಬ, ಮಕ್ಕಳು, ದೇಶ, ರಾಜ್ಯ ಎಲ್ಲವೂ ತನ್ನ ವೈಯಕ್ತಿಕವೆಂಬ ರೀತಿಯಲ್ಲಿ ವರ್ತಿಸುತ್ತಾ ಇತರರನ್ನು ದ್ವೇಷಿಸುವ ಮಟ್ಟದಲ್ಲಿ ಇರುತ್ತಾರೆ. ಇತರರ ಸದ್ಗುಣಗಳನ್ನು ತಮ್ಮ ಸ್ವಭಾವಕ್ಕನುಗುಣವಾಗಿ ತಮ್ಮಂತೆ ಆಗುವಂತೆ ಪರಿವರ್ತಿಸಬಲ್ಲರು. ಎದುರಿಗೆ ಶಾಂತವಾಗಿ, ಮುಗ್ಧವಾಗಿ ವರ್ತಿಸಿದರೂ ಕ್ಷಣ ಕ್ಷಣಕ್ಕೂ ಬದಲಾಗುವ ಮನೋಭಾವವನ್ನು ಹೊಂದಿರುವವರಾಗಿರುತ್ತಾರೆ. ಆಕ್ರಮಣಶೀಲ ಮನೋಭಾವ ವನ್ನು ಹೊಂದಿದ್ದು ದ್ವೇಷಕ್ಕೆ ದ್ವೇಷ ಪ್ರೀತಿಗೆ ಪ್ರೀತಿ ಎನ್ನುವುದು ಇವರ ತತ್ವವಾಗಿರುತ್ತದೆ. ತಮ್ಮ ಆಸೆಗಳನ್ನು ಬಯಕೆಗಳನ್ನು ಈಡೇರಿಸಿಕೊಳ್ಳಲು ಯಾವ ಮಟ್ಟಕ್ಕೆ ಬೇಕಾದರೂ ಇಳಿಯಬಲ್ಲರು ಯೋಚಿಸಬಲ್ಲರು ಎನ್ನುವುದು ಇವರ ಮುಖ್ಯ ಸಿದ್ಧಾಂತವಾಗಿರುತ್ತದೆ.

ನೈತಿಕವಲ್ಲದ ನಮ್ಮ ವ್ಯವಹಾರಗಳು ಎನಿಮಲ್ ಹ್ಯೂಮನ್ ಬಿಹೇವಿಯರ್ ಆಗಿರುತ್ತದೆ. ಇಂತಹ ಸ್ವಭಾವವು ಚಿಕ್ಕಂದಿನಲ್ಲೇ ಇತರರ ಮೇಲೆ ಪ್ರಭಾವವನ್ನು ಬೀರುವಲ್ಲಿ ಪಾತ್ರ ವಹಿಸುತ್ತದೆ. ಸುಳ್ಳು ಹೇಳುವುದು, ಅನೈತಿಕವಾಗಿ ಹಣದ ಸಂಪಾದನೆಯ ದಾರಿಯಲ್ಲಿ ಸಾಗುವುದು ಕಂಡುಬರುತ್ತದೆ. ಎನಿಮಲ್ ಹ್ಯೂಮನ್ ಬಿಹೇವಿಯರ್ ಎನ್ನುವುದು ಯುಕ್ತಾ ಯುಕ್ತತೆಗಳ ವಿವೇಚನೆಯನ್ನು ಮೀರಿದ ಸ್ವಾರ್ಥ ಪರತೆಯನ್ನು ವೈಭವೀಕರಿಸುವ, ದುಷ್ಟ ಮನಸ್ಸುಗಳನ್ನು ಪ್ರತಿಬಿಂಬಿಸುವ ಮನಸ್ಸಿನ ಸ್ಥಿತಿ ಎಂದರೆ ತಪ್ಪಲ್ಲ.

**4. ಗಾಡ್ಲೀ ಹ್ಯೂಮನ್ ಬೀಯಿಂಗ್ (ಪ್ರಕೃತಿಯಲ್ಲಿರುವ ಗಿಡ ಮರ ಬಳ್ಳಿ ಯಿಂದ ಹಿಡಿದು ಪ್ರಾಣಿ, ಪಕ್ಷಿ, ಜೀವಜಂತುಗಳ, ಸರ್ವ ಜನರ ಏಳಿಗೆಯನ್ನು ಬಯಸುತ್ತಾ ಅದರಂತೆ ನಡೆದುಕೊಳ್ಳುವವರು)**

ಇದು ಸಮಾಜದ ಒಳಿತಿಗಾಗಿ ಯೋಚಿಸುವ, ಎಲ್ಲರ ಕಲ್ಯಾಣವನ್ನು ಬಯಸುವ ಸ್ವಭಾವವನ್ನು ಒಳಗೊಂಡಿರುತ್ತದೆ. ನೈತಿಕತೆಗೆ ಇದು ಅತ್ಯಂತ ಪ್ರಾಮುಖ್ಯತೆಯನ್ನು ಕೊಡಬಲ್ಲ ವ್ಯಕ್ತಿತ್ವದ ಪಾತ್ರ ವಹಿಸುತ್ತದೆ. ಧಾರ್ಮಿಕ ಮನೋಭಾವವನ್ನು ತನ್ನ ರೀತಿ, ನೀತಿ ನಡವಳಿಕೆಗಳಲ್ಲಿ ಅಳವಡಿಸಿಕೊಂಡು, ಆಚಾರ ವಿಚಾರಗಳಲ್ಲೂ ಅದರ ಸೂತ್ರವನ್ನು ಅನುಸರಿಸಿಕೊಂಡು ಹೋಗುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ. ಸಮಾಜದ, ದೇಶದ ಒಳಿತಿಗಾಗಿ ತನ್ನ ತನವನ್ನು ಮೀರಿ ಇಂತಹವರು ತಮ್ಮ

ಜೀವಿತ ಅವಧಿಯನ್ನು ಇತರರ ಏಳಿಗೆಗಾಗಿ ತೊಡಗಿಸಿಕೊಂಡವರಾಗಿರುತ್ತಾರೆ. ಪ್ರತಿಭೆಯನ್ನು ಗುರುತಿಸುವಲ್ಲಿ, ಗೌರವಿಸುವಲ್ಲಿ, ಪ್ರೋತ್ಸಾಹಿಸುವಲ್ಲಿ ಮುಕ್ತ ಮನಸ್ಸಿನ ನಡವಳಿಕೆಗಳಲ್ಲಿ ಸ್ವಲ್ಪವೂ ಸ್ವಾರ್ಥದ ಲೇಶವು ಇವರಲ್ಲಿ ಇರುವುದಿಲ್ಲ. ತಾವು ಅನುಭವಿಸಿದ ಆರೋಗ್ಯದ ಸಮಸ್ಯೆಗಳು, ಆರ್ಥಿಕ ಸಂಕಷ್ಟಗಳು ಇತರರಿಗೆ ಬಾರದಿರುವಂತೆ ತಮ್ಮಿಂದಾದ ಸಹಾಯ ಮಾಡುವಲ್ಲಿ ಇವರು ಮುಂಚೂಣಿಯಲ್ಲಿರುತ್ತಾರೆ. ಇತರರು ಅದೇ ಹಾದಿಯಲ್ಲಿ ಸಾಗುವಂತೆ ಪ್ರೇರಕರಾಗಿರುತ್ತಾರೆ.

ಮೂಢನಂಬಿಕೆಗಳನ್ನು ಹೋಗಲಾಡಿಸಲು ಅವರನ್ನು ಸದಾ ಎಚ್ಚರವಾಗಿರುವಂತೆ ಈ ಮನೋಭಾವವು ಕಾರ್ಯ ನಿರ್ವಹಿಸುತ್ತದೆ. ಜಾತಕದಿಂದ ಮುರಿದು ಬೀಳುವ ಮದುವೆಗಳಿಗಿಂತ, ರಕ್ತದ ಪರೀಕ್ಷೆಯಿಂದ ಹೊಂದಾಣಿಕೆಯಾಗುವವರನ್ನೇ ವರಿಸುವುದರಿಂದ ಥಾಲಿಸ್ಸೇಮಿಯಾ ಎಂಬ ಮಕ್ಕಳಿಗೆ ಬರುವ ಕಾಯಿಲೆ, ಎಚ್ ಐ ವಿ, ಹೆಪಟೈಟಿಸ್ ಬಿ ಗಳನ್ನು ಒಳಗೊಂಡ ಮಕ್ಕಳಿಗೆ ಜನ್ಮ ನೀಡಿ ಜೀವನವಿಡೀ ಕೊರಗುವಂತೆ ಕುಟುಂಬ ಹಾಗು ಮಕ್ಕಳು ಸಂಕಷ್ಟದಲ್ಲಿ ದಿನದೂಡುವಂತೆ ಮಾಡುವುದಕ್ಕಿಂತ ರಕ್ತ ಸಂಬಂಧಿಗಳಲ್ಲಿ ಮದುವೆಯಾಗದಂತೆ ಇರುವುದು ಅತ್ಯಂತ ಮುಖ್ಯವಾದುದು ಎಂಬ ಅರಿವು ಪ್ರತಿಯೊಬ್ಬರಲ್ಲೂ ಮೂಡಿಸುವುದು. ಇಂತಹ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಜನರಿಗೆ ಪರಿಣಾಮಕಾರಿಯಾಗಿ ಮನಮುಟ್ಟುವಂತೆ ತಿಳಿಸುವುದೇ ಬದಲಾವಣೆಯ ಪ್ರಕ್ರಿಯೆಗೆ ಚಾಲನೆ ಕೊಡುವುದೇ ದೈವೀ ಸ್ವಭಾವದ ಮೂಲ ಆದರ್ಶವಾಗಿದೆ. ಸಂಕಷ್ಟ ದಲ್ಲಿರುವವರಿಗಾಗಿ ಮುಡುಪಾಗಿಟ್ಟ ದೈವ ಮಾನವರ ಸೃಷ್ಟಿಯು ಈಗ ಹಿಂದೆಂದಿಗಿಂತಲೂ ಸಮಾಜದ ಸ್ವಾಸ್ಥ್ಯಕ್ಕೆ ಬೇಕಾಗಿದೆ. ಇಂತಹ ದೈವೀಕ ಗುಣಗಳ ಪರಿಚಯವು ಅದರ ಮಹತ್ವವು ಪೌರಾಣಿಕ ಗ್ರಂಥಗಳಲ್ಲಿ ಅನೇಕ ಉದಾಹರಣೆಗಳ ಮೂಲಕ ನಮಗೆ ಆದರ್ಶಪ್ರಾಯವಾಗಿ ಕಂಡುಬರುತ್ತದೆ.

## ವೇಗ ಓದು-ಬಗೆ ಹೇಗೆ? 15ನೇ ಪುಟದಿಂದ

ಲೇಖಕರ ಸಣ್ಣ ಪ್ಯಾರಾಗಳು, ದಪ್ಪಕ್ಷರಗಳ ಸಾಲು, ಇಟಾಲಿಕ್ಸ್‌ನಲ್ಲಿ ಬರೆದ ವಾಕ್ಯ ಮುದ್ರಣವಾಗುವಾಗ ಉಪಯೋಗಿಸುವ ಸಂದೇಶಗಳು ಸೂಚ್ಯ / ಕಾರ್ಟೂನ್‌ಗಳನ್ನು ತಪ್ಪದೆ ಗಮನಿಸಬೇಕು. ಓದುವುದೆಂದರೆ ಪ್ರಶ್ನೆಗಳ ಮೂಲಕ ಯೋಚಿಸುವ ಒಂದು ಚುರುಕಿನ ಲವಲವಿಕೆಯ ಕ್ರಿಯೆ. ಬೇಸರ, ಜಾಡ್ಯ ಮನೋಭಾವ, ಅತಿ ಆಯಾಸ ಪರಿಸ್ಥಿತಿಯಲ್ಲಿ ನೀವು ಖಂಡಿತ ವೇಗವಾಗಿ ಓದಲಾರಿರಿ. ಮನಸ್ಸು ಮತ್ತು ಕಣ್ಣುಗಳು ಸಂತಸ, ಉಲ್ಲಾಸದಿಂದ ತೆರೆದುಕೊಂಡಾಗ ನಿಮ್ಮ ಓದಿನಲ್ಲಿ ಪಾದರಸದಂತಿರುವ ಚುರುಕುತನ ತಾನಾಗಿ ಮೂಡಿಬರುವುದು. ದಿನಲ್ಲಿ ನಿಮ್ಮ ನೆಚ್ಚಿನ ಸಮಯವನ್ನು ಕಾದಿರಿಸಿಕೊಂಡು ಓದಲು ಆರಂಭಿಸಿನೋಡಿ. ಬೇರೆ ಸಮಯದಲ್ಲಿ ತೆರೆದುಕೊಳ್ಳದ ಮನಸ್ಸು ಈಗ ಹಕ್ಕಿಯಂತೆ ಹಾರಲಿಕ್ಕೆ ಸಿದ್ಧವಾಗಿರುತ್ತದೆ. ಪ್ರತಿಯೋರ್ವ ತನ್ನದೇ ಸಮಯವನ್ನು ಅಳವಡಿಸಿಕೊಳ್ಳುವುದು ಆತನ ವೈಯುಕ್ತಿಕ ಜವಾಬ್ದಾರಿ. ಮುಂದಿನ ಬೆಳವಣಿಗೆಗೆ ಇಂತಹ ಆಯ್ಕೆ ಅನಿವಾರ್ಯ.

ವೇಗ ಓದಿಗೆ ಸಹಾಯಕಾರಿಯಾಗಿರುವ ಇನ್ನೊಂದು ವಿಧಾನವೆಂದರೆ ಮೇಲಿಂದ ಮೇಲೆ ನೋಡುವುದು. ಪುಟದ ಎಡ–ಬಲಕ್ಕೆ ಸುಮಾರು ಒಂದು ಇಂಚು ಬಿಟ್ಟು ಮಧ್ಯದ ಭಾಗವನ್ನಷ್ಟೇ ಮೇಲಿನಿಂದ ಕೆಳಕ್ಕೆ ಸರಸರನೆ ನೋಡುತ್ತ (ಅವಲೋಕಿಸುತ್ತ) ಹೋಗುವುದು. ಇದರಲ್ಲಿ ನಿಮಗೆ ವಿಷಯದ ತಿರುಳು ಸಿಕ್ಕೇ ಸಿಗುತ್ತದೆ.

ಚಿಕ್ಕಂದಿನಲ್ಲಿ ದೊಡ್ಡವರು ಓದಿ ಹೇಳಿದಾಗ ನಿಮಗೆಷ್ಟು ಸ್ಪಷ್ಟ ಚಿತ್ರ ಸಿಗುತ್ತಿತ್ತಲವೆ? ಇತರರ ಧ್ವನಿ, ಉಚ್ಚಾರ ಕ್ರಮ ಆಲಿಸುತ್ತಿದ್ದಾಗ ಆ ಶಬ್ದಗಳು ಚಿತ್ರರೂಪದಲ್ಲಿ ಮೂಡುತ್ತಿದ್ದುದು ನೆನಪಿದೆಯೇ? ಮಿದುಳು ಅಂತಹ ಚಿತ್ರಗಳಿಂದ ನಿಮ್ಮ ಗ್ರಹಣ ಶಕ್ತಿಯನ್ನು ಉದ್ದೀಪನಗೊಳಿಸುವುದಲ್ಲದೆ, ಮುಂದಿನ ಮೌನ ಓದಿಗೆ (ತುಟಿ ಕೂಡಾ ಚಲಿಸದೆ) ಸಹಕಾರಿಯೆಂದು ಸಂಶೋಧನೆ ಮೂಲಗಳು ತಿಳಿಸುತ್ತವೆ. ವೇಗ ಓದು ಮಾನಸಿಕ ಆರೋಗ್ಯಕ್ಕೂ ಪೂರಕ ಶಕ್ತಿ. ವೈಯುಕ್ತಿಕ ಕಾರ್ಯಕ್ಷಮತೆ ಹೆಚ್ಚಿಸುವಲ್ಲಿ ಸೀಮಿತ ಕಾಲಾವಧಿಯಲ್ಲಿ ಹೆಚ್ಚಿನ ಓದಿನ ಸಾಧನೆಗಳಿಗಾಗಿ ಇಂದೇ ಅಣಿಗೊಳ್ಳಿರಿ ವೇಗ ಓದಿನತ್ತ.

# ಯುವ ಜನಾಂಗ ಮತ್ತು ಸಾಮಾಜಿಕ ಜವಾಬ್ದಾರಿಗಳು

**ಪ್ರಬಂಧ ಸ್ಪರ್ಧೆಯ ಸೀನಿಯರ್ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದ ಪ್ರಬಂಧ**



**ಮಹೇಶ್ ಶೆಟ್ಟಿ**

**ಯುವ ಜನಾಂಗ:**

ಸಾಮಾನ್ಯವಾಗಿ 16 ವರ್ಷದಿಂದ 35 ವರ್ಷದೊಳಗಿರುವವರನ್ನು ಯುವ ಜನಾಂಗವೆಂದು ಕರೆಯುತ್ತಾರೆ. ಪ್ರತಿಯೊಂದು ದೇಶವು ಎಲ್ಲಾ ಸ್ತರದ ಜನಾಂಗವನ್ನು ಹೊಂದಿರುತ್ತದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಹೆಚ್ಚಾಗಿ ಯುವಕರೆ ಇರುವುದನ್ನು ನಾವು ಕಾಣುತ್ತೇವೆ. ಪ್ರತಿಯೊಂದು ದೇಶದ ನಡೆ, ಅಭಿವೃದ್ಧಿಯ ಪಥದಲ್ಲಿ ಸಾಗುವ ಕಾರ್ಯಕ್ಕೆ ಯುವ ಜನಾಂಗದ ಕೊಡುಗೆ ಅಪಾರ.

ಒಮ್ಮೆ ಸುಭಾಷ್‌ಚಂದ್ರ ಬೋಸರು ಹೇಳಿದಂತೆ ನನಗೆ ರಕ್ತ ಕೊಡಿ ನಾನು ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುತ್ತೇನೆ. ಇಲ್ಲಿ ರಕ್ತವೆಂದರೆ ಬಿಸಿ ರಕ್ತದ ತರುಣರೇ ಹೆಚ್ಚಾಗಿ ಸ್ವಾತ್ರಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡು ಸದಾ ಹೋರಾಟದಲ್ಲಿ ಮುಳುಗಿ ಸ್ವಾತಂತ್ರ್ಯ ಪಡೆಯಬೇಕೆಂಬುದು ಅವರ ಇರಾದೇಯಾಗಿತ್ತು. ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬಂತೆ ಒಂದು ದೇಶದ ಯುವಜನತೆಯ ಇರುವಿಕೆಯೇ ಆ ದೇಶದ ನಿಜವಾದ ಶಕ್ತಿಯನ್ನು ಅಂದಾಜಿಸಬಹುದು. ಇಂದು ವಿಶ್ವದಲ್ಲಿ ಮುಂದುವರಿದ ದೇಶಗಳಾದ ಅಮೇರಿಕಾ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಯುವ ಜನತೆ ಸಂಖ್ಯೆ ಕಡಿಮೆಯಾಗಿ ದೇಶದಲ್ಲಿ ಇಳಿ ವಯಸ್ಸಿನವರೆ ಹೆಚ್ಚಾಗಿ ಕಾಣ ಬರುತ್ತಾರೆ.

ಹಳೆ ಬೇರು ಹೊಸ ಚಿಗುರು ಮರ ನೋಡಲು ಬಲು ಸೊಬಗು ಎಂಬಂತೆ ಅನುಭವವಿರುವ ಹಿರಿಯರು ಸದಾ ಮಾರ್ಗದರ್ಶನ ನೀಡಿದಲ್ಲಿ ಕಾರ್ಯ ಸಾಧಿಸಬೇಕಾದ ಯುವ ಜನತೆ ಹೆಚ್ಚು ಹೆಚ್ಚು ಸಾಮಾಜಿಕ ಕೆಲಸಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಿದೆ.

**ಯುವ ಜನಾಂಗದ ಅನುಕೂಲತೆಗಳು:**

1. ಯುವ ಜನಾಂಗದಲ್ಲಿ ಕಲಿಯುವ ಮನಸ್ಸು ಹಾಗೂ ಹೊಸತನದ ಹುಚ್ಚು ಹೆಚ್ಚಾಗಿರುತ್ತದೆ ಹೀಗೆ ಹೆಚ್ಚಾದಾಗ ದೇಶದ ಪ್ರಗತಿಗೆ ಅವರ ಕೊಡುಗೆ ಅಪಾರ ಪ್ರಮಾಣದಲ್ಲಿರುತ್ತದೆ.
2. **ಹೊಸ ಅನ್ವೇಷಣೆಗಳು:** ಯುವ ಜನಾಂಗದಲ್ಲಿ ಹೆಚ್ಚಾಗಿ ಹೊಸ ಅನ್ವೇಷಣೆಗಳಿಗೆ ಹಾಗೂ ಸಂಶೋಧನೆಗಳಿಗೆ ಮನಸ್ಸು ತೆರೆದುಕೊಂಡಿರುತ್ತದೆ.
3. **ಸಾಹಸ ಧೈರ್ಯ ಪ್ರವೃತ್ತಿ:** ಯುವ ಜನಾಂಗ ಸದಾ ಸಾಹಸಮಯ ಬದುಕಿಗೆ ಹೆಚ್ಚು ಉದಾಹರಣೆಯಾಗಿ ಉಳಿಯುತ್ತಾರೆ. ಜೊತೆಗೆ ಧೈರ್ಯವನ್ನು ಹೊಂದಿರುತ್ತದೆ. ಆ ಪ್ರವೃತ್ತಿ ಬಹು ಮುಖ್ಯ.
4. **ಸುಶಿಕ್ಷಿತ ಸಮುದಾಯ:** ಮೊದಲು ಭಾರತದಲ್ಲಿ ಸುಶಿಕ್ಷಿತ ಪ್ರಮಾಣ ಬಹಳ ಕಡಿಮೆ ಆದರೆ ಇಂದಿನ ಯುವಕರು ಶಿಕ್ಷಿತರಾಗಿದ್ದು ಇದು ದೇಶದ ಅಭಿವೃದ್ಧಿಗೆ ಸಹಕಾರವಾಗಿದೆ.
5. **ಉದ್ಯೋಗಿಗಳು:** ಯುವ ಜನತೆ ಇಂದು ಉದ್ಯೋಗದಲ್ಲಿದ್ದು ದೇಶದ ಆರ್ಥಿಕ ಬೆಳವಣಿಗೆಗೆ ಅವರ ಕೊಡುಗೆ ಅಪಾರ.
6. **ಜನ ಜೀವನ ಸುಧಾರಣೆ:** ಒಬ್ಬ ವ್ಯಕ್ತಿ ಶಿಕ್ಷಣವನ್ನು ಪಡೆದು ಉತ್ತಮ ಉದ್ಯೋಗವನ್ನು ಹೊಂದಿದ್ದಾನೆ ಎಂದರೆ ಅವರ ಜೀವನದಲ್ಲೂ ಸುಧಾರಣೆಗಳು ಕಂಡು ಬರುತ್ತವೆ.
7. **ರಾಷ್ಟ್ರಪ್ರೇಮ:** ಯುವಕರಲ್ಲಿ ಇಂದು ರಾಷ್ಟ್ರಪ್ರೇಮ ಹೆಚ್ಚಾಗಿ ಜಾಗೃತವಾಗಿರುತ್ತದೆ. ಆ ಮೂಲಕ ಆ ದೇಶದ ಬಗ್ಗೆ ಹೆಚ್ಚಿನ ಗೌರವ ಆಧರಗಳು ಹೊರ ದೇಶಗಳಿಂದ ಸದಾ ಬರುತ್ತಿರುತ್ತವೆ.
8. **ದೇಶದ ಪ್ರಗತಿ:** ಹೆಚ್ಚು ಹೆಚ್ಚು ಯುವ ಜನಾಂಗ/ಯುವ ಜನತೆಯನ್ನು ಹೊಂದಿರುವ ದೇಶ ನಿಜವಾಗಿಯೂ ಪ್ರಗತಿಯ ಪಥದತ್ತ ಸಾಗುತ್ತಿರುತ್ತದೆ.

ಹೀಗೆ ಯುವ ಜನಾಂಗ ಹಾಗೂ ಅದರ ಅಗತ್ಯತೆಗಳು ಹಲವು ಹನ್ನೊಂದು. ಯಾವುದೇ ಒಂದು ಪಾಕ ಚೆನ್ನಾಗಿ ಬರಬೇಕು ಅಂದರೆ ಮಿಶ್ರಣ ಸಮ ಪ್ರಮಾಣದಲ್ಲಿರಬೇಕು ಅಂತೆಯೇ ಎಲ್ಲಾ ಜನಾಂಗದ ಜನರು ಒಂದು ಸಮಾಜದಲ್ಲಿದ್ದಾಗ ದೇಶದ ಪ್ರಗತಿ ಸಾಧ್ಯ.

ಸಾಮಾಜಿಕ ಜವಾಬ್ದಾರಿಗಳು: ಪ್ರತಿಯೊಂದು ಮಗುವಿನ ಮೇಲೂ ಒಂದು ಜವಾಬ್ದಾರಿ ಖಂಡಿತ ಇರುತ್ತದೆ. ಅಂತೆಯೇ ಯುವ ಜನಾಂಗದ ಜವಾಬ್ದಾರಿಯು ಸಹಾ ಅತಿ ಹೆಚ್ಚಿನದು. ಒಂದು ಕಡೆ ವಿವೇಕಾನಂದರು ಹೇಳುತ್ತಾರೆ "ಸಮಾಜದ ಖರ್ಚಿನಲ್ಲಿ ವಿದ್ಯಾಭ್ಯಾಸ ಪಡೆದು ಸಮಾಜದ ಸಮಸ್ಯೆಗಳಿಗೆ ಸ್ಪಂದಿಸದಿದ್ದಲ್ಲಿ ಅವರಂತ ಕೃತಘ್ನ ಯಾರೂ ಇಲ್ಲ" ಈ ಮಾತು ಅಕ್ಷರಶಃ ನಿಜ ನಾವು ಸಮಾಜದಿಂದ ಏನು ಪಡೆದಿರುತ್ತೇವೋ ಅದರ ಸ್ವಲ್ಪ ಭಾಗವನ್ನಾದರೂ ಸಮಾಜಕ್ಕೆ ಹಿಂದಿರುಗಿಸಲೇ ಬೇಕು ಆಗ ಸಮಾಜ ಪ್ರಗತಿಯತ್ತ ಸಾಗುತ್ತದೆ.

ಒಂದು ಕಡೆ ಡಿವಿಜಿ ಹೇಳುತ್ತಾರೆ "ಬೆಟ್ಟದಲಿ ಹುಲ್ಲಾಗು, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ವಿಧಿ ಮಳೆಯ ಸುರಿಯೇ ಕಲ್ಲು ಸಕ್ಕರೆಯಾಗು ದೀನ ದುರ್ಬಲರಿಗೆ ಎಲ್ಲರೊಳಗೊಂದಾಗು ಮಂಕು ತಿಮ್ಮ" ಎಂಬಂತೆ ನಮ್ಮಿಂದ ಬೇರೆಯವರಿಗೆ ಸ್ವಲ್ಪವಾದರು ಸಹಾಯದ ಹಸ್ತ ನೀಡಬೇಕು. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಯುವ ಜನತೆಯ ಜವಾಬ್ದಾರಿಗಳು ಅನೇಕ ಇವೆ. ಮುಖ್ಯವಾಗಿ.

- ಸಾಮಾಜಿಕ ಶಾಂತಿ ಹಾಗೂ ನೆಮ್ಮದಿಯನ್ನು ಕಾಪಾಡುವುದು.
- ಅನಕ್ಷರತೆಯನ್ನು ಹೋಗಲಾಡಿಸುವುದು.
- ಉತ್ತಮ ಉದ್ಯೋಗ ಪಡೆದು ದೇಶದ ಆರ್ಥಿಕ ಸುಧಾರಣೆಯಲ್ಲಿ ಭಾಗಿಯಾಗುವುದು.
- ಕೆಲಸಕ್ಕೆ ಬಾರದ ಕಡೆ ಹೆಚ್ಚು ಸಮಯ ವ್ಯರ್ಥ ಮಾಡದೆ ಉಪಯುಕ್ತ ಕೆಲಸಗಳಲ್ಲಿ ತೊಡಗಿಕೊಳ್ಳುವುದು.
- ಸಾಮಾಜಿಕ ಸಾಮರಸ್ಯವನ್ನು ಕಾಪಾಡಿಕೊಂಡು ಬರುವುದು.
- ಉತ್ತಮ ಪ್ರಜೆಯಾಗಿ ಬದುಕಿ ಬೇರೆಯವರಿಗೆ ಉದಾಹರಣೆಯಾಗಿ ಬಾಳುವುದು.
- ನನಗೆ ಸಮಾಜದಿಂದ ಏನು ಸಿಕ್ಕಿದೆ ಎನ್ನುವುದಕ್ಕಿಂದ ಸಮಾಜಕ್ಕೆ ನನ್ನ ಕೊಡುಗೆ ಏನು ಎಂದು ಕೇಳಿಕೊಳ್ಳಬೇಕು.

ಹೀಗೆ ಯುವ ಜನಾಂಗ ಸಕ್ರೀಯವಾಗಿ ಚಟುವಟಿಕೆಯಲ್ಲಿ ತೊಡಗಿಕೊಂಡರೆ ಆರೋಗ್ಯಕರ ಸಮಾಜವನ್ನು ನಿರ್ವಹಣೆ ಮಾಡಬಹುದು. ಇದು ಸುಮಾರು 20% ಪ್ರತಿಶತದಷ್ಟಿರುವ ಯುವ ಜನಾಂಗವೆ ತುಂಬಿರುವ ಭಾರತದಂತಹ ದೇಶಕ್ಕೆ ಆಶಾಕಿರಣವೇ ಹೌದು. ಭಾರತದಲ್ಲಿ ಸುಮಾರು 2020ನೇ ಇಸವಿಗೆ ಭಾರತದಲ್ಲಿ ಯುವಕರೇ ತುಂಬಿರುತ್ತಾರೆ. ಜೊತೆಗೆ ಭಾರತ ಯುವಕರ ದೇಶವಾಗುವುದರಲ್ಲಿ ಸಂಶಯವೇ ಇಲ್ಲ.

# ಸಮಾಜ ಸೇವಾ ವಿಭಾಗ





**ಬೆಂಗಳೂರು ಬಂಟರ ಸಂಘದ ವತಿಯಿಂದ ಬೈಂದೂರು, ಉಡುಪಿ ತಾಲೂಕಿನ ಅರ್ಹ ಫಲಾನುಭವಿಗಳಿಗೆ ಸಮಾಜ ಸೇವಾ ವಿಭಾಗದ ಅಧ್ಯಕ್ಷರಾದ ರಾಧಾಕೃಷ್ಣ ಶೆಟ್ಟಿಯವರು 'ಜೀವನಕ್ಕಾಗಿ ಕಾಮಧೇನು' ಯೋಜನೆಯಡಿಯಲ್ಲಿ ಚೆಕ್ ವಿತರಿಸಿದರು.**

# What is the Secret of Life?



T. Chandrashekar Shetty

The Secret of Life is hidden in the word L.I.F.E. itself Once we understand these 4 basic principles we can create the life we want with effortless ease in harmony with nature.

L-Life is meant for loving means building relationship with the people and the world around us and not just living for our existence. Our objective must be to build our life to become meaningful and purposeful instead of living life for our survival.

God has created each one of us on this earth for a DefinitePurpose and the Purpose is to serve the people around us and make them happy. Success is the result of the service we provide to the people around us and not the amount of money that we accumulate. More service we provide to the people the more money we receive by this law to become happy.

I –Inner world creates our outer world but not the other way. In nature, everything happens inside first before it happens outside. A seed is planted inside before it becomes a fruit outside. A child is first conceived in the mother's womb before it is born outside. A program is created inside a computer before the print-out is taken outside. An artist dreams his painting inside before he paints his dream on the canvas outside. Unfortunately most of us work in the outer world violating the principle of nature and struggle. It is like a Doctor who treats his patients on symptoms instead of on the cause.A Doctor who is a Nobel Prizewinner was asked by a reporter in London one day "Sir, what is wrong with the people today? He replied"Most people simply don't think. They act like others without knowing why and without knowing where they are going in life. With the result they allow their outside world to control their thinking that causes negative results that keeps repeating for the rest of their lives and get stuck in life".

Success always starts in our minds first before it happens outside.This is a Universal law.

But we humans are working against theprinciple of nature so,we struggle in life. The problem is that we have been conditioned or programmed to live like others. Most people have become miserable in this world so we too became miserable by acting like them. We think it is normal because majority is doing the same way.The moment we start working inside

and get in harmony with nature our life becomes easy and effortless instead of being busy and purposeless as it is today. The ability to think is the only thing that separates us from animals. This is the choice given to us by God to live our lives the way we want which is denied to all other living creatures in the world.

F-Faith leads to our higher-self, the Spirit that causes Self-realization and Fear leads to our lower self means the Ego that causes Self-destruction. "*In order to have faith in us we must believe that we are in essence Spiritual beings and not human beings as we appear to be*" says Deepak Chopra. We have taken birth as humans to fulfill a purpose in life. The purpose is to serve the people around us. Unfortunately, most people failed to realize this purpose and going after the money that creates illusionary growth instead of seeking spiritual wealth that creates evolutionary growth in harmony with nature.

E-Energy is the source of all creation in this Universe. In fact the entire world is made of energy and information. Energy becomes enthusiasm when we do what we love to do and enjoy doing it but when we do what we don't like or hate,we start losing the energy When we work with love, money starts working for us and when we hate what we do, we will have to work hard for money due to lack of energy. As a result we lose our health, happiness and peace we desire most in life in the process of earning money. Money does not bring happiness. On the other hand if we learn to be happy and do what we love to do we attract money and everything we want by the law of attraction.

Jim Rohn said "*If you work on your job, you make a living but if you work on yourself you make a fortune.*" It is our smart work and not our hard work that creates success and happiness in life. So, our life is a creation of our own mind and not our physical effort no matter how hard we work in the outer world. If we want to be happy, start working in the inner world first instead of working in the outer world. If we work in the inner world it creates success and at the same time eliminates the stress. Don't follow the bottom 90% (majority) who work in the outer world. If we follow them we end up where they end up. So follow the top 10% who work in the inner world using their mind power to be happy and successful. Hence the Secret of Life lies in the word L.I.F.E itself.

## ನೀವೂ ಬರೆಯಿರಿ!

ಉದಯೋನ್ಮುಖ ಹಾಗೂ ಯುವ ಬರಹಗಾರರಿಂದ ಕಥೆ–ಕವನ, ಲೇಖನ, ಹಾಸ್ಯಬರಹ, ಚುಟುಕುಗಳನ್ನು ಆಹ್ವಾನಿಸುತ್ತಿದ್ದೇವೆ. ತಮ್ಮ ಬರಹಗಳನ್ನು 'ಸ್ನೇಹಚಿಂತನ'ದ ಸಂಪಾದಕರಿಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಟೈಪ್ ಮಾಡಿ (ಒಂದು ಪುಟಕ್ಕೆ ಮೀರದಂತೆ) ಸಂಘದ ಇಮೈಲ್: **info@buntsanghablr.com** ಗೆ ಅಥವಾ ಮುದ್ರಿಸಿ ಸಂಘದ ಕಛೇರಿಗೆ ಪ್ರತೀ ತಿಂಗಳ 20ನೇ ತಾರೀಕಿನ ಒಳಗಾಗಿ ಕಳುಹಿಸಬಹುದಾಗಿದೆ.



ಜಯಪುರ ಸುರೇಖಾ ಹೆಗ್ಡೆ

# ನೂರೊಂದು ನೆನಪು ಮನದಾಳದಿಂದ

ಕರ್ಮಣ್ಯೇವಾಧಿಕಾರಸ್ತೇ
ಮಾ ಫಲೇಷು ಕದಾಚನ
ತನಗಾಗಿ ಬದುಕದೆ ಇತರರಿಗಾಗಿ ಬದುಕಿ
ದೈವ ಸ್ವರೂಪಿಯಾದ ನಿನ್ನನ್ನು
ಯಾರು ಮರೆಯುತ್ತಾರೆ ಹೇಳು ಅಮ್ಮ

ನೀ ಕೊಟ್ಟು ಸೋಲಲಿಲ್ಲ
ಕೊಟ್ಟು ನೀ ಉಳಿದೆಯಲ್ಲ, ಮನಮನಗಳಲ್ಲಿ
ಸಾವಿಲ್ಲದವಳು, ಅಮ್ಮತೆ ಸರ್ವವ್ಯಾಪಿ, ಶಕ್ತಿಸ್ವರೂಪಿಣಿ
ನಾಲ್ಕು ಆತ್ಮಗಳಿಗೆ ಜೀವತುಂಬಿ
ನಿನ್ನ ಕರುಳಕುಡಿಗಳನ್ನು ಎಲೆಹಂಬಿನಂತೆ
ಹಬ್ಬಿಸಿ ಬಿಡಲೆಂದೇ ನೀ ಬಂದಂತಿತ್ತು
ಕರುಣಾಮಯಿ ನಿಷ್ಪಕ್ಷಪಾತೆ
ತನ್ನ ಮೈ ಸುಟ್ಟುಕೊಂಡು ಬೇರೆಯವರಿಗೆ
ಗರಿಗರಿಯಾದ ದೋಸೆ ತಿನ್ನಿಸುವ ಕಾವಲಿಯಂತಿತ್ತು
ನಿನ್ನ ಜೀವನ
ನೀನೊಂದು ಸೃಷ್ಠಿ! ಅನಕ್ಷರಸ್ಥೆ
ಆದರೆ ಸುಸಂಸ್ಕೃತೆಯ ಕಣಜ. ಉಪದೇಶ ಕೊಡಲು ಬಾರದು.
ಆದರೆ ಸ್ವತಃ ಕಾರ್ಯಮಾಡಿ ತೋರಿಸುವ ಚತುರೆ.
ದೂರಾಲೋಚನೆಯಿಂದ ನರನಾಡಿ ಸವೆಸಿ
ಹಗಲೂ ರಾತ್ರಿ ದುಡಿದು ಜೀವನದ ಸಂಘರ್ಷದೊಂದಿಗೆ
ಹೋರಾಡಿ ಗೆದ್ದ ಅಮ್ಮ
ನೀ ನಮ್ಮ ಉಸಿರು
ಅಮ್ಮ ನಿನ್ನ ತೋಳಿನಲ್ಲಿ ಕಂದಗಳು ನಾವು
ಅಮ್ಮ ನೀನಿಲ್ಲ! ಆದರೆ ನೀ ನೆಟ್ಟ ಬಸಳೆ ಎಲೆ ಎಲೆಯಲ್ಲಿ
ನಿನ್ನ ಪ್ರೀತಿಯ ಲೋಳೆ ಇದೆ

ನೀನುಣಿಸಿದ ತುತ್ತಿನೊಳಗೆ ತುಪ್ಪದ
ಘಮ ಘಮ ಪರಿಮಳವಿದೆ
ಮಜ್ಜಿಗೆಯೊಳಗೆ ತೇಲುತ್ತಿದ್ದ ಬೆಣ್ಣೆ
ನಿನ್ನನ್ನೇ ಹುಡುವಂತೆನಿಸುತ್ತಿದೆ!
ಒಲೆಯಲ್ಲಿ ಧಗ ಧಗ ಉರಿಯುವ ಬೆಂಕಿಯಲ್ಲಿ
ಅಮ್ಮ ಎಂಬ ಅಕ್ಷರಗಳು ಕಾಣುತ್ತಿವೆ.

ನೀ ಕುಳಿತ ಮೆಟ್ಟಲು ಕೆಳಗೆ ನಿನ್ನ ಹೆಜ್ಜೆಯ ಗುರುತಿದೆ
ನೀ ನೆಟ್ಟ ದುಂಡುಮಲ್ಲಿಗೆಯ ಪ್ರತಿ ಎಸಳಿನಲ್ಲೂ
ನಿನ್ನದೇ ಸುವಾಸನೆ ಇದೆ

ತಲೆಗೆ ಹಾಕಿದ ತೆಂಗಿನೆಣ್ಣೆ
ಮನಯೊಳಗೆಲ್ಲ ಪಸರಿಸಿದಂತಿದೆ
ತೊಟ್ಟಿಲೊಳಗೆ ಕೂಸು, ಕೊಟ್ಟಿಗೆಯೊಳಗೆ ಹಸು
ನಿನ್ನ ಕೈ ತುತ್ತಿಗಾಗಿ ಕಾಯುತ್ತಿರುವಂತಿದೆ

ನಿನ್ನ ಹೆಜ್ಜೆಗಳಿಲ್ಲದ ಮನೆಯಂಗಳ
ಅನಾಥವಾದಂತೆನಿಸುತ್ತಿದೆ
ಬಿಡು! ಎಷ್ಟಾದರೂ ನೀನು ಮಹಾತಾಯಿ
ಸ್ವಾಮಿಯ ಸೇವೆಗೆಂದೇ ಬೇಗ ಕರೆಸಿಕೊಂಡಿದ್ದಾರೆ
ಇಲ್ಲಿಗಿಂತ ನಿನ್ನ ಅಗತ್ಯ ಅಲ್ಲೇ ಹೆಚ್ಚಿದೆ

ಮುಕ್ತಿಯನ್ನು ಯಾಚಿಸುವವಳಿಗೆ
ಸಂಸಾರದಲ್ಲೇನಿದೆ? ಸರಿಗಮ
ಅಲ್ಲೇ ಇರು ಸಂತಸವಾಗಿ
ತಾಯಿಯ ಪಾದದಡಿ
ನಿನ್ನ ಕೊರಳ ಕರಿಮಣಿ
ಹಣೆಗಿಟ್ಟ ಕುಂಕುಮ
ಜನ್ಮ ಜನ್ಮಾಂತರಕ್ಕೂ ಅಳಿಸದಿರಲಿ
ನಿಮ್ಮ ಆಶೀರ್ವಾದ ನಮ್ಮೆಲ್ಲರ ಮೇಲೆ ಸದಾ ಇರಲಿ!

# ಉಡುಪಿ ಬಂಟರ ಸಂಘದ 23 ನೇ ವಾರ್ಷಿಕ ಅಧಿವೇಶನ




ಬಂಟರ ಸಂಘ ಉಡುಪಿ ಇದರ 23 ನೇ ವರ್ಷದ ವಾರ್ಷಿಕ ಅಧಿವೇಶನದ ಪ್ರಯುಕ್ತ ಸಾಧಕರಿಗೆ ಅಭಿನಂದನೆ, ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ಸಹಾಯಧನ ವಿತರಣಾ ಸಮಾರಂಭವು ದಿನಾಂಕ 21-01-2018 ರಂದು ಉಡುಪಿಯ ಶ್ರೀಮತಿ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಸಭಾಭವನದಲ್ಲಿ ಜರಗಿತು.

ಕಾರ್ಯಕ್ರಮವನ್ನು ಬೆಂಗಳೂರು ಎಂಆರ್‌ಜಿ ಗ್ರೂಪ್ಸ್‌ನ ಆಡಳಿತ ನಿರ್ದೇಶಕ ಕೆ. ಪ್ರಕಾಶ್ ಶೆಟ್ಟಿ ಉದ್ಘಾಟಿಸಿ ಬಂಟ ಸಮಾಜದ ಯುವಕ-ಯುವತಿಯರು ಸಾಮಾಜಿಕ, ಶೈಕ್ಷಣಿಕ,ಸಾಂಸ್ಕೃತಿಕ, ಕ್ರೀಡಾರಂಗಗಳಲ್ಲಿ ಮುಂದಾಳತ್ವವನ್ನು ವಹಿಸಿ ಸಮಾಜ ಮುಖಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ಸ್ಥಾಪನೆಗೊಂಡ ಈ ಸಂಘಟನೆಯ ಸೇವಾ ಚಟುವಟಿಕೆಗೆ ಶುಭ ಹಾರೈಸಿ, ಗಳಿಸಿದ ಸಂಪಾದನೆಯ ಸ್ವಲ್ಪಾಂಶ ಸತ್ಕಾರ್ಯಗಳಿಗೆ ಬಳಸಿದರೆ ಮಾತ್ರ ಜೀವನದಲ್ಲಿ ಯಶಸ್ವಿಯಾಗಲು ಸಾಧ್ಯವೆಂದರು.. ಸಮಾರಂಭದ ಮುಖ್ಯ ಅತಿಥಿಗಳಾಗಿ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾದ ಚಂದ್ರಹಾಸ ರೈ, ಧಾರವಾಡದ ಖ್ಯಾತ ಉದ್ಯಮಿ ಯು.ಬಿ.ಶೆಟ್ಟಿ, ಮುಂಬೈಯ ಸಾಯಿ ಪ್ಯಾಲೇಸ್ ಗ್ರೂಪ್ ಆಫ್ ಹೋಟೆಲ್ಸ್‌ನ ಆಡಳಿತ ನಿರ್ದೇಶಕರಾದ ರವಿ ಎಸ್ ಶೆಟ್ಟಿ, ಉಡುಪಿಯ ಉಜ್ವಲ್ ಡೆವಲಪರ್ಸ್‌ನ ಆಡಳಿತ ನಿರ್ದೇಶಕರಾದ ಪುರುಷೋತ್ತಮ ಪಿ ಶೆಟ್ಟಿ, ಮಂಗಳೂರಿನ ಆಸರೆ ಸಂಸ್ಥೆಯ ಮುಖ್ಯಸ್ಥೆ ಆಶಾ ಜ್ಯೋತಿ ರೈ ಆಗಮಿಸಿದ್ದರು. ಮಂಗಳೂರಿನ ಎಸ್.ಡಿ.ಎಮ್.ಸಿ ಆಯುರ್ವೇದ ಆಸ್ಪತ್ರೆ ಆಡಳಿತಾಧಿಕಾರಿ ಡಾ॥ ಪ್ರತಿಭಾ ರೈ ದಿಕ್ಸೂಚಿ ಭಾಷಣವನ್ನು ಮಾಡಿದರು.

ದೇಶದ ಗಡಿ ರಕ್ಷಣೆ ಮಾಡಿ ನಿವೃತ್ತರಾದ ಸೇನಾಧಿಪತಿ ಗಳಾದ ರಘುರಾಮ ಶೆಟ್ಟಿ ಮತ್ತು ವಾದಿರಾಜ ಹೆಗ್ಡೆಯವರನ್ನು ಹಾಗೂ ಕೃಷಿ ಸಾಧನೆಗಾಗಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಂಗನಾಥ ಶೆಟ್ಟಿಯವರನ್ನು, ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಮಯೂರ್ ಯು. ಶೆಟ್ಟಿ, ಕ್ರೀಡಾ ಸಾಧನೆಗಾಗಿ ಜ್ಯೋತಿ ಯು ಶೆಟ್ಟಿ, ವಿದ್ಯಾ ಯು ಶೆಟ್ಟಿ, ನಿಧಿ ಎಂ ಶೆಟ್ಟಿ, ಸ್ವಸ್ತಿ ಶೆಟ್ಟಿ, ನಿಶ್ಮಿತಾ ಶೆಟ್ಟಿ, ಅಭಿಜ್ಞ ಶೆಟ್ಟಿ, ದರುಣ್ ರಾಜ್ ಶೆಟ್ಟಿ ರಿಯಾ ಶೆಟ್ಟಿ ಯವರನ್ನು ಹಾಗೂ ಸಮಾಜ ಸೇವೆಗಾಗಿ ಶ್ರೀಮತಿ ವಿಶಾಲಾಕ್ಷಿ ಶೆಟ್ಟಿ ಗೌರವಿಸಿ ಸನ್ಮಾನಿಸಲಾಯಿತು. ಅಲ್ಲದೇ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ ಯಲ್ಲಿ ಶೇಕಡಾ 95%, ಅಂಕಗಳಿಸಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಅನಾರೋಗ್ಯ ಪೀಡಿತರಿಗೆ ಹಾಗೂ ಅಂಗವಿಕಲ ಅಸಹಾಯಕರಿಗೆ ಸಹಾಯಧನ ವಿತರಿಸಲಾಯಿತು. ಶಿಕ್ಷಣದ ಬಗ್ಗೆ ನೆರವು ಕೋರಿ ಅರ್ಜಿ ಸಲ್ಲಿಸಿದ ಎಲ್ಲಾ ಬಡ ವಿದ್ಯಾರ್ಥಿಗಳಿಗೆ ಸುಮಾರು ಮೂರು ಲಕ್ಷದಷ್ಟು ಮೊತ್ತದ ದೇಣಿಗೆ, ಪ್ರತಿಭಾನ್ವತರಿಗೆ ಸುಮಾರು ಎರಡು ಲಕ್ಷ, ಹಾಗೂ ವೈದ್ಯಕೀಯ ನೆರವಿಗಾಗಿ ಮೂರು ಲಕ್ಷದಷ್ಟು ನೆರವು ಒಟ್ಟು 400 ಫಲಾನುಭವಿಗಳಿಗೆ ಸುಮಾರು ಎಂಟು ಲಕ್ಷದಷ್ಟು ಮೊತ್ತದ ಆರ್ಥಿಕ ನೆರವನ್ನು ವಿತರಿಸಲಾಯಿತು.

ವೇದಿಕೆಯಲ್ಲಿ ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶ್ರೀ ನಾಗೇಶ್ ಹೆಗ್ಡೆ, ಸಂಘದ ಗೌರವಾಧ್ಯಕ್ಷ ಕೆ.ಜಯರಾಮ್ ಶೆಟ್ಟಿ, ಕೋಶಾಧಿಕಾರಿ ತೋನ್ಸೆ ಮನೋಹರ ಶೆಟ್ಟಿ ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷರಾದ ಇಂದ್ರಾಳಿ ಜಯಕರ ಶೆಟ್ಟಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಮೋಹನ ಶೆಟ್ಟಿ ಮೂಡನಿಡಂಬೂರು ವರದಿ ವಾಚಿಸಿದರು.ಸಂಘದ ಉಪಾಧ್ಯಕ್ಷರಾದ ವಿ ಜಿ ಶೆಟ್ಟಿ. ಧನ್ಯವಾದ ಸಲ್ಲಿಸಿ, ತೋನ್ಸೆ ಸತೀಶ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಅಂದು ಬೆಳಿಗ್ಗೆ "ಸತ್ಯನಾರಾಯಣಪೂಜೆ", ಭಜನಾ ಕಾರ್ಯಕ್ರಮ ,ಅನ್ನಸಂತರ್ಪಣೆ ಹಾಗೂ ಉಡುಪಿಯ ಪ್ರಸಿದ್ಧ ಭಾರ್ಗವಿ ನೃತ್ಯ ತಂಡದಿಂದ "ಭಾವಯೋಗಗಾನ ನೃತ್ಯ" ಎಂಬ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಬಡಗುತಿಟ್ಟಿನ ಶ್ರೇಷ್ಠ ಕಲಾವಿದರ ಕೂಡುವಿಕೆಯಲ್ಲಿ "ಬೇಡರಕಣ್ಣಪ್ಪ" ಎಂಬ ಯಕ್ಷಗಾನ ನಡೆಯಿತು.

# Bunt's Sangha RNS Vidhyaniketan

## CONGRATULATIONS



KISHORE P REDDY



ATREYA R TODUR

Students of **Bunt's Sangha RNS Vidyaniketan** Kishore P Reddy won the silver medal and Atreya R Thodur won the Bronze medal , who represented India in the 12th International Open Taekwondo Championships at Saunsari district in Nepal which was conducted by IOFTC organising Committee.

It is indeed a proud moment for BSRNSV in the year 2017-18. The Management and the Principal congratulate the budding talents.

'ಸ್ನೇಹ ಚಿಂತನೆ' ಬಗೆಗೆ ತಮ್ಮ ಅಭಿಪ್ರಾಯ ಸಲಹೆ-ಸೂಚನೆಗಳನ್ನು ಬರೆದು ತಿಳಿಸಿ.

–ಸಂಪಾದಕ

# ಹೆಬ್ರಿ – ಅಜೆಕಾರು ವಲಯ ಬಂಟರ ಸಮಾವೇಶ





ಹೆಬ್ರಿ–ಅಜೆಕಾರು ಬಂಟರ ಸಂಘದ ಸಮಾವೇಶ ಮಾದರಿ, ಬಂಟ ಸಮಾಜದ ಸಮಗ್ರ ಮಾಹಿತಿಯನ್ನೊಳಗೊಂಡ ಕೈಪಿಡಿ ಹೊರತಂದಿರುವುದು ಶ್ಲಾಘನೀಯ ಎಂದು ಬೆಂಗಳೂರು ಬಂಟರ ಸಂಘದ ಅಧ್ಯಕ್ಷ ಶ್ರೀ ಡಿ. ಚಂದ್ರಹಾಸ್ ರೈಯವರು ಹೇಳಿದರು. ಹೆಬ್ರಿ ಶ್ರೀಮತಿ ಶೀಲಾ ಸುಬೋಧ ಬಲ್ಲಾಳ್ ಬಂಟರ ಭವನದಲ್ಲಿ ನಡೆದ ಬಂಟರ ಯಾನೆ ನಾಡವರ ಸಂಘ ಹೆಬ್ರಿ–ಅಜೆಕಾರು ವಲಯ ಇದರ ಬಂಟರ ಸಮಾವೇಶ ಉದ್ಘಾಟಿಸಿ, ಹೆಬ್ರಿ ಸಂಘದ ವತಿಯಿಂದ ಸಮ್ಮಾನ ಸ್ವೀಕರಿಸಿ ಮಾತನಾಡಿದರು.

ಬೆಂಗಳೂರು ಬಂಟರ ಸಂಘದ ಕಾರ್ಯದರ್ಶಿ ಶ್ರೀ ಜೆ. ಸಂತೋಷ್ ಶೆಟ್ಟಿಯವರು ಮಾತನಾಡಿ ಬಂಟರ ಸಂಘದಲ್ಲಿ ವರದಕ್ಷಿಣೆ ಕಡಿಮೆಯಾಗಿದೆ. ಆದರೆ ಮೆಹಂದಿ, ಡಿನ್ನರ್ ಅನ್ನುವ ಸಂಪ್ರದಾಯದಿಂದ ದುಂದುವೆಚ್ಚವಾಗುತ್ತದೆ. ಅದನ್ನು ನಿಲ್ಲಿಸುವ ಕೆಲಸವಾಗಬೇಕು. ಹೆಬ್ರಿ ಬಂಟರ ಸಂಘದ ಅಧ್ಯಕ್ಷ ಶ್ರೀ ಉದಯ ಶೆಟ್ಟಿಯವರ ನೇತೃತ್ವದಲ್ಲಿ ವಿಶೇಷ ಸಮಾಜ ಸೇವೆಗಳು ನಡೆಯುತ್ತಿದ್ದು ಸಂಘ ಇತರರಿಗೆ ಮಾದರಿಯಾಗಲಿದೆ. ಬಂಟ ಮಾಹಿತಿಯ ಕೈಪಿಡಿ ಬಿಡುಗಡೆ ಸುಲಭದ ಮಾತಲ್ಲ ಅಂತಹ ಸಾಧನೆ ಹೆಬ್ರಿಯಿಂದ ಆಗಿದೆ ಎಂದರು.

ವಿದ್ಯಾರ್ಥಿ ವೇತನ : ಹೆಬ್ರಿ ಅಜೆಕಾರು ವಲಯದ ಪ್ರತಿಭಾನಿತ್ವ ಬಂಟ ಸಮಾಜದ ವಿದ್ಯಾರ್ಥಿಗಳಿಗೆ ಬಂಟರ ಸಂಘ ಬೆಂಗಳೂರು, ಮಂಗಳೂರು ಹಾಗೂ ಹೆಬ್ರಿ ಸಂಘದಿಂದ ಒಟ್ಟು 1 ಲಕ್ಷ 21 ಸಾವಿರ ವಿದ್ಯಾರ್ಥಿ ವೇತನ ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಹೆಬ್ರಿ ಅಜೆಕಾರು ವಲಯದ ಸಮಗ್ರ ಮಾಹಿತಿಯನ್ನು ಒಳಗೊಂಡ ಬಂಟರ ಕುಟುಂಬ ಮಾಹಿತಿ ಕೈಪಿಡಿ ಬಿಡುಗಡೆ ಮತ್ತು ಸಂಘದ ವಾರ್ಷಿಕ ಮಹಾಸಭೆ ನಡೆಯಿತು.

ಬೆಂಗಳೂರು ಬಂಟರ ಸಂಘದ ಉಪಾಧ್ಯಕ್ಷರಾದ ಶ್ರೀ ಕೆ. ಬಾಲಚಂದ್ರ ಶೆಟ್ಟಿ, ಯುವ ಸಶಕ್ತೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ। ರೋಶನ್ ಕುಮಾರ್ ಶೆಟ್ಟಿ, ಶ್ರೀ ಅಶೋಕ್ ಕುಮಾರ್ ಶೆಟ್ಟಿ, ಡಾ। ಸಂತೋಷ್ ಕುಮಾರ್ ಶೆಟ್ಟಿ, ಶ್ರೀ ನೀರೆ ಕೃಷ್ಣ ಶೆಟ್ಟಿ, ಶ್ರೀ ಬಿ. ಕರುಣಾಕರ್ ಶೆಟ್ಟಿ, ಬಾನು ಪಿ ಬಲ್ಲಾಳ್, ಶ್ರೀ ಸಂದೀಪ್ ಎನ್ ಶೆಟ್ಟಿ, ಶ್ರೀ ಬಿ ಹರ್ಷ ಶೆಟ್ಟಿ, ಶ್ರೀ ವಾದಿರಾಜ ಶೆಟ್ಟಿ, ಶ್ರೀ ಶಂಕರ ಶೆಟ್ಟಿ, ಶ್ರೀ ಚಿರಂಜಿತ್ ಅಜಿಲ, ಶ್ರೀಮತಿ ಯಶೋದಾ ಶೆಟ್ಟಿ, ಶ್ರೀಮತಿ ನಿರ್ಮಲಾ ಎಸ್. ಹೆಗ್ಡೆ, ಶ್ರೀ ಪ್ರಕಾಶ್ ಶೆಟ್ಟಿ ಮತ್ತಿತ್ತರರು ಉಪಸ್ಥಿತರಿದ್ದರು.

ಸಂಘದ ಪ್ರಧಾನ ಕಾರ್ಯದರ್ಶಿ ಸೀತಾನದಿ ವಿಟ್ಠಲ್ ಶೆಟ್ಟಿ ಸ್ವಾಗತಿಸಿ, ಶ್ರೀ ನಿತ್ಯಾನಂದ ಶೆಟ್ಟಿ ಹಾಗೂ ಶ್ರೀ ಶಶಿಧರ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಸಮಾವೇಶದ ಸಂಚಾಲಕ ನವೀನ್ ಅಡ್ಯಂತಾಯ ವಂದಿಸಿದರು.

ಸಮಾರಂಭದ ಮೊದಲು ಸಮಾಜದವರಿಂದ ವೈಭವದ ಮೆರವಣಿಗೆ, ಕ್ರೀಡಾ ಕೂಟ, ಸಾಂಸ್ಕೃತಿಕ ಕಾರ್ಯಕ್ರಮ, ಬಂಟ ಶೈಲಿಯ ಭೋಜನ ನಡೆಯಿತು.

ಆರೋಗ್ಯ ಚಿಂತನೆ

## ಮನೆಮದ್ದು

# ಅರಶಿನ ಕಾಮಾಲೆ (ಜಾಂಡೀಸ್ ರೋಗ) ಮತ್ತು ಉಪಶಮನಗಳು

**ಕಾರಣಗಳು:** ರಕ್ತ ಹೀನತೆ ಇರುವವರು ಪಿತ್ತ ಪ್ರಕೋಪವಾಗುವ ಆಹಾರ ಹಾಗೂ ವಿಹಾರ ಮಾಡಿದಾಗ ಜಾಸ್ತಿಯಾಗಿ ಅರಶಿನ ಕಾಮಾಲೆ ರೋಗ ಉಂಟಾಗುತ್ತದೆ. ಇದರಿಂದ ರಕ್ತ ಹಾಗೂ ಮಾಂಸದಲ್ಲಿ ದೌರ್ಬಲ್ಯ ಕಂಡು ಬರುತ್ತದೆ.

**ಲಕ್ಷಣಗಳು:** ಕಣ್ಣುಗಳು, ಚರ್ಮ ಹಾಗೂ ಉಗುರುಗಳಲ್ಲಿ ಹಳದಿ ಬಣ್ಣ ಕಾಣಿಸುವುದು. ಮೂತ್ರದಲ್ಲಿ ಮತ್ತು ಮುಖದಲ್ಲಿ ಕಡು ಕೆಂಪು ಹಾಗೂ ಹಳದಿ ಬಣ್ಣವಾಗುವುದು, ಎದೆಯಲ್ಲಿ ಉರಿ, ಅಜೀರ್ಣ, ನಿಶ್ಯಕ್ತಿ, ಸುಸ್ತು, ಹಸಿವು ಹಾಗೂ ಬಾಯಿ ರುಚಿ ಇಲ್ಲದಿರುವುದು ಇದರ ಲಕ್ಷಣಗಳು..

## ಪರಿಹಾರಗಳು:

1. ಚೆನ್ನಾಗಿ ಪಕ್ವವಾದ ಹರಳೇ ಹಣ್ಣನ್ನು ಎರಡು ಹೋಳು ಮಾಡಿ ಅದಕ್ಕೆ ಜೀರಿಗೆ ಪುಡಿಯನ್ನು ತುಂಬಿ ಅದನ್ನು ಒಂದು ರಾತ್ರಿ ಇಬ್ಬನಿ ಬೀಳುವ ಸ್ಥಳದಲ್ಲಿ ಇಟ್ಟು ಅದರ ರಸವನ್ನು ಹದಿನೈದು ದಿನಗಳವರೆಗೆ ಸೇವಿಸಿದರೆ ಅರಶಿನ ಕಾಮಾಲೆ ರೋಗವು ಗುಣವಾಗುವುದು.
2. ಎಳೆ ಹಸಿಮೂಲಂಗಿಯ ಹೋಳುಗಳಿಗೆ ಕರಿಮೆಣಸಿನ ಪುಡಿ, ನಿಂಬೆರಸ, ಉಪ್ಪು ಸೇರಿಸಿ ತಿನ್ನುವುದರಿಂದ ಅರಶಿನ ಕಾಮಾಲೆ ವಾಸಿಯಾಗುತ್ತದೆ.
3. ಒಂದು ವಾರವರೆಗೆ ದೊಡ್ಡ ಪತ್ರೆಯ ಎಲೆಗಳನ್ನು ತಿಂದರೆ ಅರಶಿನ ಕಾಮಾಲೆ ಗುಣವಾಗುತ್ತದೆ.
4. ಬಲಿತಿರುವ ಕಬ್ಬನ್ನು ಸಾಕಷ್ಟು ತಿನ್ನುತ್ತಿದ್ದರೆ ಅರಶಿನ ಕಾಮಾಲೆ ರೋಗ ಬರುವುದಿಲ್ಲ.
5. ಕಲ್ಲಂಗಡಿ ಹಣ್ಣಿನ ರಸ ಮತ್ತು ಮಜ್ಜಿಗೆಯನ್ನು ಮಿಶ್ರಮಾಡಿ ಅದಕ್ಕೆ ಅಡಿಗೆ ಉಪ್ಪು ಸ್ವಲ್ಪ ಸೇರಿಸಿ ಕುಡಿಯುವುದರಿಂದ ಅರಶಿನ ಕಾಮಾಲೆ ಗುಣವಾಗುವುದು ಮತ್ತು ಉರಿಮೂತ್ರ ನಿವಾರಣೆಯಾಗುವುದು.
6. ಅರಶಿನ ಕಾಮಾಲೆ ಪರಿಹಾರಕ್ಕೆ ಚಿಕಿತ್ಸೆ ಪಡೆಯುತ್ತಿರುವ ಸಮಯದಲ್ಲಿ ಕುಸುಬಲು ಅಕ್ಕಿಯಿಂದ ಮೃದುವಾಗಿ ಅನ್ನ ತಯಾರಿಸಿ ಮೊಸರು ಅಥವಾ ಮಜ್ಜಿಗೆಯಲ್ಲಿ ಕಲಸಿ ಊಟಮಾಡುವುದರಿಂದ ಶೀಘ್ರಗುಣ ಕಂಡುಬರುತ್ತದೆ.
7. ಜೇನು ತುಪ್ಪದಲ್ಲಿ ನಾಲ್ಕೈದು ದಿನಗಳ ಕಾಲ ನೆನೆ ಹಾಕಿದ ಅನಾನಸ್ ಹಣ್ಣಿನ ಹೋಳುಗಳನ್ನು ದಿನಕ್ಕೆ ಎರಡು ಸಲದಂತೆ ಒಂದು ವಾರ ಸೇವಿಸಿದರೆ ಅರಳಿಣ ಕಾಮಾಲೆಯಲ್ಲಿ ಗುಣ ಕಂಡು ಬರುವುದು.
8. ಒಂದು ಟೀ ಚಮಚ ಒಣ ಶುಂಠಿಯ ಪುಡಿಯನ್ನು ಆಗ ತಾನೇ ಕರೆದ ಒಂದು ಲೋಟ ಹಸುವಿನ ಹಾಲಿಗೆ ಸೇರಿಸಿ ಚೆನ್ನಾಗಿ ಕದಡಬೇಕು. ಇದೇ ತರಹ ಒಂದು ವಾರ ಮಾಡಿ ಸೇವಿಸಿದರೆ ಅರಶಿನ ಕಾಮಾಲೆ ದೂರವಾಗುವುದು.

● ಡಾ. ಪೂಜಾ ಆದರ್ಶ ಶೇನವ

# ಶ್ರದ್ಧಾಂಜಲಿ



**ಶ್ರೀ ಸುಭೋದ್ ಶೆಟ್ಟಿ**
ಸದಸ್ಯತ್ವ ಸಂಖ್ಯೆ: CL6539

ಉಳ್ತೂರು ಶ್ರೀ ಸುಭೋದ್ ಶೆಟ್ಟಿಯವರು ದಿನಾಂಕ 06.01.2018ರಂದು ತಮ್ಮ 50ನೇ ವಯಸ್ಸಿನಲ್ಲಿ ನಿಧನರಾದರು. ಬಿಡದಿಯಲ್ಲಿ ಹೋಟೆಲ್ ಉದ್ಯಮ ನಡೆಸುತ್ತಿದ್ದ ಇವರು ತಮ್ಮ ಪತ್ನಿ ಆರ್ಡಿ ಶ್ರೀಮತಿ ಮಮತಾ ಶೆಟ್ಟಿ, ತಾಯಿ ಉಳ್ತೂರು ವನಜಾಕ್ಷಿ ಶೆಟ್ಟಿ, ಇಬ್ಬರು ಪುತ್ರಿಯರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ಎನ್.ಜಿ.ಇ.ಎಫ್‌ನ ನಿವೃತ್ತ ಎಕ್ಸಿಕ್ಯೂಟಿವ್ ಡೈರೆಕ್ಟರ್, ಮೊಳಹಳ್ಳಿ ಶ್ರೀ ಸೀತಾರಾಮ ಶೆಟ್ಟಿಯವರು ದಿನಾಂಕ 24.01.2018ರಂದು ತಮ್ಮ 84ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಮಾಂಬೆಟ್ಟು ಶ್ರೀಮತಿ ಸುಧಾ ಎಸ್. ಶೆಟ್ಟಿ, ಓರ್ವ ಪುತ್ರ, ಓರ್ವ ಪುತ್ರಿ, ಮೂವರು ಮೊಮ್ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಮೊಳಹಳ್ಳಿ ಶ್ರೀ ಸೀತಾರಾಮ ಶೆಟ್ಟಿ**
ಸದಸ್ಯತ್ವ ಸಂಖ್ಯೆ: CL001136



**ಶ್ರೀಮತಿ ಶಾಂತ ಎನ್. ಶೆಟ್ಟಿ**
ಸದಸ್ಯತ್ವ ಸಂಖ್ಯೆ: CL005768

ಇಡೂರು ಕುಂಜಾಡಿ ಶ್ರೀ ನಾಗೇಶ್ ಶೆಟ್ಟಿಯವರ ಧರ್ಮಪತ್ನಿ ಕೊರ್ಗಿ ಗುಡಾರ್‌ಮಕ್ಕಿ ಶ್ರೀಮತಿ ಶಾಂತ ಎನ್. ಶೆಟ್ಟಿಯವರು ದಿನಾಂಕ 27.12.2017ರಂದು ತಮ್ಮ 49ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ಯುಕೋ ಬ್ಯಾಂಕ್, ಕೆನರಾ ಬ್ಯಾಂಕ್ ಮತ್ತು ಐಡಿಬಿಐ ಬ್ಯಾಂಕ್‌ನ ಮಾಜಿ ಚೇರ್‌ಮೇನ್ ಶ್ರೀ ವಿ. ಪ್ರಭಾಕರ ಶೆಟ್ಟಿಯರ ಧರ್ಮಪತ್ನಿ ಶ್ರೀಮತಿ ಜಯಶ್ರೀ ಪಿ. ಶೆಟ್ಟಿಯವರು ದಿನಾಂಕ 31.01.2018ರಂದು ತಮ್ಮ 62ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಇಬ್ಬರು ಮೊಮ್ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀಮತಿ ಜಯಶ್ರೀ ಪಿ. ಶೆಟ್ಟಿ**
ಸದಸ್ಯತ್ವ ಸಂಖ್ಯೆ: CL2751



**ಶ್ರೀಮತಿ ಶ್ಯಾಮಲ ಎಸ್. ರೈ**
ಸದಸ್ಯತ್ವ ಸಂಖ್ಯೆ: CL00739

ಮೆರೆಮಜಲು ಶ್ರೀ ಸುಭಾಶ್ಚಂದ್ರ ರೈಯವರ ಧರ್ಮಪತ್ನಿ ಯಡತ್ತೋಡಿ ಶ್ರೀಮತಿ ಶ್ಯಾಮಲ ಎಸ್. ರೈಯವರು ದಿನಾಂಕ 8.01.2018ರಂದು ನಿಧನರಾದರು. ಇವರು ತಮ್ಮ ಪತಿ, ಇಬ್ಬರು ಪುತ್ರರು, ಓರ್ವ ಮೊಮ್ಮಗ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

# CANARA TOURS & TRAVELS PVT. LTD.


.....Good people to travel with

3 Days / 2 Nts pilgrimage Tour to

# VAISHNO DEVI

## FROM 17TH MARCH TO 19TH MARCH, 2018







